UNIVERSAL LIBRARY
OU_200193
UNIVERSAL LIBRARY

# ನಿಷ್ಕಾಮ ಯೋಗಿ

(ಸಾಮಾಜಿಕ ಕಿರುಕಾದಂಬರಿ)

ಬರೆದವರು

**ಎಸ್. ಬಿ. ವಸಂತರಾಜ**

ಪ್ರಕಾಶಕರು

ಶಾಂತಿ ಮಂದಿರ

**ಸಾಲಿಗ್ರಾಮ, ಮೈಸೂರು ಜಿಲ್ಲೆ**

ಮೊದಲ ಮುದ್ರಣ: ೧೯೪೯

ಬೆಲೆ: ೧೨ ಆಣೆ

ಮುದ್ರಕರು
**ಆರ್. ಎಸ್. ಹಬ್ಬು,**
ಉಷಾ ಪ್ರೆಸ್, ಮೈಸೂರು

# ಮುನ್ನುಡಿ

ತರುಣ ಮಿತ್ರರಾದ ಶ್ರೀ. ವಸಂತರಾಜರು ತಮ್ಮ ಕೃತಿಕನ್ಯೆಗೆ 'ಮುನ್ನುಡಿಯ ಮಾಂಗಲ್ಯ ತೊಡಿಸಿ' ಕನ್ನಡ ಕುವರಿಯಾಗೆಂದು ಹರಸಲು ನನ್ನ ಬಹು ಪ್ರೀತಿಯಿಂದ ಕೇಳಿದರು. ಹರಸುವುದಕ್ಕೆ ವಯಸ್ಸಿನ, ಅರಿವಿನ ಹಿರಿತನ ಬೇಕಾಗಿದ್ದರೆ ಅದು ನನ್ನಲ್ಲಿಲ್ಲ. ಆದರೆ ಒಳ್ಳೆಯದಾಗಲಿ ಎಂಬ ಕೋರಿಕೆ ಹರಕೆಯ ತಿರುಳಾಗಿದ್ದರೆ ಅದನ್ನು ನಾನು ಮನಃಪೂರ್ವಕವಾಗಿ ವ್ಯಕ್ತಪಡಿಸುತ್ತೇನೆ. 'ನಿಷ್ಕಾಮ ಯೋಗಿ' ಇದು ಇವರ ಮೊದಲನೆಯ ಕಾದಂಬರಿ. ಇದನ್ನು ನಾನು ಓದಿ, ಮೆಚ್ಚುವ ಭಾಗವನ್ನು ಮೆಚ್ಚಿದ್ದೇನೆ. ಇದರಲ್ಲಿ ಕೊರತೆಗಳೇನೆ ಇದ್ದರೂ ಕಾದಂಬರಿ ಲೇಖನದ ಶಕ್ತಿ ಈ ಲೇಖಕ ರಲ್ಲಿವೆ ಎಂಬುದನ್ನು ಕಂಡಿದ್ದೇನೆ. ಕನ್ನಡನಾಡಿನ ಸರ್ವಮುಖವಾದ ಜೀವನವು ತನ್ನೆಲ್ಲ ಜಟಿಲ ಹಾಗೂ ಸೂಕ್ಷ್ಮ ಸ್ವರೂಪದಲ್ಲಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳಬೇಕು. ಈ ವರೆಗೆ ಬೆಳಕಿಗೆ ಬಂದ ಕಾದಂಬರಿಗಳಲ್ಲಿ ಸರ್ವ ಮುಖತೆಗೆ ಸಾಕಷ್ಟು ಅವಕಾಶ ದೊರೆತಿಲ್ಲ. ಹೀಗಾಗಲು ಅನೇಕ ಸ್ವಾಭಾವಿಕ ವಾದ ಕಾರಣಗಳಿವೆ. ನಮ್ಮ ಕಾದಂಬರಿ ಇನ್ನೂ ಸಂಕ್ರಮಣಾವಸ್ಥೆಯಲ್ಲಿವೆ ಎಂಬುದು ಸ್ಪಷ್ಟವಾಗಿದೆ. ಇಂಥ ಕಾಲದಲ್ಲಿ ಶ್ರೀ. ವಸಂತರಾಜರು ತಾವು ನೋಡಿ ಅನುಭವಿಸಿದ ಜೀವನದ ಹೊಸ ಒಂದು ಮುಖವನ್ನು ಪ್ರಚಲಿತ ವಾದ ಒಂದು ಸಮಸ್ಯೆಯ ಚಿತ್ರಣದಲ್ಲಿ ನಿರೂಪಿಸಿದ್ದಾರೆ. ಮುಂದಿನ ಬರಿ ವಣಿಗೆಯಲ್ಲಿಯೂ ಇದೇ ದೃಷ್ಟಿಯನ್ನು ಅವರು ಇಟ್ಟುಕೊಂಡು ವಾಚಕ ವರ್ಗಕ್ಕೆ ಹೊಸ ಅನುಭವಪ್ರಪಂಚವನ್ನು ತೋರಲಿ. ಅವರು ತಮ್ಮ ಕಲೆಯನ್ನು ಪಳಗಿಸಿಕೊಂಡು ಕನ್ನಡಕ್ಕೆ ಚೆನ್ನಾದ ಕೃತಿಗಳನ್ನು ಸಲ್ಲಿಸಲಿ ಎಂದೂ ಅವರು ಕನ್ನಡ ಸಾಹಿತ್ಯದ ಮಹಾಮನೆಯ ಮೆಟ್ಟಲೇರುವಂತೆ ಕನ್ನಡ ರಸಿಕರು ಸ್ನೇಹದ ಹಾಗೂ ಸುವಿಮರ್ಶೆಯ ನೆರವನ್ನು ನೀಡಲಿ ಎಂದೂ ಹಾರೈಸುತ್ತೇನೆ.

ವಿಶ್ರಾಮಬಾಗ
೧೦ - ೮ - ೧೯೫೪

ರಂ. ಶ್ರೀ. ಮುಗಳಿ

## ಅರಿಕೆ

ಇದು ನನ್ನ ತೊದಲ್ನುಡಿ; ಬೆಳಕು ಕಾಣುತ್ತಿರುವ ಮೊದಲ ಕೃತಿ. ಕಥೆ ಬರೆಯುವ ಸಣ್ಣ ಪ್ರಯತ್ನವೊಂದನ್ನಿಲ್ಲಿ ಮಾಡಿದ್ದೇನೆ. ನಾನಿನ್ನೂ ಕನ್ನಡ ಸಾಹಿತ್ಯದಲ್ಲಿ ಅಕ್ಷರಾಭ್ಯಾಸ ಮಾಡುತ್ತಿರುವ ಹುಡುಗ. ಆದ್ದರಿಂದ ಹತ್ತಾರು ಕುಂದುಗಳನ್ನು ಮಾಡಿರಬಹುದು, ಅಲ್ಲಲ್ಲಿ ಎಡವಿರಬಹುದು, ಮುಗ್ಗರಿಸಿ ಮೂಗು ಮುರಿದುಕೊಂಡಿರಬಹುದು. ಆದರೆ ಸಹೃದಯರೂ, ಸಹನಶೀಲರೂ ಆದ ಕನ್ನಡ ವಾಚಕರು ಹಂಸಕ್ಷೀರ ನ್ಯಾಯದಂತೆ ಇಲ್ಲಿ ಅಲ್ಪಸ್ವಲ್ಪ ಗುಣಗಳು ಕಂಡುಬಂದರೆ ಅವುಗಳನ್ನು ಮಾತ್ರ ಗ್ರಹಿಸಿ, ಅವಗುಣಗಳಿದ್ದರೆ ತಿದ್ದಿ, ನನ್ನ ಗಮನವನ್ನು ಅತ್ತ ಸೆಳೆದು, ಮುಂದಿನ ಕೃತಿಯಲ್ಲಿ ತಿದ್ದಿಕೊಳ್ಳುವಂತೆ ಮಾಡಬೇಕಾಗಿ ನನ್ನ ವಿನಂತಿ.

ಅನಂತಯ್ಯನವರು ನನ್ನ ಆದರ್ಶ ಗುರುಗಳು. ನಮ್ಮ ನಾಡಿನ ಉಪಾಧ್ಯಾಯರುಗಳು ಆ ರೀತಿ ಇವಾರೆ; ಇಲ್ಲದೇ ಇದ್ದರೆ ಇರಬೇಕು ಎಂಬುದು ನನ್ನ ಹಂಬಲ. ರಾಮಾಶಾಸ್ತ್ರಿಗಳು ನನ್ನ ಕಲ್ಪನೆಯ ವ್ಯಕ್ತಿ. ಆ ಪಾತ್ರಕ್ಕೆ ಜೀವನದಲ್ಲಿ ಸ್ವಲ್ಪವೂ ಆಧಾರವಿಲ್ಲ. 'ಅನುಭವವಿಲ್ಲದ ಸಾಹಿತ್ಯ ಅರ್ಥವರಿಯದ ವೈದಿಕನ ಕಂಠಘೋಷ'ವಲ್ಲವೆ? ಆದರೆ ಹೊಸ ಕನ್ನಡ ಸಾಹಿತ್ಯಾಚಾರ್ಯ ಮಾಸ್ತಿಯವರು ಹಿಂದೆಯೇ ತಿಳಿಸಿದರು 'ಕಲ್ಪನೆ ವಾಸ್ತವಿಕವಾಗಿ ಕಂಡಾಗಲೇ ಸಾಹಿತಿಯ ಕಲ್ಪನಾಶಕ್ತಿ ಸಾರ್ಥಕವಾಗುವುದು'. ಹಾಸ್ಯರಸಕ್ಕೋಸ್ಕರ ಆ ಪಾತ್ರವನ್ನು ಉಪಯೋಗಿಸಿಕೊಂಡಿದ್ದೇನೆ. ಅಭಯಕುಮಾರ ರತ್ನಮಾಲೆಯರ ಪ್ರೇಮ ಇಂದಿಲ್ಲದಿದ್ದರೆ ನಾಳಿನ ಸಮಾಜದಲ್ಲಾದರೂ ಸಾಮಾನ್ಯವಾದೀತು. 'ಸಾಹಿತಿ ಆದರ್ಶ ಚಿತ್ರಗಳನ್ನೇ ಸಮಾಜದ ಮುಂದಿಡಬೇಕು' ಎಂಬುದು ಮಹಾಜ್ಞಾನಿ ಪ್ಲೇಟೋವಿನ ಅಭಿಮತ.

ಅಂತೂ ಕೃತಿಯನ್ನು ನಿಮ್ಮ ಕೈಯಲ್ಲಿ ಇಟ್ಟಿದ್ದೇನೆ. ನಿಮ್ಮ ಆದರವನ್ನು ಈ ಪುಟ್ಟ ಪುಸ್ತಕ ಬಯಸುತ್ತದೆ.

ನನ್ನ ಪ್ರಾರ್ಥನೆಯನ್ನು ಮನ್ನಿಸಿ ಪ್ರೊ|| ರಂಗನಾಥ ಶ್ರೀನಿವಾಸ ಮುಗಳಿ ಅವರು ನನ್ನ ಕೃತಿಗೆ ಮುನ್ನುಡಿಯನ್ನು ಬರೆದು ಹರಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು.

ಪುಸ್ತಕವನ್ನು ಮುದ್ದಾಗಿ ಮುದ್ರಿಸಿಕೊಟ್ಟ ಉಷಾ ಪ್ರೆಸ್ಸಿನ ಒಡೆಯರಾದ ಆರ್. ಎನ್. ಹಬ್ಬು ಅವರಿಗೆ ನನ್ನ ಕೃತಜ್ಞತೆಗಳು.

ಸಾಲಿಗ್ರಾಮ
ತಾ|| ೧೨-೮-೧೯೪೯

**ಎಸ್. ಬಿ. ವಸಂತರಾಜ**

## ವಸಂತರಾಜರ ಮುಂದಿನ ಕೃತಿಗಳು

೧. **ಸಮಾಜೋದ್ಧಾರಿ**
(ಸಾಮಾಜಿಕ ಕಾದಂಬರಿ)

೨. **ನಿರ್ಭಾಗ್ಯ ಹೆಣ್ಣು**
(ಸಾಮಾಜಿಕ ಕಾದಂಬರಿ)

೩. **ಅತ್ತೆಯ ಮನೆಯಲ್ಲಿ**
(ಹೊಸದಾಗಿ ಮದುವೆಯಾದ ನಲ್ಲನಲ್ಲೆಯರ ದಿನಚರಿಗಳನ್ನು ಚಿತ್ರಿಸುವ ಕೃತಿ)

೪. **ಅಹಿಂಸಾ ಜ್ಯೋತಿ ಮಹಾವೀರ**
(ಕಾದಂಬರಿಯಂತೆ ಹರಿಯುವ ಚಾರಿತ್ರಿಕ ಜೀವನ ಚರಿತ್ರೆ)

ಕಣ್ಮರೆಯಾದರೂ ಮನಮರೆಯಾಗದ ಗೆಳೆಯ

**ನಾಗಣ್ಣನಿಗೆ**

# ನಿಷ್ಕಾಮ ಯೋಗಿ

## ೧

"ಹೊಸ ಮೇಷ್ಟ್ರು ಹೇಗಿದ್ದಾರೆ ರತ್ನ?"

"ಇದಾರೆ ಸುಮಾರಾಗಿ!"

"ಅಂದರೇನೆ?"

"ಅಷ್ಟೇನು ಚೆಂದಾಗಿಲ್ಲಾಂತ."

"ಚೆಂದಾಗಿಲ್ಲಾಂದ್ರೇನೆ?"

"ಮನ್ಮಥನಾಗಿಲ್ಲಾಂತ!"

"ಮನ್ಮಥನಾಗಿಲ್ಲದಿದ್ದರೂ ಚಿಂತೆಯಿಲ್ಲ, ಮಂಗನಾಗಿಲ್ಲವಲ್ಲ; ನೀವು ಹೆಂಗಸರಿಗೆ ಎಲ್ಲ ವ್ಯಕ್ತಿಗಳನ್ನೂ, ವಸ್ತುಗಳನ್ನೂ ಬಣ್ಣ ಬೆಡಗು, ರೂಪುಗಳ ಮೇಲೆ ಬೆಲೆ ಕಟ್ಟುವುದು ಗೊತ್ತೇ ಹೊರತು ಮತ್ತೇನಿಲ್ಲ" ಎಂದನು ಅಭಯ ಕುಮಾರ.

ಇಬ್ಬರೂ ನದಿಯ ಅಂಚಿನಲ್ಲಿ ನಡೆದುಬರುತ್ತಿದ್ದರು. ಕಾವೇರಿ ಕಿಂಕಿಣಿಯಂತೆ ಕುಣಿಕುಣಿದು ನುರುಜು ಕಲ್ಲುಗಳ ಮೇಲೆ ಗೆಜ್ಜೆಯ ಸಪ್ಪಳಮಾಡಿಕೊಂಡು ಹರಿದುಹೋಗುತ್ತಿದ್ದಳು. ನದಿಯಲ್ಲಿ ಹರಡಿದ್ದ ಕಲ್ಲು ಬಂಡೆಗಳಿಗೆ ನೀರು ತಾಗಿದಾಗ ಅದರಿಂದ ಉತ್ಪತ್ತಿಯಾದ ನೀರಿನ ಮಣಿಗಳು ದಡಕ್ಕೆ ಬಂದು ಬಡಿಯುತ್ತಿದ್ದವು. ಆಗಾಗ್ಗೆ ಅಭಯ ರತ್ನಮಾಲೆಯರಿಬ್ಬರ ಮುಖಗಳ ಮೇಲೆಯೂ ಬೀಳುತ್ತಿದ್ದವು. ಅದೆ ತಾನೆ ಮುಳುಗುತ್ತಿದ್ದ ಸೂರ್ಯನ ಸುನಹಲಿ ರಶ್ಮಿಗಳು ಆ ಯುವಕ ಯುವತಿಯರ ಎಳೆಯ ಮುಖಗಳ ಮೇಲೆ ನಲಿದಾಡುತ್ತಿದ್ದವು. ಆದರಿಂದ ಅವರ ಮುಖದ ಮೇಲಿದ್ದ ನೀರೆಲ್ಲಾ ಓಕುಳೀಬಣ್ಣ ತಾಳಿತ್ತು. ಸ್ವಲ್ಪ ದೂರ ಹಾಗೆಯೇ ನಡೆದುಬಂದು ಡೆಲ್ಲೀ ಗೇಟಿನ ಹತ್ತಿರ ಕುಳಿತರು. ಒಮ್ಮೆ ಕಾವೇರಿಯ ಕಡೆ ದಿಟ್ಟಿಸಿ ನೋಡಿದರು. ಕೋಮಲಾಂಗಿಯೋರ್ವಳು ತನ್ನ ಕಾಂತನ ಕತ್ತನ್ನು ಅಪ್ಪಿ, ಆವರಿಸಿ, ಬಳಸಿ, ಬಾಚಿ, ತನ್ನಿನಿಯನ ಪ್ರೇಮಕ್ಕೆ ಸೆರೆ ಬಿದ್ದಿರುವಂತೆ ಕಾವೇರಿ ಕವಲೊಡೆದು, ಎರಡಾಗಿ, ಇಬ್ಭಾಗವಾಗಿ ತನ್ನ ಬಾಹುಬಂಧನದಿಂದ

ಶ್ರೀರಂಗಪಟ್ಟಣವನ್ನು ಆಪ್ಪಿದೆ. ವಿಷ್ಣುವರ್ಧನನ ಕೆಲವು ಶಿಷ್ಯರು ಕಾವೇರಿಯ ದಡದಲ್ಲಿ ಅಷ್ಟ ಗ್ರಾಮಗಳನ್ನು ಸ್ಥಾಪಿಸಿದರು; ವಿಜಯನಗರದ ಮಾಂಡಲಿಕ ತಿಮ್ಮಣ್ಣ ತನ್ನ ಮನದೇವರ ಹೆಸರಿನಲ್ಲಿ ಶ್ರೀರಂಗನಾಥ ದೇವಾಲಯವನ್ನು ಕಟ್ಟಿಸಿದ; ಸಿಪಾಯಿಯಿಂದ ಸರದಾರನಾಗಿ, ಕೊನೆಗೆ ರಾಜ್ಯಭಾರ ಮಾಡಿದ ಹೈದರು; ಕೋಟೆ ಕೊತ್ತಲುಗಳನ್ನು ಭದ್ರಪಡಿಸಿ ಆಂಗ್ಲರನ್ನು ಕನಸಿನಲ್ಲಿಯೂ ಬೆದರಿಸಿದ ಟೀಪೂಸುಲ್ತಾನನು. ಅವನಿಂದ ಆಂಗ್ಲರ ಕೈಗೆ ಶ್ರೀರಂಗಪಟ್ಟಣ ಹೋಯಿತು. ಮತ್ತೆ ಅವರಿಂದಲೂ ಬಿಡುಗಡೆಯಾಯಿತು. ಇಷ್ಟಾದರೂ ಏನೂ ಬದಲಾವಣೆಯಾಗದೆ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುತ್ತಾ ಕಾವೇರಿ ಹರಿದುಹೋಗುತ್ತಿದ್ದಾಳೆ.

"ನಾ ಕೇಳಿದ್ದು ಅವರ ರೂಪನ್ನಲ್ಲ ರತ್ನ; ಉಪಾಧ್ಯಾಯರ ರೂಪು ಕಟ್ಟಿಕೊಂಡು ನಮಗೇನು; ಅವರೇಗೆ ಪಾಠ ಹೇಳಿಕೊಡುತ್ತಾರೆ? ಸಿಡುಕರೊ ಅಥವ ಶಾಂತಿವಂತರೊಂತ?"

"ಹಾಗ! ಹಾಗಾದರೆ ಸರಸ್ವತಿಯೇ ಇಂದು ನಮ್ಮ ಸ್ಕೂಲಿಗೆ ಬಂದಿದ್ದರೆ ಹಾರ್ಟ್ ಫೆಲ್ಯೂರಾಗಿ ಸತ್ತೋಗ್ಬಿಡ್ತಿದ್ಲು."

"ಅಂದ್ರೇನು ಬಿಡಿಸಿ ಹೇಳು ರತ್ನ?"

"ಕೇವಲ ಎರಡು ಮೂರು ದಿನದ ಕೂಸು ತಲೆಯೆತ್ತಿ ನೇರವಾಗಿ ನಡೆದರೆ ತಾಯ ಸ್ಥಿತಿ ಏನಾಗಬಹುದೋ, ಅದೇ ರೀತಿ ಇನ್ನೂ ಉಪಾಧ್ಯಾಯ ವೃತ್ತಿಗೆ ಸೇರಿ ಎರಡು ಮೂರು ದಿನಗಳಾಗಿಲ್ಲ, ಆಗಲೆ ಒಳ್ಳೇ ನುರಿತ ಮೇಷ್ಟ್ರಂಗೆ ಪಾಠ ಹೇಳುವ ಅನಂತ ಉಪಾಧ್ಯಾಯರನ್ನು ನೋಡಿ ಸರಸ್ವತಿಯೂ ಗಾಬರಿಯಾಗುವುದರಲ್ಲಿ ನನಗೇನು ಸಂಶಯವೇ ಇಲ್ಲ, ಅಭಯ."

"ನೋಡಿದಾ ರತ್ನ! ಇದನ್ನೇ ನಿನ್ನ ಬಾಯಿಂದ ನಾ ಕೇಳಬೇಕೆಂದಿದ್ದು; ಈಗಲಾದರೂ ಒಪ್ಪಿಕೊಂಡ ಸಾಕ್ರೆಟಿಸ್ಸಿನ ತತ್ವವನ್ನು 'ಯಾವ ವಸ್ತು ಉಪಯೋಗಕರವೋ ಅದೇ ಸೌಂದರ್ಯ ವಸ್ತು' ಎಂಬುದನ್ನು" ಎಂದನು ಅಭಯ.

ಅಲ್ಲೇ ಬಹಳ ಹೊತ್ತು ಇಬ್ಬರೂ ಕುಳಿತರು.

"ಪಾಠ ಓದಿಕೋಬೇಕು ನಡೀ ಅಭಯ" ಎಂದು ರತ್ನಮಾಲೆ ಹೇಳಿದ ಮೇಲೆ ಇಬ್ಬರೂ ಮನೆಯ ಕಡೆ ಎದ್ದುಬಂದರು.

"ಎಷ್ಟು ಹೊತ್ತಾಗಿದೆಯೋ! ನಿನ್ನ ಕಣ್ಣು ಇಂಗೋಗಿದೆಯೇನೊ? ದೀಪ ಹಚ್ಚಿ ಎರಡು ಗಂಟೆಯಾಯಿತು ಊಟ ಮಾಡ್ದೇ ಎಲ್ಲಾಳಾಗೋಗಿದ್ದೊ" ಎಂದು ಚಿಂದವ್ವನವರು ರೇಗಾಡತೊಡಗಿದರು. ಚಿಂದವ್ವನವರು ವಯಸ್ಸಾದವರು. ಆಚಾರ ನಿಯಮಗಳ ಮಧ್ಯೆ ಬೆಳೆದುಬಂದ ವ್ಯಕ್ತಿ. "ನನ್ನ ಬುರುಡೆ ಇರೋವರ್ಗ್ಗಾದ್ರೂ ಈ ಅನಾಚಾರ ಬೇಡ್ರೊ" ಎನ್ನುತ್ತಿದ್ದರು ಆಗಾಗ್ಗೆ.

"ಇಲ್ಲೇ ಆಟ ಆಡ್ತಾ ಇದ್ದೆ ಅಜ್ಜಿ; ಹೊಸ ಮೇಷ್ಟ್ರು ಬಂದಿದ್ದರು. ಅವರ ಕೂಡ ಮಾತಾಡ್ತಾ ಇದ್ದೆ" ಎಂದು ಜಾರಿಕೊಂಡ ಅಭಯ.

ಕೈಕಾಲು ತೊಳೆದು ಅಡಿಗೆಯಮನೆಗೆ ಅಭಯ ಬಂದ. ಅವನ ತಾಯಿ ಗುಣಾವತಿಯವರು ರಾತ್ರಿಯ ಹಾಲನ್ನು ಕಾಯಿಸಲು ಒಲೆ ಹತ್ತಿಸುತ್ತಿದ್ದರು.

"ಗುಣಾವತೀ ಒಂದು ಸ್ವಲ್ಪ ಅರಳಿಟ್ಟು ಕಲಸಿಕೊಡು ಅಭಯನಿಗೆ" ಎಂದು ಚಿಂದವ್ವನವರು ಹಟ್ಟಿಯಿಂದ ಕೂಗಿಕೊಂಡರು.

ತಾಲ್ಲೋಕ್ ಆಫೀಸಿನ ಗೆಳೆಯರೊಡನೆ ಗಂಜಾಮಿನ ಕಡೆ ಗಾಳೀ ಸವಾರಿಗೋಗಿದ್ದ ನಾಭಿರಾಜಯ್ಯನವರು ಮನೆಗೆ ಬಂದರು. ಕೋಟು ತೆಗೆದು ಬಚ್ಚಲುಮನೆಯಲ್ಲಿ ಬಾಯಿ ಮುಕ್ಕಳಿಸಿ ತಿಂಡಿ ತಿನ್ನಲು ಅಡಿಗೆಯ ಮನೆಗೆ ಬಂದರು. ಅಡಿಗೆಮನೆಯಲ್ಲಿ ಪಕ್ಕದ ಮನೆ ಸೀನಕ್ಕ ಗುಣಾವತಮ್ಮನವರ ಹತ್ತಿರ ಮಾತನಾಡುತ್ತಿದ್ದಳು.

ಅನ್ನ ಸ್ವಲ್ಪ ಕಡಿಮೆಯಾದರೆ ಪಕ್ಕದ ಮನೆಗೆ ಬಂದು ಒಂದು ಬಟ್ಟಲು ಅನ್ನವನ್ನೋ ಅಥವ ಒಂದು ರೊಟ್ಟಿಯನ್ನೋ ಇಸಿದುಕೊಂಡು ಹೋಗುವ ರೂಢಿ ಸೀನಕ್ಕನದು. ಆದ್ದರಿಂದಲೇ ಮೂರು ವರ್ಷಗಳ ಕೆಳಗೆ ಒಂದು ಲಕ್ಷ ಆಸ್ತಿಯಿದ್ದದ್ದು ಈಗ ಒಂದೂ ಕಾಲು ಲಕ್ಷ ಆಗಿದೆ. ಪ್ರತಿನಿತ್ಯವೂ ಕಡಿಮೆ ಅಕ್ಕಿ ತೊಳೆಯುವ ಅಭ್ಯಾಸ ಸೀನಕ್ಕನದು. ಅವಳು ರೇಷನ್ನಿನಲ್ಲಿ ಅಕ್ಕಿ ತರಬೇಕಾಗಿರಲಿಲ್ಲ. ಪಟ್ಟಣದ ಬೈಲಿನಲ್ಲಿ ಇಪ್ಪತ್ತು ಮೂವತ್ತು ಎಕರೆ ಜಮೀನಿದೆ. ಆದರೂ ಪ್ರತಿದಿನ ಅರ್ಧ ಸೇರಿಗಿಂತ ಹೆಚ್ಚಿಗೆ ಅಕ್ಕಿ ಖರ್ಚು ಮಾಡುತ್ತಿರಲಿಲ್ಲ. ಇಂದು ಮನೆಯಲ್ಲಿ ಅನ್ನ ಸಾಲಲಿಲ್ಲವೆಂದು ಗುಣಾವತಮ್ಮನವರ ಹತ್ತಿರ ರೊಟ್ಟಿ ತೆಗೆದುಕೊಂಡುಹೋಗಲು ಬಂದಿದ್ದಾಳೆ.

"ಗುಣಾವತಮ್ಮನವರೆ ಸ್ವಲ್ಪ ಅನ್ನ ಸಾಲದಂತಾಗಿತ್ತು, ಯಜಮಾನರು ತಿಂಡಿಗೆ ಕುಳಿತಿದ್ದಾರೆ. ಒಂದು ರೊಟ್ಟಿ ಇದ್ದರೆ ಕೊಡಿ" ಎಂದಳು ಸೀನಕ್ಕ.

"ಬೆಳಗ್ಗೆ ರೊಟ್ಟಿನೇ ಮಾಡ್ಲಿಲ್ಲ ನೋಡಿ ಸೀನಕ್ಕ, ಅರಳಿಟ್ಟು ಕಲ್ಸಿದೇನೆ. ಬೇಕಿದ್ರೆ ಅದನ್ನೆ ಸ್ವಲ್ಪ ತೆಗೆದುಕೊಂಡು ಹೋಗಿ" ಎಂದರು ಗುಣಾವತಮ್ಮನವರು.

"ಅದನ್ನೇ ಬಟ್ಲಲ್ಲಿ ಹಾಕ್ಕೊಡಿ" ಎಂದು ಬಟ್ಟಲನ್ನು ಸೀರೆಯ ಸೆರಗಿನಲ್ಲಿ ಮುಚ್ಚಿಕೊಂಡು ಅಡಿಗೆಮನೆಯಿಂದ ಹೊರಬಿದ್ದಳು ಸೀನಕ್ಕ. ಹಟ್ಟಿಯಲ್ಲಿ ಕುಳಿತಿದ್ದ ಚೆಂದವ್ವನಿಗೆ "ಇದೇನ್ರಜ್ಜಿ ಇಷ್ಟೊತ್ತಿನಲ್ಲಿ ನಿಮ್ಮ ಹುಡ್ಗ ಉಣ್ತಿದ್ದಾನೆ" ಎಂದು ಹೇಳಿ ನಡೆದುಹೋದಳು ಸೀನಕ್ಕ.

"ಇದ್ಯೇನೆ ಗುಣಾವತೀ ನಿನ್ನ ಅವಾಂತರ? ನಾವೇನು ಮನೇಲಿ ಇರಬೇಕೋ ಬೇಡವೋಂತೀಯೋ?"

"ಏನವ್ವ ಅದು" ಎಂದರು ನಾಭಿರಾಜಯ್ಯನವರು.

"ನೋಡೋ ನಾಭಿ, ನಿನ್ನ ಹೆಂಡ್ತಿ ಅಗಸ್ರು ತಾಳ ಹಾಕ್ಕೊವೊತ್ತಿನಲ್ಲಿ ಉಣ್ಣಕ್ಕಿಕ್ತಾವ್ಳೆ" ಎಂದರು ಚೆಂದವ್ವನವರು.

"ಯಾರಜ್ಜಿ ನಿನಗೇಳದ್ದು, ಅರಳಿಟ್ಟು ತಿಂದುಕೊಂಡು ಹಾಲು ಕುಡಿದು ಬಂದಿದ್ದೇನೆ, ಬೇಕಿದ್ದರೆ ಕೈ ಮೂಸಿ ನೋಡು" ಎಂದು ಅಭಯ ಹೇಳಿದ ಮೇಲೆ ಮಾತು ಮುಕ್ತಾಯವಾಯಿತು.

ಇತ್ತ ರತ್ನಮಾಲೆ ಮನೆಗೆ ಬಂದರೆ ಅವರಜ್ಜಿ ಸುಬ್ಬಮ್ಮನವರು "ಊಟದೊತ್ಕೆ ಸರಿಯಾಗಿ ಹಾಜರಾದಲ್ಲೆ, ಒನ್ಗಲೆ ಎಲ್ಲಿ ಕುಣಿಯಕ್ಕೋಗಿದ್ದೆ ರತ್ನ" ಎಂದು ಗದರಿಸಿಕೊಂಡರು.

"ಇಲ್ಲೇ ರಂಗನಾಥನ ಗುಡಿಯ ಮುಂದೆ ಉತ್ಸವ ನೋಡುತ್ತಾ ನಿಂತಿದ್ದೆ ಅಜ್ಜಿ" ಎಂದಳು ರತ್ನಮಾಲೆ.

ಕೋರ್ಟಿನಿಂದ ಸುಸ್ತಾಗಿ ಬಂದ ಶ್ರೀಕಂಠಯ್ಯನವರು ಕೋಟು ಪೇಟ ತೆಗೆದು ಮಗಳನ್ನು ಹತ್ತಿರ ಕರೆದು ಕೂರಿಸಿಕೊಂಡರು. "ಏನಮ್ಮ ರತ್ನ ಅದು; ನಿಮ್ಮಜ್ಜಿ ಏಕಮ್ಮ ರೇಗ್ತಾ ಇದ್ರು" ಎಂದರು.

"ನೋಡಣ್ಣ ಸ್ವಲ್ಪ ಮನೆಗೆ ಬರುವುದು ತಡವಾದ್ದಕ್ಕೆ ಕೂಗಾಡ್ತರಣ್ಣ."

"ಹೋಗಲಿ ಬಿಡಮ್ಮ ರತ್ನ, ಅವರೆಲ್ಲಾ ಹಿಂದಿನವರು; ಹಾಗಾಡುವುದು ಅವರ ಸ್ವಭಾವ" ಎಂದರು ಲಾಯರ್ ಶ್ರೀಕಂಠಯ್ಯನವರು.

ಶ್ರೀಕಂಠಯ್ಯನವರು ಶ್ರೀರಂಗಪಟ್ಟಣದ ಹೆಸರಾದ ಲಾಯರು. ಸರ್ಕಾರದವರು ಕೆಲಸ ಕೊಡಲಿಲ್ಲವೆಂತಲೊ ಅಥವ ತಮ್ಮೂರಿನ ವೃತ್ತಿ ತಾವು ಬಿಡದೆ ಅನುಸರಿಸಬೇಕೆಂತಲೋ ಶ್ರೀಕಂಠಯ್ಯನವರು ಲಾಯರ ವೃತ್ತಿ ಕೈಗೊಂಡಿದ್ದರು. ಶ್ರೀರಂಗಪಟ್ಟಣದ ಯಾವ ಮನೆಯ ಮುಂದೆ ನೋಡಲಿ ಬಿ.ಎ.,ಬಿ.ಎಲ್. ಅಡ್ವೊಕೇಟ್ ಎಂದು ಬರೆದಿರುತ್ತೆ. ಮನೆಯಲ್ಲಿ ಒಲೆ ಉರಿಯದಿದ್ದರೂ ಕೋರ್ಟಿನ ಬಳಿ ಕಾಫಿಗೆ ಕಾಸಿಲ್ಲದಿದ್ದರೂ ಬಿ.ಎ.,ಬಿ.ಎಲ್. ಬೋರ್ಡಿಗೆ ಪಾಲೀಶ್ ಕಾಣುತ್ತದೆ. ಇವಕ್ಕೆ ಶ್ರೀಕಂಠಯ್ಯನವರು ಅಪವಾದ. ಅವರು ಲಾಯರ್‌ತನದಲ್ಲಿ ಬಲು ಚುರುಕು. ಅದರಿಂದಲೇ ಕಕ್ಷಿಗಾರರೆಲ್ಲಾ ಅವರನ್ನೇ ಹುಡುಕಿಕೊಂಡು ಬರುತ್ತಿದ್ದರು. ಇಷ್ಟಾದರು ಅವರ ಲಾಯರತನ ಅವರ ತಾಯಿ ಸುಬ್ಬಮ್ಮನ ಮುಂದೆ ಬೇಯುತ್ತಿರಲಿಲ್ಲ.

"ಬಾಮ್ಮ ರತ್ನ ಹುಚ್ಚಿಯಾಗೆ ಹಿರಿಯರಿಗೆ ಜವಾಬು ಕೊಡಬಾರದು" ಎಂದು ತಮ್ಮ ತಾಯ ಕಣ್ಣೊರೆಸುವ ಮಾತನಾಡಿದರು ಶ್ರೀಕಂಠಯ್ಯನವರು.

೨

ಶ್ರೀರಂಗಪಟ್ಟಣದಲ್ಲೆಲ್ಲಾ ಗಂಧದಕುಡಿ ರಸ್ತೆ ಅಥವ ಅಂಚೆತಿಪ್ಪಯ್ಯನ ರಸ್ತೆಯೇ ಬಲು ಅಂದವಾದುದು. ಅದರ ಸೆರಗಿನಲ್ಲೇ ರಂಗನಾಥಸ್ವಾಮಿ ಶಯನಾಸನದಲ್ಲಿ ಮಲಗಿದ್ದಾನೆ. ಅದರ ಸುತ್ತ ಭವ್ಯವಾದ ಭದ್ರವಾದ ಗುಡಿಯಿದೆ. ಸಾವಿರಾರು ಯಾತ್ರಿಕರು ಬಂದುಹೋಗುವ ಸ್ಥಳವದು. ಈಗ ನೊನ್ನೆ ನೊನ್ನೆ ತಾನೆ ಕೇವಲ ಮೂವತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಗುಡಿಯ ಗೋಪುರಕ್ಕೆ ಬಣ್ಣ ಬಳಿಸಿದ್ದಾರೆ. ರಸ್ತೆಯಲ್ಲಿ ಸ್ವಲ್ಪ ದೂರ ನಡೆದು ಬಂದರೆ ಒಂದು ಫೌಂಟನ್ನು ಸಿಗುತ್ತದೆ. ಹೊಳೆ ಹತ್ತಿರ ದಲ್ಲಿರುವುದರಿಂದಲೋ ಏನೋ ಫೌಂಟನ್ನಿನಲ್ಲಿ ಸದಾ ನೀರಿಲ್ಲದೆ ಬಾಡಿದ ಕಿತ್ತಲೀ ಹಣ್ಣಿನ ಸಿಪ್ಪೆಯ ರೂಪ ತಾಳಿರುತ್ತದೆ. ಅದರ ಅಕ್ಕಪಕ್ಕದ ದಡಗಳಲ್ಲೇ ತಾಲ್ಲೋಕ್ ಆಫೀಸು, ಚೌಲ್ಟ್ರಿಗಳಿವೆ. ಇನ್ನೂ ಮುಂದೆ ಬಂದರೆ ಹಳದೀ ಬಣ್ಣದ ಬಿಲ್ಡಿಂಗೊಂದು ಸಿಕ್ಕುತ್ತದೆ. ಅದೇನಿರಬಹುದು ಸ್ವಲ್ಪ ಊಹಿಸಿ ನೋಡೋಣ ? ಹಿಂದೆ ಜೈಲಾಗಿದ್ದು ಕೈದಿಗಳ ನಿವಾಸಸ್ಥಾನ ವಾಗಿತ್ತು. ಈಗಿನ ವಿದ್ಯಾಭ್ಯಾಸವೂ ಜೈಲುವಾಸಕ್ಕಿಂತೇನೂ ಕಡಿಮೆಯಿಲ್ಲ ವೆಂಬುದು ಸತ್ಯವೆಂದು ಸಾರಲು ಹಿಂದಿನ ಜೈಲೇ ಇಂದಿನ ಹೈಸ್ಕೂಲಾಗಿದೆ.

ಅಂತಹ ಹೈಸ್ಕೂಲಿನ ತರಗತಿಯಲ್ಲಿ ಅನಂತ ಉಪಾಧ್ಯಾಯರು ಆಂಗ್ಲ ಪಾಠ ಮಾಡುತ್ತಿದ್ದಾರೆ. ಲಂಚಕ್ಕೆ ತೌರುಮನೆಯಾದ ಎಕ್ಸೈಜ್, ಫುಡ್ ಮತ್ತು ಟೆಕ್ಸ್ಟೈಲ್ ಡಿಪಾರ್ಟ್ಮೆಂಟುಗಳಲ್ಲಿ ಕೆಲಸ ಕೊಡುತ್ತೇವೆ ಬನ್ನಿ ಎಂದು ಸರ್ಕಾರದವರು ಪದೇ ಪದೇ ಒತ್ತಾಯ ಮಾಡುತ್ತಿದ್ದರೂ ಅನಂತ ಉಪಾಧ್ಯಾಯರು ಕಿವಿಗೊಡದೆ ವಿದ್ಯಾ ಇಲಾಖೆಗೆ ಸೇರಿಕೊಂಡರು. ಚಿಕ್ಕಂದಿನಿಂದಲೂ ಉಪಾಧ್ಯಾಯನಾಗಬೇಕೆಂಬುದು ಅವರ ಆಸೆಯಾಗಿತ್ತಂತೆ. ಸೇವೆ ಮಾಡುವುದಕ್ಕೆ, ಅದರಲ್ಲೂ ನಿಷ್ಕಾಮ ಸೇವೆಮಾಡಲು ಇರುವ ಏಕಮಾತ್ರ ಕ್ಷೇತ್ರವೆಂದರೆ ಸದ್ಯಕ್ಕೆ ವಿದ್ಯಾಕ್ಷೇತ್ರ. ಇಲ್ಲಿ ಲಂಚ ರುಷುವತ್ತುಗಳ ಕಾಟವಿಲ್ಲ. ಸರ್ಕಾರದವರು ಕೊಟ್ಟ ಸಂಬಳದ ಮೇಲೆಯೇ ಆಶ್ರಯ ಪಡೆದಿರಬೇಕು. ಆದರೆ ಈ ಕ್ಷೇತ್ರವೇ ನನಗೆ ಸಾಕೆನ್ನುತ್ತಿದ್ದರು ಅನಂತಯ್ಯನವರು. ಬಹಳ ಪ್ರಯತ್ನಪಟ್ಟರೂ ಸರ್ಕಾರೀ ಶಾಲೆಯಲ್ಲಿ ಅವರಿಗೆ ಉದ್ಯೋಗ ದೊರಕಲಿಲ್ಲ. ಏಕೆಂದರೆ ಅವನು ಚರಿತ್ರೆ, ಇಂಗ್ಲೀಷುಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಪದವೀಧರರಾಗಲಿಲ್ಲವಂತೆ. ಅವರು ತೆಗೆದುಕೊಂಡದ್ದು ಮನಶ್ಶಾಸ್ತ್ರ, ಸಮಾಜಶಾಸ್ತ್ರಗಳು. ಈ ಎರಡು ಶಾಸ್ತ್ರಗಳೂ ವಿದ್ಯೆಗೆ ನಿಕಟ ಸಂಬಂಧಪಟ್ಟವೆಂಬುದು ಇಂದಿನ ವಿದ್ಯಾಮಂತ್ರಿಗಳಿಗೆ, ವಿದ್ಯಾ ಇಲಾಖೆಯವರಿಗೆ ತಿಳಿಯದಿರುವುದು ವಿಷಾದಕರ. ರಶ್ಯದಲ್ಲಿನ ಪ್ರತಿಯೊಂದು ಶಾಲೆಯಲ್ಲೂ ಒಬ್ಬೊಬ್ಬ ಮನಶ್ಶಾಸ್ತ್ರದ ಉಪಾಧ್ಯಾಯನಿದ್ದಾನೆ. ಅವನು ವಿದ್ಯಾರ್ಥಿಗಳ ಬುದ್ಧಿ, ಜ್ಞಾನ, ರುಚಿ, ಚಾರಿತ್ರಗಳನ್ನು ಆಗಾಗ್ಗೆ ಅಳೆದು ಅವರವರ ಅಭಿರುಚಿಯಿರುವ ವಿದ್ಯೆಯನ್ನು ಕೊಡುತ್ತಾನೆ. ಅದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ನಾಡಿಗೆ ಉಪಯೋಗವಾಗುತ್ತಾನೆ. ವಿದ್ಯೆಯ ಗುರಿ ವಿದ್ಯಾರ್ಥಿಯನ್ನು ಸತ್ಪ್ರಜೆಯನ್ನಾಗಿ ಮಾಡಿ, ಒಳ್ಳೆಯ ಶೀಲವಂತನಾಗುವಂತೆ ಮಾಡುವುದಲ್ಲವೆ? ನಮ್ಮವರು ಪಾಶ್ಚಿಮಾತ್ಯರ ಒಳ್ಳೆ ಗುಣಗಳನ್ನು ಅನುಸರಿಸುವುದರಲ್ಲಿ ನಿದಾನಗಾಮಿಗಳು. ಆದರೆ ಅದೇ ಅವರ ವೇಷಭೂಷಣ, ಕ್ಲಬ್ಬು ಬಾಲುಡೂಮುಗಳು, ವೈನು ವಿಸ್ಕಿಗಳನ್ನು ಆಮದು ಮಾಡಿಕೊಳ್ಳುವುದರಲ್ಲಿ ಎಲ್ಲರಿಗಿಂತ ನಾವೇ ಮೊದಲೆನ್ನುತ್ತೇವೆ. ಅಂತೆಯೇ ಮನಶ್ಶಾಸ್ತ್ರದ ಮಾಸ್ತರ್ ಅನಂತಯ್ಯನವರಿಗೆ ಸರ್ಕಾರೀ ಹೈಸ್ಕೂಲಿನಲ್ಲಿ ಸ್ಥಳ ದೊರಕಲಿಲ್ಲ. ಸೇವೆಗಾಗಿಯೇ ದುಡಿಯುವ ಒಂದೆರಡು

ವ್ಯಕ್ತಿಗಳು ಆ ಶಾಖೆಯಲ್ಲೂ ಇದ್ದರು. ಅಂತಹವರಲ್ಲಿ ಶ್ರೀರಂಗಪಟ್ಟಣದ ಮುನಿಸಿಪಲ್ ಹೈಸ್ಕೂಲಿನ ಹೆಡ್‌ಮಾಸ್ಟರ್ ನರಸಿಂಹಯ್ಯನವರು ಅಗ್ರಗಣ್ಯರು. ತಮ್ಮ ಸ್ಕೂಲಿನಲ್ಲಿ ಅನಂತಯ್ಯನವರಿಗೆ ಮಾಸ್ತರಗಿರಿ ದೊರಕಿಸಿ ಕೊಟ್ಟರು.

ಕವಿ ಟೆನಿಸನ್ನಿನ 'ದಿ ಕ್ಯಾಪ್ಟನ್' ಪದ್ಯ ಹೇಳುತ್ತಿದ್ದಾರೆ ಅನಂತಯ್ಯನವರು. ಅದರಲ್ಲಿ ಕವಿ ಹೇಳುತ್ತಾನೆ 'ಈ ಪದ್ಯದ ಸತ್ಯವನ್ನು ಯಾರು ಸುಳ್ಳೆನ್ನುತ್ತಾರೋ ಅವರಿಗೆ ನರಕವಾಸವೇ ಶಿಕ್ಷೆ' ಎಂದು. ಕನ್ನಡದ ಕವಿ ರಾಘವಾಂಕನ ಹೇಳಿಕೆಯ ಹೋಲಿಕೆಯನ್ನು ಅನಂತ ಉಪಾಧ್ಯಾಯರು ಕೊಟ್ಟರು. ರಾಘವಾಂಕ ಕವಿ ತನ್ನ ಕೃತಿ 'ಸಿದ್ಧರಾಮ ಚರಿತ್ರೆ'ಯಲ್ಲಿ 'ಈ ಕೃತಿಯ ಒಡೆಯನ್ ಸಿದ್ಧರಾಮನ್, ಇದನಂಬದವರ ಶಿರದ ಮೇಲಿಡುವೆನ್ ಎನ್ನ ವಾಮ ಪಾದುಕೆಯನ್' ಎನ್ನುವ ರಾಘವಾಂಕನ ಉದ್ಧಟತನಕ್ಕೆ ಟೆನಿಸನ್ನಿನ ಜಂಭವೇನು ಹೆಚ್ಚಿನದಲ್ಲವೆಂದು ಕನ್ನಡವನ್ನು ಎತ್ತಿ ಹಿಡಿದರು ಆಂಗ್ಲ ಉಪಾಧ್ಯಾಯರು. ಈ ರೀತಿ ತರಗತಿಯಲ್ಲಿ ಹುಡುಗರಿಗೆ ಕ್ಲಿಷ್ಟವಾದ ಆಂಗ್ಲಭಾಷೆಯನ್ನು ಲೀಲಾಜಾಲವಾಗಿ ಹೇಳುತ್ತಿದ್ದರು. ಅನಂತ ಉಪಾಧ್ಯಾಯರು ಬರುವ ಮುನ್ನ ವಿದ್ಯಾರ್ಥಿಗಳಿಗೆ ಇಂಗ್ಲೀಷೆಂದರೆ ನುಂಗಲಾರದ ವಿಷಗುಳಿಗೆಯಾಗಿತ್ತು. ಆ ಪೀರಿಯೆಡ್ ಬಂತೆಂದರೆ ಎಲ್ಲರಿಗೂ ತಲೇನೋವು ಬರುತ್ತಿತ್ತು. ಇಂಗ್ಲಿಷ್ ಪತ್ರಿಕೆಯಲ್ಲಿ ತಾವು ಪಾಸಾಗುವುದಿಲ್ಲವೆಂದು ಅನೇಕರಿಗಾಗಲೇ ಖಚಿತವಾಗಿಹೋಗಿತ್ತು. ಅನಂತಯ್ಯನವರು ಇಂಗ್ಲೀಷನ್ನು ತಮ್ಮ ಕೈಲಿ ತೆಗೆದುಕೊಂಡ ಮೇಲೆ ಹುಡುಗರ ಮನಸ್ಸಿನ ಮುಂದೆ ಕಟ್ಟಿದ್ದ ಕಷ್ಟವೆಂಬ ಕಟ್ಟೆ ಕಡಿದುಹೋಯಿತು. ಅವರ ಪಾಠವೆಂದರೆ ನೇರವಾಗಿ ಮನಸ್ಸಿಗೇ ನಾಟುತ್ತಿತ್ತು. ಜೊತೆ ಜೊತೆಗೆ ಅನೇಕ ವ್ಯವಹಾರಜ್ಞಾನಗಳನ್ನು ಬೋಧಿಸುತ್ತಿದ್ದರು. ಇದರಿಂದ ಅವರು ತರಗತಿಗೆ ಬಂದರೆ ವಿದ್ಯಾರ್ಥಿಗಳಿಗೆ ಎಲ್ಲೂ ಇಲ್ಲದ ಆನಂದ. ಸಂತೋಷದಿಂದ ಕೇಕೆ ಹಾಕುತ್ತಾರೆ. ಪೀರಿಯಡ್ ಮುಗಿದು ಗಂಟೆ ಹೊಡೆದರೂ ಇಲ್ಲವೆನ್ನುತ್ತಾರೆ ಹುಡುಗರು. ಮಾಸ್ತರ ಉಪದೇಶ ಹೋಗುತ್ತದಲ್ಲಾನ್ನುವುದೊಂದು ಕಾರಣ. ಇನ್ನೊಂದು ಕಾರಣ ಮುಂದಿನ ಪೀರಿಯಡ್ ಗ್ರಾಮರ್ ರಾಮಾಶಾಸ್ತ್ರಿಗಳದು. ಅವರನ್ನೂ ಅವರ ಗ್ರಾಮರ ಕಲಿಸುವದನ್ನೂ ಕಂಡರೆ ಹುಡುಗರು ಸಿಡಿಯುತ್ತಿದ್ದರು.

ರಾಮಾಶಾಸ್ತ್ರಿ ಉರುಫ್ ಬುರುಡೇ ಶಾಸ್ತ್ರಿಗಳ ಪರಿಚಯ ಸ್ವಲ್ಪ ನಿಮಗೆ ಮಾಡಿಕೊಟ್ಟು ಮುಂದೆ ಕಥೆಗೆ ಸಾಗುತ್ತೇನೆ. ಇವರು ವಿದ್ಯಾ ಇಲಾಖೆಗೆ ಸೇರಿ ಆಗಲೇ ನಾಲ್ಕಾರು ವರ್ಷಗಳಾಯಿತು. ಮೂರು ಸ್ಕೂಲುಗಳನ್ನು ನೋಡಿ ನಾಲ್ಕನೆಯದಕ್ಕೆ ಬಂದಿದಾರೆ. ಬಿ.ಎ., ಪರೀಕ್ಷೆಯಲ್ಲಿ ಇಂಗ್ಲೀಷು ಐಚ್ಛಿಕವಾಗಿ ತೆಗೆದುಕೊಂಡು ಉತ್ತೀರ್ಣರಾದರು. ಆದ್ದರಿಂದ ಸ್ಕೂಲಿನ ಎಲ್ಲಾ ಇಂಗ್ಲೀಷು ಪೀರಿಯಡ್ಡುಗಳನ್ನೂ ತಾವೇ ತೆಗೆದುಕೊಳ್ಳಬೇಕೆಂಬುದು ಅವರ ವಾದ. ಪಾಠ ಹೇಳಿಕೊಡುವುದು ಮಾತ್ರ ಸರಸ್ವತಿಗೂ ಅರ್ಥವಾಗುತ್ತಿರಲಿಲ್ಲ. ಸುಲಭವಾದ ಪದಗಳಿಗೆ 'ಸ್ಪೆಲಿಂಗೇಳಿ ಸಾರ್' ಎಂದರೆ 'ನಿಮಗೆ ಡಿಕ್ಷನೇರಿ ನೋಡಲು ಒಂದು ಪೀರಿಯಡ್ ಇಡಬೇಕು' ಎನ್ನುತ್ತಾರೆ. ತರಗತಿಗೆ ಬಂದರೆ,

'ನಾನು ಅಲ್ಲಿಗೆ ಕಾರ್ಯದರ್ಶಿಯಾಗಿದ್ದೆ, ಬಿ.ಎ., ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿದೆ, ನನ್ನ she friend ಜೊತೆಯಲ್ಲಿ ಸಿನಿಮಾಕ್ಕೋಗಿದ್ದೆ' ವಗೈರೆಗಳು ಜಾಸ್ತಿ ಅವರ ಹತ್ತಿರ. ಅವರು ಯಾವಾಗಲೂ ನಿಂತೇ ಪಾಠ ಮಾಡುತ್ತಾರೆ. ಆಸಾಮಿ ಸ್ವಲ್ಪ ಗಿಡ್ಡು. ದಪ್ಪವಾದ ಶರೀರ. ಹೊಟ್ಟೆ ಮುಂದಕ್ಕೆ ಚಾಚಿದೆ. ಕಾಲು ಅಡ್ಡಡ್ಡಾಗಿ ಇಡುತ್ತಾರೆ. ಆ ಬೂಟ್ಸುಗಳೋ ವಕ್ರವಕ್ರವಾಗಿ ಒಂದು ದಕ್ಷಿಣ ಇನ್ನೊಂದು ಪೂರ್ವಕ್ಕಿರುತ್ತವೆ. ಅವರು ಚರಿತ್ರೆಯ ಮೋಹಪ್ರಾದ್ದರಿಂದ ಹೆಚ್ಚೂ ಕಡಿಮೆ ಚರಿತ್ರೆಯ ನೆಪೋಲಿಯನ್ನನ್ನೇ ಹೋಲುತ್ತಾರೆ, ಶರೀರಾಕಾರದಲ್ಲಿ ಮಾತ್ರ.

ಒಂದು ವರ್ಷ ಮುಗಿಯುವುದರಲ್ಲೇ ಒಂದು ಸ್ಕೂಲು ಬಿಟ್ಟು ಬರಬೇಕಾದರೆ ಎಷ್ಟು ಹೆಸರು ಸಂಪಾದಿಸಿರಬೇಕು. ಶಾಲೆಯ ಹೆಡ್ ಮಾಸ್ಟರರಿಂದ ವಿದ್ಯಾರ್ಥಿಗಳೊಳಗೊಂಡು ಆಳುಗಳ ತನಕ ಈ ಶಾಸ್ತ್ರಿ ಬಿಟ್ಟೋದರೆ ಸಾಕಲ್ಲಾ ಎನ್ನುತ್ತಿದ್ದರು. ಚೆನ್ನಗಿರಿಯಿಂದ ಶ್ರೀರಂಗಪಟ್ಟಣಕ್ಕೆ ರಾಮಾಶಾಸ್ತ್ರಿಗಳು ಬಂದಿದಾರೆ. ಅವರೇ ಇಷ್ಟಪಟ್ಟು ಇಲ್ಲಿಗೆ ಬಂದರಂತೆ. ಒಬ್ಬೊಬ್ಬರು ಒಂದೊಂದು ಕಾರಣ ಹೇಳುತ್ತಾರೆ.

'ಶ್ರೀರಂಗಪಟ್ಟಣದ ಹೈಸ್ಕೂಲಿನಲ್ಲಿ ಹುಡುಗಿಯರು ಹೆಚ್ಚಿಗೆ ಇದ್ದಾರೆ, ಅದಕ್ಕೇ ಶಾಸ್ತ್ರಿಗಳು ಬಂದಿದ್ದಾರೆ' ಅನ್ನುವರು ಕೆಲವರು. ಮತ್ತೆ ಕೆಲವರು 'ಹೆಚ್ಚಿಗೆ ಟ್ಯೂಶನ್ ಸಿಗುತ್ತಿದ್ದುದರಿಂದ ಬಂದಿದ್ದಾರೆ'ನ್ನುತ್ತಾರೆ. ಎರಡೂ ಇದ್ದರೂ ಇರಬಹುದು.

ಶಾಸ್ತ್ರಿಗಳ ಇನ್ನೊಂದು ಗುಣವೆಂದರೆ, ಮಾತೆತ್ತಿದರೆ 'ರೂಲ್ಸ್, ರೆಗ್ಯುಲೇಶನ್, ಮ್ಯಾನ್ಯುಲ್' ಅನ್ನುತ್ತಾರೆ. 'ಅನಂತಯ್ಯನವರು ಉಪಾಧ್ಯಾಯರಾಗಲು ಅವರ ಐಚ್ಛಿಕ ವಿಷಯ ಸರಿಯಿಲ್ಲದಿದ್ದರೂ 'ರೂಲ್ಸ್'ಗೆ ವಿರೋಧವಾಗಿ ಹೆಡ್‌ಮಾಸ್ಟರು ನೇಮಿಸಿಕೊಂಡಿದ್ದಾರೆ. ಅದರಲ್ಲೂ ಅವರಿಗಿಂತ better qualified handsಗಳಿರುವಾಗ ಅವರಿಗೇ ಇಂಗ್ಲೀಷು ಕೊಟ್ಟಿದ್ದಾರೆ. ನಾಳೆ ಡಿ.ಈ.ಓ. ಬಂದರೆ ಡಿ.ಪಿ.ಐ. ವಿಜಿಟ್ ಕೊಟ್ಟರೆ ನರಸಿಂಹಯ್ಯನವರು ಮನೆಗೆ ಹೋಗಬೇಕಾಗುತ್ತದೆ' ಎಂದು ಅಸಿಸ್ಟೆಂಟ್ ಮಾಸ್ಟರ್ ರಾಮಾಶಾಸ್ತ್ರಿಗಳು ಹೆಡ್‌ಮಾಸ್ಟರ್ ನರಸಿಂಹಯ್ಯನವರಿಗೇ ದಬಾಯಿಸುತ್ತಿದ್ದರು.

"ಸರ್! ಹೊಸ ಮೇಷ್ಟ್ರು ಪಾಠ ಬಹಳ ಚೆನ್ನಾಗಿ ಮಾಡ್ತಾರೆ, ಎಷ್ಟು ವಿಷಯ ಹೇಳ್ತಾರೆ, ಕಥೆ ಹೇಳ್ತಾರೆ. ಆದರೂ 'ನನಗೇನೂ ಗೊತ್ತಿಲ್ಲ' ಎನ್ನುವ ಅವರ ವಿನಯ ನೋಡೀ ಸಾರ್" ಎಂದಳು ರತ್ನಮಾಲೆ.

"ಗೊತ್ತು ಗೊತ್ತು ಅವರ ನಿಷ್ಕಾಮ ಸೇವೆ; ಕುಳ್ತುಕೊಳಿ ಬಹಳ ಹೊಗಳಬೇಕೆಂದಿಲ್ಲ ನನ್ನ ಮುಂದೆ."

"ಇರುವ ವಿಷಯ ಹೇಳಿದರೆ ಏಕಿಷ್ಟು ಕೋಪಮಾಡ್ತೀರಿ ಸರ್" ಎಂದಳು ನಿರ್ಮಲೆ.

"ಏನು ನಿಮಗೂ ಅವರಿಗೂ ಏನಾದ್ರೂ ಸಂಬಂಧವಿದೆಯೋ ನು?" ಎಂಬುವ ಚುಚ್ಚುಮಾತನಾಡಿದರು ಬುರುಡೆ ಶಾಸ್ತ್ರಿಗಳು.

೩

"ಲೇ ರುಕ್ಕು!"

"ಅದೇನೂಂದ್ರೆ."

"ಇಲ್ಲಿ ಬಾರೇಂದ್ರೆ ಅಲ್ಲೇ ಏನೂಂತೀಯಲ್ಲೇ."

"ಅನ್ನ ಉಕ್ತಾಯಿದೆ, ತಡೀರೀಂದ್ರೆ. ಬರ್ತೀನಿ."

"ನಿನ್ನ ಅನ್ನ ಹಾಳಾದ್ರೂ ಚಿಂತೆಯಿಲ್ಲ, ಕಾಫಿ ತಾರೆ."

ಕಾಫಿ ಎಂಬ ಶಬ್ದ ಕೇಳಿದ ತಕ್ಷಣ ರುಕ್ಮಿಣಮ್ಮನವರು ಅಡಿಗೆಯಮನೆಯಿಂದ ಹೊರಬಂದರು. ಕಾಫಿ ಎಂದರೆ ಯಾರೋ ಅತಿಥಿಗಳು ಮನೆಗೆ

ಬಂದಿದ್ದಾರೆಂಬುದು ರುಕ್ಮಿಣಮ್ಮನವರ ಅರ್ಥ. ರೂಮಿನಲ್ಲಿ ಅನಂತಯ್ಯನವರು ವಿದ್ಯಾರ್ಥಿಗಳ ಸಂಗಡ ಮಾತನಾಡುತ್ತಾ ಕುಳಿತಿದ್ದರು. ಅದು ಭಾನುವಾರದ ದಿನ. ಸ್ಕೂಲಿಗೆ ರಜ ಇದೆ. ಸ್ಕೂಲಿಗೆ ರಜ ಬಂತೆಂದರೆ ಬೆಳಗಿನಿಂದ ಸಂಜೆಯವರೆಗೂ ವಿದ್ಯಾರ್ಥಿಗಳು ಅನಂತ ಉಪಾಧ್ಯಾಯರ ಮನೆಯಲ್ಲಿ ಕಾಲ ಕಳೆಯುತ್ತಾರೆ. ಎಲ್ಲ ಹುಡುಗರನ್ನೂ ಕೂರಿಸಿಕೊಂಡು ಕಾಫಿ ಕುಡಿಸುತ್ತಾರೆ ಅನಂತಯ್ಯನವರು. ತಮ್ಮ ಹೆಂಡತಿ ರುಕ್ಮಿಣಿಯೇ ಎಲ್ಲ ಹುಡುಗರಿಗೂ ಕಾಫಿ ಕೊಡಬೇಕು. ಕಾಫಿ ಮಾಡಿ ತೆಗೆದುಕೊಂಡು ಬಂದರೆ ಜೊತೆಗೆ ಚಕ್ಕಲಿಯನ್ನೂ ತರುತ್ತಾರೆ ರುಕ್ಮಿಣಮ್ಮನವರು. ಮುತ್ತುಗದ ಎಲೆಯ ಚೂರಿನಲ್ಲಿ ಸ್ವಲ್ಪ ಸ್ವಲ್ಪ ಚಕ್ಕಲಿ ಇಟ್ಟು ಒಂದೊಂದು ಗ್ಲಾಸು ಕಾಫಿ ತಂದುಕೊಟ್ಟರು.

ತಿಂಡಿಯೆಲ್ಲಾ ಮುಗಿದಮೇಲೆ ಅನಂತಯ್ಯನವರು ಪೇಪರ್ ಓದಿದರು. ವಿದ್ಯಾರ್ಥಿಗಳೆಲ್ಲಾ ಕುಳಿತು ಕೇಳಿದರು. ಅನಂತ ಉಪಾಧ್ಯಾಯರು ಮತ್ತು ಅವರಾಕೆ ಪಗಡೆಗೆ ಕುಳಿತರು. ರತ್ನಮಾಲೆ, ವಿಮಲೆ, ನಿರ್ಮಲೆಯರು ರುಕ್ಮಿಣಮ್ಮನವರ ಕಡೆ ಕುಳಿತು ಹೇಳಿಕೊಟ್ಟರೆ ಅಭಯಕುಮಾರ, ಬಸವರಾಜ, ಶ್ರೀನಿವಾಸರು ಅನಂತಯ್ಯನವರ ಕಡೆ ಇದ್ದರು. ಆಟ ಆಡುತ್ತಾ ಆಡುತ್ತಾ ಕೊನೆಯಲ್ಲಿ ಕಾಯಿ ನಡೆಸುತ್ತಿದ್ದ ಅಭಯ ರತ್ನರ ಆಟವಾಗಿಬಿಟ್ಟಿತು. ಮಿಕ್ಕೆಲ್ಲರೂ ಕುಳಿತು ಆಟ ನೋಡುತ್ತಿದ್ದರು. ರತ್ನಮಾಲೆ ಸೋಲುವ ಸ್ಥಿತಿ ಬಂತು. ರುಕ್ಮಿಣಮ್ಮನವರ ಮುಖ ಸಪ್ಪಗಾಯಿತು. ಮಾಸ್ತರು ಗೆಲುವಾದರು.

"ಏನೇ ರುಕ್ಕು! ಏನೇಳ್ತೀಯೇಳೀಗ, ಏನು ಹಟ ಇಡ್ತಿಯೇಳು?" ಎಂದರು ಅನಂತಯ್ಯನವರು.

"ಏನಿಡೋದೇ ಸರ್, ಆಟ ಆಡ್ತಿರೋವ್ರನ್ನೇ ಇಟ್ಬಿಟ್ಟಿದ್ದಾರೆ, ಇನ್ನೇನಿಡ್ಬೇಕು ನಿಮಗೆ" ಎಂದನು ಅಭಯಕುಮಾರ.

"ಅಯ್ಯೋ! ಇದು ಕಲಿಯುಗಾ ಕಣೋ ಅಭಯ, ಪಾಂಡವರನ್ನೇಕೋ ಈಗ ನೆನಸ್ಕಂತೀ" ಅಂದರು ಅನಂತಯ್ಯನವರು.

ಅಭಯನ ಮಾತಿನ ಗೂಢಾರ್ಥ ರತ್ನಮಾಲೆಯೊಬ್ಬಳಿಗೆ ಗೊತ್ತಾಯಿತು. ಆ ಮಾತುಗಳನ್ನು ಕೇಳಿದ ತಕ್ಷಣ ಸ್ವಭಾವವಾಗಿ ನಾಚಿ ತಲೆ

ತಗ್ಗಿಸಿದಳು ರತ್ನಮಾಲೆ. ಇದನ್ನು ಕಂಡ ವಿಮಲೆಯ ಮನಸ್ಸು ಈರ್ಷೆಯಿಂದ ಕಲುಷಿತವಾಗದೆ ಇರಲಿಲ್ಲ. ಆದರೆ ಅದನ್ನು ಹೊರಗೆಡಹದೆ ಮನಸ್ಸಿನಲ್ಲೇ ನುಂಗಿಕೊಂಡಳು.

ಮನೆಗೆ ಬಂದ ವಿಮಲೆಯ ಮನಸ್ಸು ಸಮಾಧಾನದಿಂದಿರಲಿಲ್ಲ. ಓದಲು ಪುಸ್ತಕ ತೆಗೆದುಕೊಂಡರೆ ಎಲ್ಲ ಪುಟಗಳಲ್ಲೂ ಅಭಯ ರತ್ನರ ಚಿತ್ರಗಳೇ ಕಾಣುತ್ತಿದ್ದವು. ಇಬ್ಬರೂ ಕುಳಿತು ಎಲೆ ಅಡಿಕೆ ಮೆಲ್ಲುವ ಚಿತ್ರ, ಪಗಡೆ ಯಾಡುವ ಚಿತ್ರ, ನದಿಯ ದಡದಲ್ಲಿ ವಾಕಿಂಗ್ ಹೋಗುವ ಚಿತ್ರಗಳೇ ಮಿಂಚುತ್ತವೆ. ಹಾಗೆ ಮಿಂಚಿದಾಗ ಅಸೂಯೆಯ ಕಿಡಿ ಹೃದಯದಿಂದ ಚಿಮ್ಮುತ್ತದೆ. ಕೈಯಲ್ಲಿದ್ದ ಪುಸ್ತಕವನ್ನು ರೊಯ್ಯನೆ ಬಿಸಾಡಿದಳು.

ಸಂಜೆ ಊಟಕ್ಕೆ ಕುಳಿತಾಗ "ಇದೇನೇ ವಿಮಲ ಇಷ್ಟು ಸಪ್ಪಗಿದ್ದೀಯೆ ?" ಎಂದಳು ಸೀನಕ್ಕ.

"ಏನೂ ಇಲ್ಲಾಮ್ಮ."

"ಏನೂ ಇಲ್ದೇಯಿದ್ರೆ ಮುಖ ಯಾತ್ಕೇಕೆ ಮಂಕಾಗಿದೆ ?"

"ಮಧ್ಯಾಹ್ನ ಆ ಸುಬ್ಬಮ್ಮನವರ ರತ್ನ ನನ್ನ ನೋಡಿ ನಕ್ಕಾ ಇದ್ಲಮ್ಮ."

"ಅವಳಿರ ರೂಪಕ್ಕೇನು ?"

"ನಾಚಿಕೆಯಿಲ್ದೆ ಪಕ್ಕದಮನೆ ಅಭಯನ ಸಂಗಡ ಪಗಡೆ ಆಡ್ತಿದ್ಲಮ್ಮ."

"ಮಾನಗೆಟ್ಟ ಬಡ್ಡೀರು. ಜಾತೀಗೀತೀನ್ನದೇನಿಲ್ಲ."

"ಈ ಸೀರೆ ಉಟ್ಕೊಂಡೋದ್ರೆ ಎಲ್ಲಾ ನಗ್ತಾರಮ್ಮ."

"ಅದಕ್ಕೆ ನನ್ನನ್ನೇನ್ಮಾಡೂಂತಿ ?"

"ಒಂದೆರಡು ವೈಲು ಸೀರೆ ಕೊಡ್ಸಮ್ಮ."

"ನನ್ನ ಸೀರೆಗಳನ್ನೆ ಉಟ್ಗೊಂಡೋಗು" ಎಂದು ಸೀನಕ್ಕ ತನ್ನ ಮಗಳು ವಿಮಲೆಗೆ ಹೇಳಿದಳು.

ಯಾವ ಸೀರೆ ಉಟ್ಟರೇನು ವಿಮಲೆಯ ರೂಪು ರತಿಯಂತಾಗಲಿಲ್ಲ; ಗುಣ ಸೀತೆಯಂತಾಗಲಿಲ್ಲ. ಕಪ್ಪು ಮಿಶ್ರವಾದ ಇದ್ದಲು ಬಣ್ಣ. ಮೂಗು ಸ್ವಲ್ಪ ಚೀನಿಗಳದ್ದೆನ್ನಬಹುದು. ಕೆನ್ನೆಗಳೂ ಕಡುಬೇ ತುಟಿಗಳು ದಪ್ಪವಾಗಿವೆ. ಬೀದಿಯಲ್ಲಿ ನಡೆದುಹೋಗುತ್ತಿದ್ದರೆ ಗುಜ್ಜಾನೆಯ ಮರಿ ಬುಡುಬುಡನೆ ಓಡಿದಂತಾಗುತ್ತದೆ. ಒಟ್ಟಿನಲ್ಲಿ ವಿಮಲೆ ಸೀನಕ್ಕನ ಪಡಿ ಅಚ್ಚೇ.

ಇಂತಹ ವಿಮಲೆ ಶಾಲೆಯ ನೂರ್‌ಜಹಾನ್, ಹೆಲನ್ ಆಗಬೇಕೆಂದರೆ ಹೇಗಾಗುತ್ತದೆ. ಆಕೆ ಮುಖಕ್ಕೆ ಎಷ್ಟು ಪೌಡರ್ ಬಳಿದರೂ ಪೌಡರ್ ಕಪ್ಪಾಗುತ್ತಿತ್ತೇ ಹೊರತು ಅವಳ ಮುಖ ಬೆಳ್ಳಗಾಗುತ್ತಿರಲಿಲ್ಲ.

ಅವಳ ಪಕ್ಕದಲ್ಲೇ ರತ್ನಮಾಲೆ ಕುಳಿತುಕೊಳ್ಳುತ್ತಾಳೆ. ಅವಳ ಉಡುಗೆಯೆಂದರೆ ಸಾದಾ ಚೀಟು ಸೀರೆ. ತೊಡಿಗೆಯೆಂದರೆ ಕತ್ತಿನಲ್ಲಿ ಎರಡೆಳೆಯ ಒಂದು ಚೈನು. ಕೈಗೆ ಎರಡೆರಡು ಬಳೆಗಳು. ಮೂಗಿನಲ್ಲಿ ಮೂಗುತಿ ಮಿನುಗುತ್ತಿದೆ. ಕಿವಿಯನ್ನು ಮುತ್ತಿನೋಲೆಗಳು ಮುತ್ತಿಡುತ್ತಿವೆ. ರತ್ನಮಾಲೆ ಪೌರ್ಣಮಿಯಾದರೆ ವಿಮಲೆ ಅಮಾವಾಸ್ಯೆ, ರತ್ನ ಸೀತೆಯಾದರೆ ವಿಮಲೆ ಶೂರ್ಪನಖಿ.

ತರಗತಿಯ ಹುಡುಗರು ರತ್ನಮಾಲೆಯನ್ನು ನೋಡುತ್ತಿದ್ದರೆ ತನ್ನ ಕಡೆಯೇ ನೋಡುತ್ತಿದ್ದಾರೆಂದು ಸೀರೆ ಸರಿಮಾಡಿಕೊಳ್ಳುವುದು, ಕುಪ್ಪಸ ಮೇಲೆಳೆಯುವುದು, ಕಣ್ಣು ಕಿರುನೋಟ ಬೀರುವುದನ್ನು ವಿಮಲೆ ಮಾಡುತ್ತಿದ್ದಳು. ಆದರೆ ರತ್ನಮಾಲೆಯ ನೋಟವಂತೂ ಅಭಯಕುಮಾರನಲ್ಲಿ ನೆಟ್ಟಿತ್ತು. ಅವನು ತನ್ನೆರಡು ಕಣ್ಣುಗಳನ್ನೂ ಅವಳಲ್ಲಿ ಹೂತಿದ್ದ. ಎಷ್ಟು ಕಿತ್ತರೂ ಕೆಸರಿನಿಂದ ಕಾಲನ್ನು ಕಿತ್ತಂತಾಗುತ್ತಿತ್ತು.

ರತ್ನ ಅಭಯನನ್ನು ನೋಡವುದೂ, ಅಭಯ ರತ್ನನನ್ನು ನೋಡುವುದೂ ಅನಂತ ಉಪಾಧ್ಯಾಯರಿಗೆ ಗೊತ್ತು. ಆಗ ಮಾಸ್ತರು ಮನಶ್ಶಾಸ್ತ್ರ ಬಿಚ್ಚುತ್ತಾರೆ· "ಹೆಣ್ಣನ್ನು ಆಕರ್ಷಿಸುವ ಶಕ್ತಿ ಗಂಡಿನಲ್ಲಿ ಅಡಗಿದ್ದರೆ, ಗಂಡಸನ್ನು ಸೆಳೆಯುವ ಯುಕ್ತಿ, ಗೂಢ ಶಕ್ತಿಗಳೆರಡೂ ಹೆಣ್ಣಿಗಿದೆ" ಎಂದರು. ಇದು ತಟಕ್ಕನೆ ಬಡಿದು ನಿದ್ರೆಯಿಂದೆಚ್ಚೆತ್ತವರಂತಾದರು ಅಭಯ ರತ್ನರಿಬ್ಬರೂ.

ಪಾಠ ಬಿಟ್ಟು ಅಡ್ಡದಾರಿ ಹಿಡಿದರು ಅನಂತಯ್ಯನವರು. ಮನಶ್ಶಾಸ್ತ್ರದ ಕಂತೆ ಬಿಚ್ಚಿದರು. ಕನಸು, ಅದು ಬೀಳಲು ಕಾರಣ, ಅದರ ರಚನೆ ಪರಿಣಾಮಗಳನ್ನೆಲ್ಲಾ ಹೇಳಲು ಮೊದಲು ಮಾಡಿದರು. ಯಾವ ವಿಚಾರ ಹೇಳಿದರೂ ಕೂಲಂಕಷವಾಗಿ ಅದರ ಇದರ ಇತಿಹಾಸದೊಂದಿಗೆ ಹೇಳುವ ರೂಢಿ ಅನಂತ ಉಪಾಧ್ಯಾಯರದು. "ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜರ್ಮನಿ ವಿಜ್ಞಾನಕ್ಕೆ ಹೆಸರಾಂತದ್ದು. ಜರ್ಮನಿಗೆ ಎರಡು ಮುಖಗಳಿವೆ. ಒಂದು

ವಿಜ್ಞಾನದ ಸಹಾಯದಿಂದ ಜಗತ್ತನ್ನು ಗೆಲ್ಲಬೇಕು, ಶತ್ರುಗಳನ್ನು ನಾಶ ಮಾಡಬೇಕೆನ್ನುವ ಬಿಸ್‌ಮಾರ್ಕ್, ಕೈಜರ್, ಹಿಟ್ಲರುಗಳು. ಇನ್ನೊಂದು ಕಲೆಯಿಂದ ವಿಶ್ವವನ್ನು ಉದ್ಧರಿಸಬೇಕೆನ್ನುವ ಗಯಟೆ, ಬಿಠೋವನ್ನರುಗಳು. ಅಂತಹ ಬಿಠೋವನ್ನಿನ ಗುಂಪಿಗೆ ಸೇರಿದ ಇನ್ನೊಂದು ಮಹಾವ್ಯಕ್ತಿಯೆಂದರೆ ಸಿಗ್‌ಮಂಡ್ ಫ್ರಾಯಡ್. ಈ ಮನಶ್ಶಾಸ್ತ್ರದ ಮಹಾವಿಭೂತಿ ವೇದಿಕೆಯ ಮೇಲೆ ಬರುವ ಮುನ್ನ ಕನಸೆಂದರೆ ಮುಂದೆ ಬರುವ ವಿಷಯಗಳ ಚಿಹ್ನೆ ಯೆಂಬ ಮೂಢ ನಂಬಿಕೆಯಿತ್ತು. ನಮ್ಮಲ್ಲಿ ಈಗಲೂ ಕನಸಿನಲ್ಲಿ ಹೆಣ ಕಂಡರೆ, ಹೆಂಡದ ಲಾರಿ ಕಂಡರೆ ಒಳ್ಳೆಯದೆಂಬ ನಂಬಿಕೆಯಿದೆ. ಆದರೆ ಫ್ರಾಯ್ಡನ ಮತ ಪ್ರತ್ಯೇಕ. ಕನಸು ನಮ್ಮ ಹಿಂದಿನ ಜೀವನವನ್ನು ಹೇಳು ತ್ತದೆಯೇ ಹೊರತು ಮುಂದಿನದನ್ನಲ್ಲವೆಂಬುದು ಅವನ ಸಿದ್ಧಾಂತ.

ಮನಶ್ಶಾಸ್ತ್ರಜ್ಞರು ನಮ್ಮ ಮನಸ್ಸನ್ನು ಎರಡು ಭಾಗಗಳಾಗಿ ವಿಂಗಡಿಸಿ ದ್ದಾರೆ. ಒಂದು ಚೇತನ ಇನ್ನೊಂದು ಸುಪ್ತಚೇತನ. ನಾವು ಎಚ್ಚರವಾ ಗಿರುವಾಗ ಚೇತನ ಕೆಲಸ ಮಾಡುತ್ತಿರುತ್ತದೆ, ನಿದ್ರಿಸುತ್ತಿರುವಾಗ ಸುಪ್ತ ಚೇತನ ಕೆಲಸಮಾಡುತ್ತದೆ. ಎಚ್ಚರವಾಗಿರುವಾಗಲೂ ಚೇತನದ ಮೇಲೆ ಸುಪ್ತಚೇತನ ತನ್ನ ಪ್ರಭಾವ ಬೀರುತ್ತಲೇ ಇರುತ್ತದೆ.

"ಫ್ರಾಯಡ್ ವಿಯನ್ನಾ ಪಟ್ಟಣದ ಸುಪ್ರಸಿದ್ಧ ಡಾಕ್ಟರಾಗಿದ್ದ. ಯಾವುದೋ ಒಂದು ಯಹೂದೀ ಹುಡುಗಿಗೆ ಎಷ್ಟು ಮದ್ದು ಕೊಟ್ಟರು ಕಾಹಿಲೆ ಹುಷಾರಾಗಲಿಲ್ಲ. ವಾಸಿಯಾಗದಿರುವ ಕಾರಣಕ್ಕಾಗಿ ಎಷ್ಟು ಅಲೆ ದರೂ ಮೂಲಕಾರಣ ಪತ್ತೆಯಾಗಲಿಲ್ಲ. ಒಂದು ದಿನ ತನ್ನ ಪರೀಕ್ಷಾ ಕೊಠಡಿ ಯಲ್ಲಿ ಹುಡುಗಿಯನ್ನು ಸೋಫಾದ ಮೇಲೆ ಕೂರಿಸಿ ತಾನು ಕಂಡ ಕನಸೆಲ್ಲ ವನ್ನೂ ಹೇಳುವಂತೆ ಹೇಳಿ ಫ್ರಾಯ್ಡನು ಎಲ್ಲವನ್ನೂ ಕಾಗದದ ಮೇಲೆ ಬರೆದುಕೊಂಡನು. ಆ ಹುಡುಗಿ ಇನ್ನಾವುದೋ ಜಾತಿಯ ತರುಣನನ್ನು ಪ್ರೀತಿಸುತ್ತಿತ್ತು. ಆದರೆ ಅವರ ಮದುವೆಗೆ ತಂದೆತಾಯಿಗಳು ಅಡ್ಡಬಂದರು. ಆದ್ದರಿಂದ ಪ್ರತಿನಿತ್ಯ ಕನಸಿನಲ್ಲಿ ತನ್ನ ಪ್ರಿಯತಮನ ಕೂಡ ಆನಂದದಿಂದ ಕಾಲ ಕಳೆಯುವ ಚಿತ್ರಗಳನ್ನು ಕಾಣುತ್ತಿದ್ದಳು. ಆಕೆ ಎಚ್ಚತ್ತ ಜೀವನದಲ್ಲಿ ಯಾವ ಸುಖ ಅನುಭವಿಸಲಾಗಲಿಲ್ಲವೋ ಅದನ್ನು ಕನಸಿನಲ್ಲಿ ಅನುಭವಿಸಿ ದಳು. ಕನಸೆಲ್ಲವನ್ನೂ ಹೇಳುವಾಗ ತನ್ನ ಪ್ರಿಯತಮನ ಹೆಸರನ್ನೂ

ಸ್ವಭಾವವಾಗಿಯೇ ಹೇಳಿದಳು. ಆ ಹೆಸರನ್ನು ತೆಗೆದುಕೊಂಡು ಪರೀಕ್ಷಿಸಿ ನೋಡಿದಾಗ ಫ್ರಾಯಡನಿಗೆ ಆ ಹುಡುಗಿಯ ಕಾಹಿಲೆ ಅರ್ಥವಾಯಿತು. ಅವನ ಕೂಡ ಮದುವೆಯೇ ಆ ಹುಡುಗಿಯ ಕಾಹಿಲೆಗೆ ಔಷಧಿಯೆಂದು ತೀರ್ಮಾನಿಸಿದನು. ಮದುವೆಯಾದ ಮೇಲೆ ಹುಡುಗಿ ಯಥಾಪ್ರಕಾರ ಮೊದಲಿನಂತೆ ಗುಣವಾದಳು."

"ಇಲ್ಲೇ ಒಂದು ಉದಾಹರಣೆ ತೆಗೆದುಕೊಳ್ಳೋಣ. ನಮ್ಮ ಅಭಯ ಕುಮಾರನಿದ್ದಾನೆ. ಒಳ್ಳೇ ರೂಪವಂತ. ಎಂತಹ ರತಿಯ ಮನಸ್ಸನ್ನೂ ಪಲ್ಲಟ ಮಾಡುವಂತಹ ಎಸುಳಾದ ಮುಖವಿದೆ. ಅಗಸ್ತ್ಯರು ಸಪ್ತ ಸಮುದ್ರವನ್ನೂ ಒಮ್ಮೆಲೇ ಕುಡಿದಂತೆ ವಿಶಾಲವಾದ ಗಭೀರವಾದ ಸರಸ್ವತಿಯ ಶರಧಿಯನ್ನು ಕುಡಿಯುವ ಶಕ್ತಿ ತನಗಿದೆಯೆನ್ನುವ ತೀಕ್ಷ್ಣ ಬುದ್ಧಿ ಅವನಿಗಿದೆ. ಇಂತಹವನು ಬೇರೆ ಯಾವುದೋ ಜಾತಿಯ ಹೆಣ್ಣಿನ ಮೇಲೆ, ಆಕೆಗೂ ಪೂರ್ಣ ಇಷ್ಟವಿದ್ದು ಪ್ರೀತಿ ಬಿದ್ದು ಮದುವೆಯಾಗಲು ಒಪ್ಪುತ್ತಾರೆ. ನಮ್ಮ ಮದುವೆಯನ್ನು ನಿರ್ಣಯಮಾಡುವ ಸಮಾಜ ಇದಕ್ಕೆ ಒಪ್ಪಿಗೆ ಕೊಡುವುದಿಲ್ಲ. ಅಷ್ಟೇ ಅಲ್ಲ, ಅಡ್ಡ ಬಂದು ಅಡಚಣೆ ತಂದೊಡ್ಡುತ್ತದೆ. ಆಗ ನಮ್ಮ ಅಭಯ ತನ್ನ ನಲ್ಲೆಯೊಡನೆ ಕನಸಿನಲ್ಲಿ ಯಾರ ಅಡ್ಡಿ ಆತಂಕವಿಲ್ಲದೆ ಪುಷ್ಪಕ ವಿಮಾನದಲ್ಲಿ ಕುಳಿತು ಅಲಕಾಪುರಿಯ ನಂದನವನದಲ್ಲಿ ವಿಹಾರ ಮಾಡುತ್ತಾನೆ, ಕೊಳದ ದಡದಲ್ಲಿ ಕುಳಿತು ಹಸುರು ಹುಲ್ಲ ಮೇಲೆ ಮಲಗಿ, ಓಕುಳಿ ಆಟವಾಡಿ, ಮರದ ಕೆಳಗಡೆ ಕಣ್ಣುಮುಚ್ಚಾಲೆಯಾಡುತ್ತಾನೆ" ಎಂದು ಅನಂತಯ್ಯನವರು ಕನಸು ಮತ್ತು ಅದರ ರಚನೆಯನ್ನು ಹೇಳಿದರು.

ಅನಂತಯ್ಯನವರು ಹೇಳಿದ ಕನಸಿನ ವಿಚಾರ ರಾಮಾಶಾಸ್ತ್ರಿಗಳಿಗೂ ತಲುಪಿತು. ಯಾವ ವಿದ್ಯಾರ್ಥಿಗಳಿಗೂ ಶಾಸ್ತ್ರಿಗಳಾಗದಿದ್ದರೂ, ಶಾಸ್ತ್ರಿಗಳಿಗೆ ಬೇಕಾದ ಒಬ್ಬ ವಿದ್ಯಾರ್ಥಿನಿಯಿದ್ದಳು. ಅವಳು ಸೀನಕ್ಕನ ಮಗಳು ವಿಮಲೆ. ಅದೇನೋ ಗೊತ್ತಿಲ್ಲ ರಾಮಾಶಾಸ್ತ್ರಿಗಳಿಗೆ ಕಪ್ಪು ಬಣ್ಣ ಕಂಡರೆ ಬಹಳ ಇಷ್ಟ. ಚೆನ್ನಗಿರಿಯಲ್ಲಿದ್ದಾಗ ಕಾಲಾಪರಂಗಿಯ ಮಿಡ್‌ವೈಫ್ ಒಬ್ಬಳು ಶಾಸ್ತ್ರಿಗಳಿಗೆ ಗಂಟುಬಿದ್ದಿದ್ದಳು. ತಮಗೆ ಮದುವೆಯಾಗಿದ್ದರೂ ಇಲ್ಲವೆಂದು ಸುಳ್ಳು ಸುಳ್ಳು ಹೇಳಿದ್ದರು. ಪ್ರತಿನಿತ್ಯ ರಾಮಾಶಾಸ್ತ್ರಿಗಳ ರೂಮಿಗೆ ಮಿಡ್‌ವೈಫ್ ಭೇಟಿ ಕೊಡುತ್ತಿದ್ದರು. ಶ್ರೀರಂಗಪಟ್ಟಣಕ್ಕೆ ಶಾಸ್ತ್ರಿಗಳು ಬಂದ

ಮೇಲೆಯೂ ಎರಡು ಸಲ ಬಂದಿದ್ದಳು. "ಅವರ್‍ಯಾರು ಸಾರ್" ಎಂದು ಕಿಲಾಡಿ ಕೃಷ್ಣಪ್ಪ ಕೇಳಿಯೇ ಬಿಟ್ಟ. ಎಲ್ಲಕ್ಕೂ ಒಂದೇ ಮಂತ್ರ ಎನ್ನುವಂತೆ "ಅವರು ನನ್ನ she friend" ಎಂದರು ಶಾಸ್ತ್ರಿಗಳು.

ಮಂಡ್ಯದ ಜಿಲ್ಲೆ ಡಿ.ಈ.ಓ. ಸಾಹೇಬರಿಗೆ ಅನಂತಯ್ಯನವರ ಮೇಲೆ ಮೂಗರ್ಜಿಯೊಂದು ಬಂತು. ಅದರಲ್ಲಿ 'ಅನಂತಯ್ಯ ಸರಿಯಾಗಿ ಪಾಠವನ್ನೇ ಕ್ಲಾಸಿನಲ್ಲಿ ಮಾಡುವುದಿಲ್ಲ, ಪಾಠ ಹೇಳಿಕೊಡುವುದೇ ಬರುವುದಿಲ್ಲ, ತರಗತಿಯಲ್ಲಿ ಸದಾ ಗಪ್ಪಾಲಜಿ ಹೊಡೆಯುತ್ತಿರುತ್ತಾನೆ. ಸ್ವಲ್ಪವೂ ಲಜ್ಜೆಯಿಲ್ಲದೆ ಹೆಣ್ಣಿನ ವಿಚಾರ ಸದಾ ಮಾತಾಡುತ್ತಾ ಇರುತ್ತಾನೆ. ಕಾಮಶಾಸ್ತ್ರ ಹೇಳಿ ಹುಡುಗಿಯರ ಮುಖ ಮುರಿಯುತ್ತಾನೆ. ನಮ್ಮ ಹುಡುಗಿಯರ ಮಾನ ಹೋಗ್ತಾ ಇದೆ, ನೀವು ಬಂದು ಅನಂತಯ್ಯನವರನ್ನು ವಿಚಾರಿಸಿ ಕೆಲಸದಿಂದ ತೆಗೆಯದಿದ್ದರೆ ನಾಳೆಯಿಂದ ನಮ್ಮ ಹುಡುಗಿಯರನ್ನೆಲ್ಲಾ ಸ್ಕೂಲಿಗೇ ಕಳುಹಿಸುವುದಿಲ್ಲ' ಎಂದು ಬರೆದಿತ್ತು.

ಜನಾಬ್ ಅಮೀರ್‌ಖಾನರು ಮಂಡ್ಯದಿಂದ ಓಡಿ ಬಂದರು. ಹೆಡ್ ಮಾಸ್ಟರ್ ನರಸಿಂಹಯ್ಯನವರು ಸ್ಕೂಲಿಗೆ ರಜ ತೆಗೆದುಕೊಂಡಿದ್ದರು. ರಾಮಾಶಾಸ್ತ್ರಿಗಳೇ ಹೆಡ್‌ಮಾಸ್ಟರರಾಗಿದ್ದರು. ಬಂದವರು "ಅನಂತಯ್ಯನವರನ್ನು ಕರೆಸಿ" ಎಂದರು. ರಾಮಾಶಾಸ್ತ್ರಿಗಳು ತಾವೇ ಖುದ್ದು ಓಡಿ ಹೋಗಿ ಅನಂತಯ್ಯನವರನ್ನು ಕರೆತಂದರು.

"ಏನ್ರಿ ಅನಂತಯ್ಯನವರೇ, ಬಂದಿನ್ನೂ ಒಂದು ಬರಸ್‌ಬೀ ಆಗಿಲ್ಲ, ಆಗಲೇ ಬಿಚ್ಚಿ ಬಿಟ್ರಿ ನಿಮ್ಮ ಬಾಲ."

"ಹಾಗೇನು ನಾನು ತಪ್ಪು ಮಾಡಿಲ್ಲವಲ್ಲ ಸರ್."

"ಶಾದೀ ಗೀದಿ ಆಗಿದೆಯೇನ್ರಿ?"

"ಮಕ್ಕಳು ಬೇರೆ ಇದಾರೆ ಸಾರ್."

"ಇದೇನು ನೋಡ್ರಿ ಈ ಅರ್ಜಿ?" ಅನಂತಯ್ಯನವರು ಅರ್ಜಿ ಓದಿ ಜನಾಬರ ಕೈಯಲ್ಲಿ ಕೊಟ್ಟು ಸುಮ್ಮನೆ ನಿಂತರು.

"ಏನ್ರಿ ಇದು?"

"ನನಗೆ ಗೊತ್ತಿಲ್ಲ ಸಾರ್!"

"ಗೊತ್ತಿಲ್ಲದೆ ಅರ್ಜಿ ಕೈಸೆ ಬರ್‌ತೇದ್ರಿ?"

"ನನ್ನನ್ನು ಕೇಳಿದ್ರೆ ನಾನೇನು ಹೇಳಲಿ ಸಾರ್!"

"ಇನ್ಯಾರನ್ನು ಕೇಳಬೇಕ್ರಿ?"

"ಯಾರು ಬರೆದಿದ್ದಾರೆ ಅವರನ್ನು ಕೇಳಿ ಸಾರ್."

"ಅವರನ್ನೆಲ್ಲಿ ಹುಡುಕಿಕೊಂಡು ಹೋಗಲಿ ಅನಂತಯ್ಯ?"

"ಹೋಗಲಿ ಸ್ಕೂಲಿನ ಹುಡುಗರನ್ನು ಕೇಳಿ ಸರ್" ಎಂದರು ಅನಂತಯ್ಯನವರು.

ತರಗತಿಯಿಂದ ನಾಲ್ಕಾರು ಹುಡುಗರು ಹುಡುಗಿಯರುಗಳನ್ನು ಕರೆಸಿ ಅನಂತ ಉಪಾಧ್ಯಾಯರ ವಿಚಾರದಲ್ಲಿ ವಿದ್ಯಾರ್ಥಿಗಳಿಗಿರುವ ಅಭಿಪ್ರಾಯ ತಿಳಿದುಕೊಂಡರು. ಎಲ್ಲರೂ "ಒಳ್ಳೇ ದೇವರಂತ ಉಪಾಧ್ಯಾಯರು ಸಾರ್ ಅನಂತಯ್ಯನವರು. ಹೆತ್ತ ತಂದೆಗಿಂತ ಮಿಗಿಲಾಗಿ ನೋಡಿಕೊಳ್ಳುತ್ತಾರೆ. ಅವರೇನಾದ್ರು ಬಿಟ್ಹೋದ್ರೆ ನಾವೂ ಸ್ಕೂಲುಗಳನ್ನು ಬಿಡುತ್ತೇವೆ" ಎಂದರು.

ಡಿ.ಈ.ಓ. ಸಾಹೇಬರಿಗೆ ಬಗೆಹರಿಯಲಿಲ್ಲ. ಅರ್ಜಿಯನ್ನು ಕಸದ ಬುಟ್ಟಿಗೆ ಬಿಸಾಡಿ ಮಂಡ್ಯಕ್ಕೆ ತೆರಳಿದರು.

ತಮ್ಮ ಮೇಲೆ ಅರ್ಜಿ ಬರೆದವರಾರೆಂಬುದನ್ನು ಹುಡುಕುವ ಗೋಜಿಗೆ ಅನಂತಯ್ಯನವರು ಹೋಗಲಿಲ್ಲ. ಬರೆದವರ ಕಾಗದ ದಂಡಾಯಿತು, ಅವರ ಕೆಟ್ಟಗುಣ ಹೊರಬಂತು. ಡಿ.ಈ.ಓ. ಸಾಹೇಬರಿಗೆ ತಮ್ಮ ವಿಚಾರ ತಿಳಿಯಿತು ಎಂದು ಸುಮ್ಮನಾದರು. ಆದರೆ ವಿದ್ಯಾರ್ಥಿಗಳು ಅದನ್ನು ಅಲ್ಲಿಗೇ ಬಿಡಲಿಲ್ಲ. ಈ ಹೂಟವನ್ನು ಹಿಡಿಯಲು ಅಭಯ, ಬಸವರಾಜ, ರತ್ನಮಾಲೆಯರು ಗುಪ್ತಚಾರಿಗಳಾದರು.

ರತ್ನಮಾಲೆ ಸರಸ್ವತೀ ಸ್ತ್ರೀಸಮಾಜದ ಸದಸ್ಯೆ. ಆದ್ದರಿಂದ ಪ್ರತಿನಿತ್ಯ ಅಲ್ಲಿಗೆ ಹೋಗುತ್ತಾಳೆ. ಬಟ್ಟೆ ಹೊಲೆಯುವುದು, ಕಸೂತಿ ಹಾಕುವುದು, ಸ್ವೆಟರ್ ಹಾಕುವುದನ್ನು ಹೇಳಿಕೊಡುತ್ತಾರೆ. ನಾಟಕದಲ್ಲಿ ಅಭಿನಯಿಸುವುದು, ಸಂಗೀತ ಹಾಡುವುದನ್ನು ಕಲಿಸಿಕೊಡುತ್ತಾರೆ. ಸರಸ್ವತೀ ಸ್ತ್ರೀ ಸಮಾಜದ ಪಕ್ಕದಲ್ಲೇ ಶಾಸ್ತ್ರಿಗಳ ಮನೆಯಿರುವುದು. ರಾಮಾಶಾಸ್ತ್ರಿಗಳು ಚೆನ್ನಗಿರಿಯಲ್ಲಿ ನರ್ಸ್ ಮನೆಯ ಪಕ್ಕದಲ್ಲಿ ಮನೆ ಮಾಡಿದ್ದಾರೆ. ಶ್ರೀರಂಗಪಟ್ಟಣದಲ್ಲಿ ಸ್ತ್ರೀಸಮಾಜದ ಪಕ್ಕದಲ್ಲಿ ಮನೆ ಮಾಡಿದ್ದಾರೆ. ಅವರ ಮನೆಗೆ ಆಗಾಗ್ಗೆ ಬರುತ್ತಿದ್ದ ಏಕಮಾತ್ರ ಸ್ತ್ರೀವ್ಯಕ್ತಿಯೆಂದರೆ ವಿಮಲೆ. ಅದೇನೇನೋ

ಮಾಡಿ ವಿಮಲೆ ರಾಮಾಶಾಸ್ತ್ರಿಗಳಿಬ್ಬರ ಕೈವಾಡವೂ ಮೂಗರ್ಜಿಯಲ್ಲಿತ್ತೆಂದು ರತ್ನಮಾಲೆ ಹಿಡಿದಳು. ಅದು ಅಭಯಕುಮಾರನ ಮುಖಾಂತರ ವಿದ್ಯಾರ್ಥಿಗಳಲ್ಲೆಲ್ಲಾ ಹಬ್ಬಿತು. ತರಗತಿಯಲ್ಲಿ ರಾಮಾಶಾಸ್ತ್ರಿಗಳನ್ನು ಕೇಳಿಯೂ ಬಿಟ್ಟರು. "ಗೊತ್ತು ಗೊತ್ತು ನಿಮ್ಮ ಮೇಷ್ಟ್ರ ಸದಾಚಾರ ಕುಳಿತ್ಕೊಳ್ರೋ" ಎಂದು ಗದರಿಸಿದರು ರಾಮಾಶಾಸ್ತ್ರಿಗಳು.

೪

ರಥಸಪ್ತಮಿ ಶ್ರೀರಂಗಪಟ್ಟಣಕ್ಕೆ ದೊಡ್ಡ ಜಾತ್ರೆ. ಎಲ್ಲೆಡೆಯಿಂದಲೂ ಜನ ಬರುತ್ತಿದ್ದಾರೆ. ಎಲ್ಲ ರೈಲುಗಳಲ್ಲೂ ಮರದಮೇಲೆ, ಕೀಚವಾಲದ ಹಕ್ಕಿಗಳು ನೇತಾಡಿಕೊಂಡಿರುವಂತೆ, ಜನ ನೇತಾಕಿ ಕೊಂಡಿದಾರೆ. ಚೌಲ್ಟ್ರಿ, ಕಾರೊನೇಷನ್ ಬಿಲ್ಡಿಂಗು, ಟೀ.ಬಿ.ಗಳಲ್ಲಿ ಸ್ಥಳ ಸಾಲದೆ ನದಿಯ ದಡದಲ್ಲೇ ಜನ ತಮ್ಮ ಬಿಡಾರ ಬಿಟ್ಟಿದ್ದಾರೆ. ರಂಗನಾಥನ ಗುಡಿಯ ಮುಂದೆ ಹಣ್ಣು ಕಾಯಿನ ಅಂಗಡಿಗಳ, ಮಿಠಾಯಿ ಮಾರುವವರ ಗದ್ದಲವೇ ಗದ್ದಲ. ಅಲ್ಲಲ್ಲಿ ಮುದುಕಿಯರುಗಳು ಕುಕ್ಕೆಯಲ್ಲಿ ಇಡ್ಲಿ ಚಟ್ನಿ ಇಟ್ಟುಕೊಂಡು ಧೂಳು ಬರದಂತೆ ಆಲದ ಎಲೆಯಿಂದ ಬೀಸುತ್ತಿದ್ದರು. ಬಣ್ಣ ಬಣ್ಣದ ಬಟ್ಟೆಯಿಂದ ಮಾಡಿದ ಬಾವುಟಗಳನ್ನು ಸಿಗಿಸಿದ ಸುಂದರ ರಥ ಗುಡಿಯಿಂದ ಹೊರಟಿತು. ಕಾವೇರಿಯಲ್ಲಿ ತೀರ್ಥಸ್ನಾನ ಮಾಡಿಬಂದ ಜನ ಹಣ್ಣು ಜವನಗಳನ್ನು ತೇರಿನ ಮೇಲೆಸೆದರು. ತಾವೂ ಸ್ವಲ್ಪ ದೂರ ರಥ ಎಳೆದರು. ತೇರು ಸಂಪ್ರದಾಯದಂತೆ ಪೂರ್ಣಯ್ಯನ ಬೀದಿಯಲ್ಲಿ ಹೋಗಬೇಕು. ಇಲ್ಲದಿದ್ದರೆ ಊರಿಗೆ ವಿಪತ್ತಂತೆ. ಪೂರ್ಣಯ್ಯನ ಬೀದಿ ಸಣ್ಣದಾದರೂ ತೇರು ಅಲ್ಲಿಗೇ ಬಂದು ಹೋಗಬೇಕು. ಅಲ್ಲಿಗೆ ಬಂದಾಗ ಅನಂತ ಉಪಾಧ್ಯಾಯರು ಕಾಯಿ ಒಡೆದಿಟ್ಟು ಆರತಿಗೆ ಕೊಟ್ಟರು. ರುಕ್ಮಿಣಮ್ಮನವರು ಹಣ್ಣು ಜವನವನ್ನು ತೇರಿನ ಮೇಲೆಸೆದರು. ಸೀನಕ್ಕ ಚೆಂದಪ್ಪನವರಿಬ್ಬರೂ ಆರತಿ ಕೊಡಲಿಲ್ಲ. ಆದರೆ ತನ್ನ ಕಾಸಿನಲ್ಲೇ ಕಾಯಿ ತಂದು ಇಡಿಗಾಯಿ ಹಾಕಿದ ಅಭಯ. ಅದಕ್ಕೆ ಚೆಂದಪ್ಪನವರು ರೇಗದೇ ಇರಲಿಲ್ಲ.

ಮಧ್ಯಾಹ್ನ ಹನ್ನೆರಡಕ್ಕೆ ಸರಿಯಾಗಿ ರಥ ತಿರುವಿನಲ್ಲಿ ಬಂದು ನಿಂತಿತು. ಅಲ್ಲಿಯೇ ಬಿಟ್ಟು ಜನ ತಮ್ಮ ತಮ್ಮ ಮನೆಗೆ ಊಟಕ್ಕೆ ಹೋದರು. ತಮ್ಮ ಮನೆಗೇ ಊಟಕ್ಕೆ ಬರಬೇಕೆಂದು ಅಭಯಕುಮಾರ ಅನಂತ ಉಪಾಧ್ಯಾಯ

ರಿಬ್ಬರನ್ನೂ ರತ್ನಮಾಲೆ ಕರೆದಿದ್ದಳು. ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ಇಬ್ಬರೂ ಶ್ರೀಕಂಠಯ್ಯನವರ ಮನೆಗೆ ಊಟಕ್ಕೆ ಬಂದರು. ರತ್ನಮಾಲೆಯ ಪುಣ್ಯಕ್ಕೆ ಅವರಜ್ಜಿ ಸುಬ್ಬಮ್ಮನವರು ಗುಡಿಗೆ ಹೋಗಿದ್ದರು.

ಊಟಕ್ಕೆ ಮಜ್ಜಿಗೇಹುಳಿ, ಪುಳಿಯೋಗರೆಗಳನ್ನು ಮಾಡಿದ್ದರು. ಜೊತೆಗೆ ಶ್ರೀಕಂಠಯ್ಯನವರೂ ಊಟಕ್ಕೆ ಕುಳಿತರು. ಸೀತಮ್ಮನವರು ರತ್ನ ಇಬ್ಬರೂ ಊಟಕ್ಕೆ ಬಡಿಸುತ್ತಿದ್ದರು. ರತ್ನನ ತಂಗಿ ಸುಶೀಲ ಅಭಯನ ಹತ್ತಿರ ಕುಳಿತಳು.

"ಏನು ಅನಂತಯ್ಯನವರೆ ನಮ್ಮ ಹುಡುಗಿ ಹೇಗಿದ್ದಾಳೆ ಕ್ಲಾಸಿನಲ್ಲಿ ?"

"ನಂಬರ್ ಒನ್ ಆಗಿದ್ದಾಳೆ ಸಾರ್."

"ಏನೋ ನಾ ಬೇರೆ ಕಾಣೆ. ಈ ಸಲ ಪರೀಕ್ಷೆಯಲ್ಲಿ ಏನ್ಮಾಡ್ತಳೊ ?"

"ರತ್ನನಿಗೆ ಪಾಸು ಕೊಡದಿದ್ದರೆ ಮತ್ತಾರಿಗೆ ಕೊಡಬೇಕು ಶ್ರೀಕಂಠಯ್ಯನವರೆ !"

"ಮನೆಯಲ್ಲಿ ಒಂದು ದಿನವೂ ಪುಸ್ತಕ ಹಿಡಿದಿದ್ದನ್ನು ಕಾಣಲಿಲ್ಲ; ಅವರಜ್ಜಿ ಸದಾ ಬೈತಿರುತ್ತಾರೆ ನೋಡಿ ಅನಂತಯ್ಯನವರೆ."

"ಬರೀ ಓದಿದರಾಯಿತೆ ಲಾಯರೆ, ಲಾ ಪುಸ್ತಕವನ್ನೆಲ್ಲಾ ಬಾಯಿಪಾಠ ಮಾಡಿ ಕೇಸು ಗೆದ್ದುಬಿಡುತ್ತೀರೇನು ?"

"ಇಲ್ಲ."

"ಅದೇ ರೀತಿ ಮಕ್ಕೀಕಾ ಮಕ್ಕಿ ಓದಿಬಿಟ್ಟರಾಗಲಿಲ್ಲ ಸಾರ್. ಬುದ್ಧಿವಂತರು ಹೆಚ್ಚಿಗೆ ಓದುವುದೇಯಿಲ್ಲ ನೋಡಿ. ನಿಮ್ಮ ಹುಡುಗಿಯೂ ಅಂತಹ ಬುದ್ಧಿವಂತರ ಜಾತಿಗೆ ಸೇರಿದವಳು ಶ್ರೀಕಂಠಯ್ಯನವರೆ."

"ಏನೋ ಎಲ್ಲಾ ನಿಮ್ಮ ಕೈಯಲ್ಲಿಟ್ಟಿದ್ದೇನೆ ಅನಂತಯ್ಯನವರೆ" ಎಂದರು ಶ್ರೀಕಂಠಯ್ಯನವರು.

"ನಿಮ್ಮ ಮೇಷ್ಟ್ರಿಗೆ ಇನ್ನು ಸ್ವಲ್ಪ ಬಡಿಸೆ ರತ್ನ" ಎಂದರು ಲಾಯರ್ ಶ್ರೀಕಂಠಯ್ಯನವರು.

ಬೆಳಗಿನಿಂದ ಸಂಜೆಯವರೆಗೂ ಅಭಯಕುಮಾರ ಮನೆಗೆ ಬಂದಿರಲಿಲ್ಲ. ರಂಗನಾಥನ ಗುಡಿಯಿಂದ ತೇರು ಹೊರಟಾಗ ಮನೆ ಬಿಟ್ಟವನು, ತೇರು ಗುಡಿ ತಲುಪಿದರೂ ಅಭಯ ಮನೆ ತಲುಪಿರಲಿಲ್ಲ.

" ಎಲ್ಲಾಳಾಗೋದ ಕೇಳವ್ರು ಹೇಳವ್ರು ಯಾರೂ ಇಲ್ಲವಲ್ಲ ಇವನಿಗೆ ಎಂದು ವಟಗುಟ್ಟುತ್ತಿದ್ದರು ಚೆಂದವ್ವನವರು. ಗುಣಾವತಮ್ಮನವರಿಗೆ ಮಗ ಎಲ್ಹೋಗಿದ್ದಾನೆಂಬುದು ಗೊತ್ತಿತ್ತು. ಮಧ್ಯಾಹ್ನ ರುಕ್ಮಿಣಮ್ಮನವರ ಮನೆ ಗೋಗಿದ್ದಾಗ ಹೇಳಿದ್ದರು. ಆದರೆ ಅದನ್ನು ಚೆಂದವ್ವನವರ ಮುಂದೆ ಹೇಳಿರಲಿಲ್ಲ.

ಕೆಂಪು ನಾಲಿಗೆಯನ್ನು ತುಟಿಯ ಮೇಲಾಡಿಸುತ್ತಾ ಅಭಯಕುಮಾರ ಮನೆಗೆ ಬಂದ. ಅದೀಗ ಸಂಜೆಯಾಗಿತ್ತು. ಜಗುಲಿಯ ಮೇಲೆ ಚೆಂದವ್ವ ನವರು ಸೀನಕ್ಕನ ಕೂಡ ಮಾತನಾಡುತ್ತಾ ಕುಳಿತಿದ್ದರು. ಮನೆಯ ಹತ್ತಿರ ಬಂದಾಗ ಅಜ್ಜಿಯನ್ನು ನೋಡಿದ. ಮಾಸ್ತರ ಮನೆಗೆ ನುಗ್ಗಿ ಅವರ ಹಿತ್ತಲ ಗೋಡೆ ನೆಗೆದು, ಸೀನಕ್ಕನ ಮನೆಯ ಕದ ದಾಟಿ, ತಮ್ಮ ಮನೆಯ ಹಿತ್ತಲಿಗೆ ಬಂದ. ಅಲ್ಲಿ ಗುಣಾವತಿಯವರು ಬಾವಿಯಲ್ಲಿ ನೀರು ಸೇದುತ್ತಿದ್ದರು.

" ಇದೇನೋ ಇದು ಅಭೀ ಬೆಳಗಿನಿಂದಲೂ ಎಲ್ಹೋಗಿದ್ದೋ ಊಟನೂ ಮಾಡ್ದೆ ".

" ಊಟ ಆಯ್ತವ್ವ ಮೇಷ್ಟ್ರು ಮನೆಯಲ್ಲಿ."

" ಮತ್ತೆಲ್ಹೋಗಿದ್ದೆ ? "

" ನಮ್ಮ ಸ್ನೇಹಿತರೆಲ್ಲಾ ತಿಂಡಿ ತಂದಿದ್ದರು, ಅವರ ಜೊತೆಗೆ ದರಿಯಾ ದೌಲತ್ತಿಗೋಗಿದ್ನವ್ವ."

" ಹೊಗ್ಲಿ ಈಗ ಊಟ ಮಾಡ್ನಡಿ."

" ಇಲ್ಲಾವ್ವ ಹೊಟ್ಟೆ ತುಂಬಿದೆ."

ಎಂದು ತಾಯಿ ಮಕ್ಕಳು ಬಾವಿಯ ಪಕ್ಕದಲ್ಲಿ ನಿಂತು ಮಾತನಾಡು ತ್ತಿದ್ದರು. ನಾಭಿರಾಜಯ್ಯನವರು ಬಂದರು. ಸಂಜೆಯ ಊಟಕ್ಕೆ ಕುಳಿ ತರು. ಚೆಂದವ್ವನವರು ಬಂದು " ಏನೋ ನಾಭಿ ಮನೆಯ ಕಡೆ ಸ್ವಲ್ಪನೂ ನಿಗನೇ ಬೇಡ್ವೇನೊ, ಬೆಳಗ್ನಿಂದ ನಿನ್ನ ಮಗ ಎಲ್ಹೋ ಹೋದವ್ನು ಇನ್ನೂ ಬಂದೇಯಿಲ್ವಲೋ."

" ನಿನ್ನ ಎದುರಿಗೇ ಕುಳಿತವ್ನಲವ್ವ."

" ಬೆಳಿಗ್ಗೆ ಎಲ್ಲೂಟ ಮಾಡ್ದ ಕೇಳೋ."

" ರುಕ್ಮಿಣಿ ಮನೆಯಲ್ಲಾಯ್ತಜ್ಜಿ."

"ಆ ಸುಬ್ಬಮ್ಮನವರ ಮನೆಯಲ್ಲಿ ತಿನ್ನಿಲ್ವೇನೋ ಬಡವ."

"ಯಾರಜ್ಜಿ ನಿನಗೇಳ್ದವ್ರು."

"ಪಕ್ಕದ ಮನೆ ಸೀನಕ್ಕನನ್ನ ಕೇಳಿಸ್ಕೊಡೋನೋ."

"ಹೋಗಲಿ ಬಿಡವ್ವ ಇನ್ನೂ ಹುಡುಗರು ಅವಕ್ಕೇನು ಗೊತ್ತು." ಎಂದರು ನಾಭಿರಾಜಯ್ಯನವರು.

"ನೀವೆಲ್ಲಾ ಸೇರ್ಕಂಡಿ ನಾಳೆ ನನಗೂ ತಿನ್ನಿಸಿಬಿಡ್ತೀರೀ ಕಣ್ರೋ" ಎಂದೇಳಿ ಜಗುಲಿಯ ಮೇಲೆ ಸ್ಥಾಪಿತವಾಗಲು ಹೋದರು ಚೆಂದವ್ವನವರು.

'ಹರಿ, ಶಿವ' ಎಂದು ಜಪಿಸುತ್ತಾ ಗುಡಿಯಿಂದ ಸುಬ್ಬಮ್ಮನವರು ಮನೆಗೆ ಬಂದರು. ಶ್ರೀಕಂಠಯ್ಯನವರು ಹೊರಗೆ ಹೋಗಿದ್ದರು. ಸೀತಮ್ಮನವರು ಜಗುಲಿಯ ಮೇಲೆ ನಿಂತು ಪಕ್ಕದಮನೆ ಸಾವಿತ್ರಮ್ಮನವರ ಸಂಗಡ ಮಾತನಾಡುತ್ತಿದ್ದರು. ರತ್ನಮಾಲೆ ಹರಿಕಥೆಗೆ ಹೋಗಲು ಸೀರೆ ಉಟ್ಟುಕೊಳ್ಳುತ್ತಿದ್ದಳು.

ಸುಬ್ಬಮ್ಮನವರು ಬಂದವರು "ಲೇ ಸೀತ ನಿನಗೆ ಎಷ್ಟು ದಿನವೇ ಹೇಳಿದ್ದು ಯಾರಾರನ್ನೋ ಅಡಿಗೇ ಮನೆಗೆ ಸೇರಿಸ್ಕೊಬೇಡಾಂದಿದ್ದು, ಆ ಮೋಷ್ಟ್ರನ ಊಟದ ಮನೇಲೇ ಕೂರಿಸಿ ಊಟಕ್ಕೆ ಬಡಿಸ್ದಂತಲೇ, ಎಲ್ಲಾ ಹಾಳಾಯ್ತು, ಜಾತಿ ಕುಲಾನ್ನೋದು ನಿಮಗಿಲ್ಲದಿದ್ದರೆ ನಮಗೂ ಇಲ್ವೇನೇ" ಎಂದು ಕೂಗಾಡಿದರು.

"ನಿಮ್ಮ ಮಗನೇ ಕೂರಿಸ್ಕೊಂಡಿದ್ದು ನಮಗೇನುಗೊತ್ರತ್ತೆಮ್ಮ" ಎಂದರು ಸೀತಮ್ಮನವರು.

"ಇವತ್ತು ನಿನಗೆ ಉಪವಾಸವಲ್ವೇನಜ್ಜಿ ಊಟದ ಯೋಚನೆ ನಿನಗೇಕೆ ಬಿಡಜ್ಜಿ" ಅಂದಳು ಮೆಲ್ಲನೆ ರತ್ನಮಾಲೆ.

ಗುಡಿಯ ಮುಂದೆ ವಿಶಾಲವಾದ ಚಪ್ಪರ ಹಾಕಿದ್ದಾರೆ. ಜನ ಕಿಕ್ಕಿರಿದು ತುಂಬಿದ್ದಾರೆ. ಪುಟ್ಟಪುಟ್ಟ ಕೂಸುಗಳು ಕಿಯೋ ಪಿಯೋ ಅನ್ನುತ್ತಿವೆ. ಚಿಕ್ಕಚಿಕ್ಕ ಹುಡುಗರು ವೇದಿಕೆಯ ಮುಂದೆ ಬಂದು ಕುಳಿತುಕೊಳ್ಳುತ್ತಿದ್ದಾರೆ. ರುಕ್ಮಿಣಮ್ಮನವರು ಸೀತಮ್ಮನವರ ಹತ್ತಿರ ಕುಳಿತಿದ್ದಾರೆ.

"ನಿಮ್ಮ ಯಜಮಾನರು ಎಷ್ಟು ಒಳ್ಳೆಯವರು ರುಕ್ಮಿಣಮ್ಮನವರೆ, ಎಷ್ಟು ನಯವಾಗಿ ವಿನಯವಾಗಿ ಮಾತನಾಡುತ್ತಾರೆ, ನಮ್ಮ ರತ್ನ ಸದಾ ಅವರ ವಿಚಾರ ಹೇಳ್ತಾಳೇ ಇರ್ತಾಳೆ" ಅಂದರು ಸೀತಮ್ಮನವರು.

"ಆದರೇನು ಸೀತಮ್ಮನವರೆ ನಾವು ಬಡವರು ನಮ್ಮನ್ನು ಕೇಳ ವ್ರಾರು."

"ದುಡ್ಡಿನಲ್ಲಿ ಬಡವರಾದರೆ ವಿದ್ಯೆಯಲ್ಲಿ, ನಡತೆಯಲ್ಲಿ."

"ಏನ್ರಮ್ಮ ನೀವೇ ಹರಿಕಥೆಮಾಡ್ತಿದ್ದೀರಿ. ಕಥೆ ಕೇಳಲಿಷ್ಟವಿಲ್ಲ ದಿದ್ದರೆ ಮನೆಗೆದ್ಹೋಗಿ" ಎಂದರು ಸುಬ್ಬಮ್ಮನವರು. ಸುಬ್ಬಮ್ಮನವರನ್ನು ರೇಗಿಸಲು "ಅಹುದಮ್ಮ! ಅನಂತ ಉಪಾಧ್ಯಾಯರು ಸಾಮಾನ್ಯ ಮನುಷ್ಯ ರಲ್ಲಮ್ಮ, ಅವರೊಬ್ಬ ಯೋಗಿಗಳು" ಎಂದಳು ರತ್ನ.

"ಹರಿಕಥೆ ನಿಮಗೇಕ್ರೆ ಆ ಉಪಾಧ್ಯಾಯನ ಕಥೆಯಿರುವಾಗ" ಎಂದು ಸಿಡಿಗುಟ್ಟಿದರು ಸುಬ್ಬಮ್ಮನವರು.

ಚಂಡಿದಾಸರು 'ಗಿರಿಜಾ ಕಲ್ಯಾಣ' ಮಾಡುತ್ತಿದ್ದಾರೆ. ಚೆನ್ನಾಗಿ ಹಾಡುತ್ತಾರೆ. ಕಥೆ ಒಂದಾದರೆ ಉಪಕಥೆ ನಾಲ್ಕು ಸೇರಿಸಿ, ಜನರನ್ನು ಬೆರಗುಗೊಳಿಸುತ್ತಾರೆ. ಮಧ್ಯೆ ಮಧ್ಯೆ ಡಬ್ಬಿ ಡಬ್ಬಿ ನಶ್ಯ ಏರಿಸುತ್ತಾರೆ. ಕಟ್ಟುಕಟ್ಟು ಎಲೆ ಹಾಕಿಕೊಳ್ಳುತ್ತಾರೆ. ಗಂಟಲು ಸರಿಮಾಡಿಕೊಳ್ಳಲು ಚೆಂಬು ಚೆಂಬು ಪಾನಕ ಹಿಗ್ಗುತ್ತಾರೆ. ಉದ್ದವಾದ ನಿಲುವಂಗಿ ತೊಟ್ಟಿದ್ದಾರೆ. ಕತ್ತಿನಲ್ಲಿ ರುದ್ರಾಕ್ಷಿಮಾಲೆ ಹಾಕಿಕೊಂಡು ಹಣೆಗೆ ವಿಭೂತಿ ಬಳಿದಿದ್ದಾರೆ. ಅವರಿರುವುದು ರೈಲ್ವೆ ನಿಲ್ದಾಣದ ಹತ್ತಿರವಿರುವ ಗುಡಿಯಲ್ಲಿ ಅಲ್ಲಿ ಪ್ರತಿನಿತ್ಯ ಪುರಾಣ ಓದುತ್ತಾರೆ. ಪುರಾಣ ಕೇಳಲು ಬರುವವರು ಮುದುಕರು ಮುದುಕಿಯರುಗಳು. ಕಥೆಮಾಡುತ್ತಿದ್ದರೆ "ಆಹ! ಏನು ಹಾಡುತ್ತಾರೆ, ಸಾಕ್ಷಾತ್ ನಾರದನಂಗೆ" ಎನ್ನುತ್ತಿದರು ಮುದುಕಿಯರುಗಳು.

"ಭಲೆ! ಭಲೆ!" ಎಂದು ತಲೆದೂಗುತ್ತಿದ್ದರು. ನಶ್ಯ ಏರಿಸುತ್ತಿದ್ದ ಮುದುಕರುಗಳು, ಹರಿಕಥೆಯ ಕೊನೆಯತನಕ ಕುಳಿತವರು ಅನಂತ ಉಪಾಧ್ಯಾಯರೊಬ್ಬರೇ. ರುಕ್ಮಿಣಮ್ಮನವರು, ಸೀತಮ್ಮನವರುಗಳು ಮಾತ್ರವೇ.

ರಾತ್ರಿಯೆಲ್ಲಾ ನಿದ್ದೆ ಕೆಟ್ಟಿದ್ದರಿಂದ ಮಧ್ಯಾಹ್ನ ಹನ್ನೆರಡಾದರೂ ಅನಂತಯ್ಯನವರು ಏಳಲಿಲ್ಲ. ಆದರಲ್ಲೂ ಬೆಳಿಗ್ಗೆ ಅವರಿಗೆ ಯಾವ ಪೀರಿ ಯಡ್‌ಗಳೂ ಇರಲಿಲ್ಲ. ನರಸಿಂಹಯ್ಯನವರು ಮಧ್ಯಾಹ್ನ ಮೇಯಿಲ್

ಗಾಡಿಗೆ ಬರುವುದಾಗಿ ಹೇಳಿಕಳುಹಿಸಿದ್ದರು. ಸರಿ ರಾಮಾಶಾಸ್ತ್ರಿಗಳೇ ಇಂದು ಹೆಡ್‌ಮಾಸ್ಟರು. ಯಾವ ಕಾಗದಕ್ಕೆ ರುಜುಮಾಡಬೇಕಾದರೂ ಹೆಡ್‌ಮಾಸ್ಟರ್ ಎಂದು ಮಾಡುತ್ತಾರೆಯೇ ವಿನ, 'For Head-Master' ಎಂದು ಮಾಡುವ ಅಭ್ಯಾಸವನ್ನು ಶಾಸ್ತ್ರಿಗಳು ಬೆಳೆಸಿಲ್ಲ. ಅನಂತಯ್ಯನವರು ಅರ್ಜೆಂಟ್ ಸ್ಕೂಲಿಗೆ ಹಾಜರಾಗಬೇಕೆಂದು ಕಾಗದ ಕಳುಹಿಸಿದರು. ಕಾಗದ ತಂದ ಬೋರ. ಅನಂತಯ್ಯನವರು ಮಲಗಿದ್ದನ್ನು ನೋಡಿ ಏಳಿಸಲು ಮನಸ್ಸಾಗದೆ ಹಿಂತಿರುಗಿದ. "ನಿದ್ರೆಮಾಡ್ತಾ ಇದಾರೆ ಸಾರ್" ಎಂದು ಬೋರ ಹೇಳಲಾಗಿ "ಚ! ಚ! class hours ನಲ್ಲಿ ಸುಖ ನಿದ್ರೆಯಾಗಬೇಕೋ" ಎಂದು ಒಂದು ದಿನ L. W. A. ರಜಹಾಕಿ ಬಿಟ್ಟರು. ಮಧ್ಯಾಹ್ನ ನರಸಿಂಹಯ್ಯನವರು ಬಂದರು. ಅನಂತಯ್ಯನವರು ತರಗತಿಯಲ್ಲಿ ಪಾಠಮಾಡುತ್ತಿದ್ದರು. ಆದರೆ ರಜ ಇದೆ ಅವರ ಹೆಸರಿನಲ್ಲಿ. ಏನೆಂದು ವಿಚಾರಿಸಲು, ರಾಮಾಶಾಸ್ತ್ರಿಗಳ ಹೆಡ್‌ಮಾಸ್ಟರಗಿರಿಯ ಪ್ರಸಾದವೆಂದು ಗೊತ್ತಾಯಿತು.

೫

ಸೀನಕ್ಕನ ಮನೆಯಿರುವುದು ಅನಂತ ಉಪಾಧ್ಯಾಯರ, ನಾಭಿರಾಜಯ್ಯನವರ ಮನೆಗಳ ಮಧ್ಯದಲ್ಲೇ ದೊಡ್ಡ ಮನೆ. ನಲವತ್ತು ಕಂಬಗಳ ಹಟ್ಟಿಯಿದೆ, ದಿವಾನಖಾನೆಯಿದೆ. ಆದರೆ ಅಲ್ಲಿ ಇರುವವರು ಮೂರೇಮೂರು ಜನ. ಮನೆಯ ಯಜಮಾನ ಲೋಕಪಾಲ ಇದ್ದೂ ಇಲ್ಲದಂತೆಯಿದ್ದಾನೆ. ಬೆಳಗಿನಿಂದ ಸಂಜೆಯವರೆಗೂ ಚಾಪೆಯಮೇಲೆ ದಿಂಬೂ ಇಲ್ಲದೆ ಮಲಗಿರುತ್ತಾನೆ. ಸ್ನಾನಮಾಡುವುದು ಮೂರುದಿನಕ್ಕೊವ್ಮೆ. ಮುಖದ ಮೇಲೆಲ್ಲಾ ಗಡ್ಡ ಮೀಸೆಗಳು ಬೆಳೆದು ನಿಂತಿವೆ. ಬಟ್ಟೆಗಳಂತೂ ಎಣ್ಣೆಗೆ ಅಜ್ಜಿದಂತಿವೆ. ಇಂತಹ ವಿಕಾರರೂಪ ಲೋಕಪಾಲನಿಗೆ ಬಂದದ್ದು ಈಗ್ಗೆ ಕೆಲವು ವರ್ಷಗಳಿಂದೀಚೆಗೆ ಮಾತ್ರ.

ಒಳ್ಳೆಯವರ ಮನೆಯಲ್ಲೇ ಹುಟ್ಟಿ ಬೆಳೆದ ಲೋಕಪಾಲ. ಅವರ ತಂದೆ ಒಳ್ಳೆಯ ಆಸ್ತಿಮಾಡಿ ಮಗನಿಗೆ ಕೊಟ್ಟುಹೋದರೇ ಹೊರತು, ಅದನ್ನು ಉಪಯೋಗಿಸುವ ಬಗೆ ಹೇಳಿಕೊಡಲಿಲ್ಲ. ಅವರ ಅಣ್ಣ ವಿದ್ಯ

ವಂತನಾಗಿ ಮೈಸೂರು ಸೇರಿದ. ಶ್ರೀಪಾಲ ಬಣ್ಣದ ಅಂಗಡಿ ಇಟ್ಟುಕೊಂಡು ಮುಂದೆ ಬಂದ. ತನ್ನ ತಮ್ಮನನ್ನೂ ಮೈಸೂರಿಗೇ ಬರುವಂತೆ ಪ್ರೇರೇಪಿಸಿದ. ಸೀನಕ್ಕ ಯಜಮಾನರನ್ನು ಮೈಸೂರಿಗೆ ಹೋಗಲು ಬಿಡಲಿಲ್ಲ.

ಅಲ್ಲೇ ಜಮೀನು ನೋಡಿಕೊಂಡು ಮನೆಗಳನ್ನು ಬಾಡಿಗೆಗೆ ಕೊಟ್ಟುಕೊಂಡು ಜೀವನ ನಡೆಸುತ್ತಿದ್ದ ಲೋಕಪಾಲ. ಸೀನಕ್ಕನನ್ನು ನೋಡಿದಾಗ ಮದುವೆಯಾಗುವುದಿಲ್ಲವೆಂದು ಹೇಳಿದ್ದ. ಆದರೆ ಅವರ ತಂದೆ ಬಲವಂತದಿಂದ ಮದುವೆ ಮಾಡಿದ್ದರು. ಈಗ ಅವನ ತಂದೆಯಿಲ್ಲ. ಬೇರೆ ಮದುವೆಯಾಗಬೇಕೆಂದು ಓಡಾಡುತ್ತಿದ್ದಾನೆ. ತನ್ನ ಹೆಂಡತಿಗೆ ಖಾಯಿಲೆಯಾದ್ದರಿಂದ ಬೇರೆ ಮದುವೆಯಾಗಬೇಕೆಂದು ಕುಳಿತನು. ಮದುವೆಯ ಹುಚ್ಚು ಅವನ ಮನಸ್ಸಿನಲ್ಲಿ ಬೇರೂರಿತು. ಖಾಯಿಲೆ ಗುಣವಾಗಲಿಲ್ಲ. ಮನಸ್ಸಿನ ಖಾಯಿಲೆಯದು. ಮದುವೆಯೇ ಔಷಧಿ. ತಮ್ಮನಿಗೆ ಮದುವೆಮಾಡಲು ಶ್ರೀಪಾಲ ಓಡಾಡಿದ ಸೀನಕ್ಕನ ಅವತಾರ ನೋಡಿ ಶ್ರೀಪಾಲ ಮೈಸೂರಿನಿಂದ ಬರಲೇಯಿಲ್ಲ. ತನ್ನ ಗಂಡ ಚೆಂದಾಗಿದ್ದರೆ ತಾನೆ ಮದುವೆಯಾಗುವುದೆಂದು ಮಾಟಮಾಡಿಸಿ, ಮತ್ತಿನ ಔಷಧಿ ಕೊಡಿಸಿ, ತಲೆ ಕೆಡಿಸಿ, ಮೂಲೆಯಲ್ಲಿ ಕೂರಿಸಿದಳು. ಬೀಗದಕೈ ಸೀನಕ್ಕನ ಕೈಗೆ ಬಂತು. ಗಂಡ ಬೀಡಿಗೆ ಅರ್ಧಾಣೆ ಬೇಕಾದರೂ ಹೆಂಡತಿಯನ್ನು ಕೈಯೊಡ್ಡಿ ಕೇಳಬೇಕು. ದರ್ಬಾರು ರಾಣಿಯದಾಯಿತು. ಸೀನಕ್ಕನಿಗೆ ಆಡಳಿತದ ಮುಕುಟಬಂದ ತಕ್ಷಣ ಮನೆಯಲ್ಲಿ, ಮನೆಯ ಹೊರಗಡೆ ನಾನಾ ಬದಲಾವಣೆಗಳಾದವು. ಎರಡೊತ್ತು ಅಡಿಗೆ ಮಾಡುತ್ತಿದ್ದವಳು ಒಂದೊತ್ತಿಗೇ ಇಳಿಸಿದಳು. ಕಾಫಿಯ ಹೆಸರೇ ಅವಳ ಮನೆಯಲ್ಲಿ ಇರಲಿಲ್ಲ. ಕಾಫಿ ಕುಡಿಯಬೇಕೆಂದರೆ ಪಕ್ಕದ ಮನೆಯವರು ತಿಂಡಿಗೆ ಕಾಫಿಗೆ ಕುಳಿತಾಗ ಕೆಲಸ ಹಚ್ಚಿ ಬರುತ್ತಾಳೆ. ಬಂದವಳಿಗೆ ಕಾಫಿ ಕೊಡದೆ ಕಳುಹಿಸುವಷ್ಟು ನಿಷ್ಠುರರಲ್ಲ ನಾಭಿರಾಜಯ್ಯನವರ ಅನಂತಯ್ಯನವರ ಮನೆಯವರು. ಅಕ್ಕಪಕ್ಕದ ಮನೆಗಳು ಸೀನಕ್ಕನಿಗೇ ಸೇರಿದ್ದವು. ಅವುಗಳ ಬಾಡಿಗೆಯನ್ನು ಹತ್ತರಿಂದ ಹದಿನೈದಕ್ಕೇರಿಸಿದಳು. ಬಾಗಿಲು ಬಿದ್ದೇ ಹೋಗುತ್ತಿದೆ, ಗೋಡೆ ಉದುರುತ್ತಿದೆ, ಲೈಟು ಇಲ್ಲವೇ ಇಲ್ಲವಲ್ಲಾಂದ್ರೆ "ಕಾಸಿಗೆ ತಕ್ಕಾಗಿ ಕಜ್ಜಾಯ, ಇಪ್ಪತ್ತೈದು ರೂಪಾಯಿಗಳನ್ನು ಕೊಡಿ ಸರಿಮಾಡಿಸಿಕೊಡುತ್ತೇನೆ" ಎನ್ನುವಳು.

ಅನಂತಮಾಸ್ತರಿಗೆ ಬರುವುದು ಅರವತ್ತೇ ರೂಪಾಯಿ ಸಂಬಳ. ಇದರಲ್ಲಿ ಹದಿನೈದು ರೂಪಾಯಿ ಬಾಡಿಗೇನೆ ಕೊಟ್ಟರೆ ಸಂಸಾರ ಹೇಗೆ ನಡೆಸಬೇಕು. ಮನೆಯಲ್ಲಿ ಎರಡು ಮೂರು ಮಕ್ಕಳಿದಾವೆ. ಅವಕ್ಕೆ ಹಾಲೇನು, ಬಟ್ಟೆಯೇನು, ಸ್ಕೂಲಿನ ಫೀಜೇನು, ತಾವೇನು ತಿನ್ನುವುದು, ಹೆಂಡತಿಗೇನು ಸೀರೆ ತರುವುದು. ಸರ್ಕಾರದ ಅಪ್ಪಣೆ ಬೇರೆ 'ಮಾಸ್ಟರು ಸೂಟು ಬೂಟಿನಲ್ಲೇ ಬರಬೇಕೆಂದು'. ಮುನಿಸಿಪಾಲಿಟಿಯವರು ನಮ್ಮ ಹತ್ತಿರ ದುಡ್ಡೇ ಇಲ್ಲ ಸರ್ಕಾರದವರನ್ನು ಕೇಳಿಹೋಗಿ ಎನ್ನುತ್ತಾರೆ. ಸಂಬಳ ತಲುಪುವುದು ಹದಿನೈದು, ತಪ್ಪಿದರೆ ಇಪ್ಪತ್ತನೆಯ ತಾರೀಖು. ಅದರ ಮೊದಲು ಬಂದರೆ ಮಾಸ್ಟರ ಪುಣ್ಯ.

ಈ ತಿಂಗಳು ಇಪ್ಪತ್ತಾದರೂ ಸಂಬಳವಿಲ್ಲ. ನಮ್ಮ ಹತ್ತಿರ ದುಡ್ಡಿಲ್ಲವೆಂದು ಖಡಾಖಂಡಿತವಾಗಿ ಮುನಿಸಿಪಾಲಿಟಿಯವರು ಹೇಳಿಬಿಟ್ಟರು. ಸರ್ಕಾರದವರಿಗೆ ಬರೆದರೆ ನಮಗೂ ಮುನಿಸಿಪಲ್ ಹೈಸ್ಕೂಲಿಗೂ ಏನೂ ಸಂಬಂಧವಿಲ್ಲವೆಂದುಬಿಟ್ಟರು. "ಉಪಾಧ್ಯಾಯರೆಲ್ಲಾ ಸತ್ಯಾಗ್ರಹ ಮಾಡಲು ಯೋಚಿಸಿದರು, ಅನಂತ ಉಪಾಧ್ಯಾಯರು ಮಾತ್ರ ಇಷ್ಟಪಡಲಿಲ್ಲ, ಸತ್ಯಾಗ್ರಹದಿಂದ ವಿದ್ಯಾರ್ಥಿಗಳಿಗೆ ಪಾಠ ನಷ್ಟವೇ ಹೊರತು ಅಧಿಕಾರಿಗಳಿಗೇನಿಲ್ಲ, ಮುಂದಿನ ಜನಾಂಗವನ್ನು ತಯಾರುಮಾಡುವ ನಾವೇ ಈ ರೀತಿ ಸತ್ಯಾಗ್ರಹ ಮಾಡಿದರೆ ಜನಾಂಗವು ಹೇಗೆ ಮುಂದೆ ಬಂದೀತು. ಇರಲಿ ಈಗಿಲ್ಲದಿದ್ದರೆ ಮುಂದಿನ ತಿಂಗಳು ಸಂಬಳ ಕೊಡುತ್ತಾರೆ. ನಮ್ಮ ಕೆಲಸ ನಾವು ಶ್ರದ್ಧೆಯಿಂದ ಮಾಡಿದರೆ ಅದರ ಪ್ರತಿಫಲ ಬಂದೇ ಬರುತ್ತದೆ" ಎಂದು ಸತ್ಯಾಗ್ರಹವನ್ನು ರದ್ದುಮಾಡಿಸಿದರು.

ಬೆಳಗ್ಗೆ ಎದ್ದು ಬೀದಿಯಬಾಗಿಲು ಗುಡಿಸಲು ಬಂದಾಗ "ಇದೇನು ರುಕ್ಮಿಣಮ್ಮನವರೆ, ಬಾಡಿಗೆ ಕೊಡಲು ಇನ್ನೆಷ್ಟು ದಿನಗಳಾಗಬೇಕು?" ಎಂದಳು ಸೀನಕ್ಕ.

"ಇನ್ನೂ ಸಂಬಳ ಬಂದಿಲ್ಲ ಕೊಡ್ತೀವಿ ಸ್ವಲ್ಪ ತಡೀರಿ ಸೀನಕ್ಕನವರೆ."

"ಹಾಲಿನವನಿಗೆ, ಬೆಣ್ಣೆಯವಳಿಗೆ ನಾವು ಕೊಡಬೇಡವೆ ರುಕ್ಮಿಣಮ್ಮನವರೆ?"

"ನಿಮ್ಮಂತಹ ಸಾಹುಕಾರರೇ ಹೀಗೆಂದರೆ ನಮ್ಮಂತಹವರ ಗತಿ ಯೇನು?"

"ನಾವೆಂತಹ ಸಾಹುಕಾರರು ರುಕ್ಮಿಣಮ್ಮನವರೆ, ನಿಮಗಾದರೆ ದುಡಿಯುವ ಗಂಡಸು ಮನೇಲಿದ್ದಾನೆ."

"ಇಷ್ಟು ದಿನವೇ ತಡೆದಿದ್ದೀರಿ, ಇನ್ನು ಸ್ವಲ್ಪದಿನ ತಡೆದ್ಬಿಡಿ ಸೀನಕ್ಕನವರೆ, ಎರಡು ತಿಂಗಳದ್ದೂ ಒಟ್ಟಿಗೆ ಸೇರಿಸಿ ಕೊಟ್ಬಿಡ್ತೀವಿ" ಅಂದರು ರುಕ್ಮಿಣಮ್ಮನವರು.

"ತಿಂಗಳು ಕಳೆಯಿತು. ಸಂಬಳ ಬರಲಿಲ್ಲ. ಉಪಾಧ್ಯಾಯರುಗಳಿಗೇಗೆ ಮುಖತೋರಿಸುವುದೆಂದು ನರಸಿಂಹಯ್ಯನವರಿಗೆ ನಾಚಿಕೆಯಾಯಿತು. ಮುನಿಸಿಪಲ್ ಪ್ರೆಸಿಡೆಂಟರ ಹತ್ತಿರ ನಾಲ್ಕಾರು ಬಾರಿ ಓಡಾಡಿದರು. ಏನೂ ಸಫಲವಾಗದೆ ಬೆಂಗಳೂರಿಗೆ ಹೋಗಿ ಡಿ. ಪಿ. ಐ. ಕಂಡರು. ಅಲ್ಲೂ ಏನೂ ಆಗಲಿಲ್ಲ. ಕೊನೆಗೆ ಒಂದು ತಿಂಗಳು ರಜ ತೆಗೆದುಕೊಂಡು ತಮ್ಮೂರಿಗೆ ಹೊರಟುಹೋದರು ನರಸಿಂಹಯ್ಯನವರು.

ಅನಂತಯ್ಯನವರಿಗೆ ಸಂಬಳ ಬರಲಿಲ್ಲ. ಅವರಿಗೆ ಬೇರಾವಕಡೆಯೂ ಉತ್ಪತ್ತಿ ಬರುತ್ತಿರಲಿಲ್ಲ. ಹಾಲಿನವನು ಪ್ರತಿದಿನ ದುಡ್ಡು ಕೇಳುತ್ತಿದ್ದಾನೆ. ಸೀನಕ್ಕನ ತಗಾದೆಯಂತೂ ನಕ್ಷತ್ರಕನ ತಗಾದೆಯಾಗಿದೆ. ಹೊಳೆಯ ಹತ್ತಿರ, ಗುಡಿಯ ಹತ್ತಿರ, ಬೀದಿಯಲ್ಲಿ ಎಲ್ಲೂ ಬಿಡದೆ ಬಾಡಿಗೆ ಕೇಳುತ್ತಾಳೆ. ರುಕ್ಮಿಣಮ್ಮನವರಿಗೂ ಬಹಳ ನಾಚಿಕೆಯಾಯಿತು. ನಾಲ್ಕಾರು ದಿನಗಳು ಮನೆಯಿಂದ ಹೊರಗೇನೇ ಬರಲಿಲ್ಲ. ಆದರೂ ಬಿಡಬೇಕಲ್ಲ. ಸೀನಕ್ಕ ಮನೆಯ ಹಿತ್ತಲಲ್ಲೇ ನಿಂತು ರುಕ್ಮಿಣಮ್ಮನವರನ್ನು ಬಯ್ಯುತ್ತಿದ್ದಳು. ಇದನ್ನು ತಡೆಯಲಾರದೆ ಕತ್ತಿನಲ್ಲಿದ್ದ ಚೈನನ್ನು ಯಜಮಾನರಿಗೆ ಕಾಣದಂತೆ ನೀಲಕಂಠಾಚಾರಿಗೆ ಮಾರಿ ಬಂದಹಣದಿಂದ ಬಾಡಿಗೆ ತೀರಿಸಿದರು. ಹಾಲಿನವನಿಗೆ ಕೊಟ್ಟರು. ಉಳಿದ ಹಣವನ್ನು ಅನಂತಯ್ಯನವರ ಕೈಗೆ ಕೊಟ್ಟರು. "ಇದೆಲ್ಲಿತ್ತೆ ರುಕ್ಕು ಹಣ" ಎನ್ನಲಾಗಿ; "ತೌರು ಮನೆಯವರು ಕಳುಹಿಸಿದರು" ಎಂದು ಸುಳ್ಳುಸುಳ್ಳು ಹೇಳಿದರು ರುಕ್ಮಿಣಮ್ಮನವರು. ಮಾವನ ಮನೆಯಿಂದ ಹಣ ತರಸಿಕೊಳ್ಳಬೇಕಾಯಿತಲ್ಲಾಂದು ಅನಂತಯ್ಯನವರಿಗೆ ನಾಚಿಕೆಯಾಗದೆ ಇರಲಿಲ್ಲ.

ಸ್ಕೂಲಿನಲ್ಲಿಯೂ ಪೂರ್ಣ ಬದಲಾವಣೆಯಾಗಿದೆ. ನರಸಿಂಹಯ್ಯನವರು ರಜದಮೇಲೋದ ಮೇಲೆ ಆ ಸ್ಥಳಕ್ಕೆ ರಾಮಾಶಾಸ್ತ್ರಿಗಳು ಬಂದರು. ಬಂದವರು ಆಫೀಸು ರೂಮನ್ನೂ ಉಪಾಧ್ಯಾಯರ ಕೊಠಡಿಯನ್ನೂ ಬೇರ್ಪಡಿಸಿದರು. ಮೊದಲಾದರೆ ಎರಡೂ ಒಟ್ಟಿಗೇಯಿತ್ತು.—ಬೇಸರವಾದಾಗ ನರಸಿಂಹಯ್ಯನವರು ಕಾಡರಟೆ ಕೊಚ್ಚುತ್ತಿದ್ದರು. ಉಪಾಧ್ಯಾಯರಾರಾದರೂ ಬರುವುದು ತಡವಾದರೆ ತಾವೇ ಅವರ ಕ್ಲಾಸನ್ನು ತೆಗೆದುಕೊಳ್ಳುತ್ತಿದ್ದರು.

ಈಗ ಹನ್ನೊಂದಕ್ಕೆ ಸರಿಯಾಗಿ ಉಪಾಧ್ಯಾಯರುಗಳೆಲ್ಲಾ ಹಾಜರಾಗಬೇಕೆಂದೂ, ಸಂಜೆ ಐದರ ತನಕ ಅಲ್ಲೇ ಇರಬೇಕೆಂದೂ, 'ಮೆಮೋ' ಹಾಕಿದ್ದಾರೆ. ರಜ ಬೇಕಿದ್ದರೆ ಮೂರು ದಿನಗಳ ಮುಂಚೆ ತಿಳಿಸಬೇಕೆಂದೂ ಹುಡುಗರೆಲ್ಲಾ ಕೋಟು ಟೋಪಿ ಧರಿಸಿ ಬರಬೇಕು. ಗಂಟೆಯಾದಮೇಲೆ ವರಾಂಡದಲ್ಲಿ ಯಾರೂ ಅಲೆದಾಡಕೂಡದು, ರಸ್ತೆಯಲ್ಲಿ ಹೆಡ್‌ಮಾಸ್ಟರರನ್ನು ಕಂಡರೆ ಎಲ್ಲರೂ ನಮಸ್ಕಾರ ಹೊಡೆಯಬೇಕೆಂಬ ನಿಯಮಗಳನ್ನು ರಾಮಾಶಾಸ್ತ್ರಿಗಳು ಬಿಚ್ಚಿದರು. ಅವರ ಆಫೀಸು ರೂಮಿನ ಹೊರಗಡೆ "ಇನ್, ಔಟ್" ಗಳು ಬಂದವು. ನೋಡುವಕಾಲ ಬೇರೆ ಕಾಣಿಸಿಕೊಂಡಿತು. ಆದರೆ ಹುಡುಗಿಯರು ಬಂದರೆ ಎಲ್ಲ ಕಾಲದಲ್ಲೂ ಪ್ರವೇಶವುಂಟು. ಅದರಲ್ಲೂ ಸೀನಕ್ಕನ ಮಗಳು ವಿಮಲೆಗೆ ಸದಾ ಕದ ತೆರೆದಿರುತ್ತೆ.

ವಿಮಲೆ ಬಂದವಳು ಆಫೀಸು ರೂಮಿಗೆ ನುಗ್ಗಲು ಹೋದಳು. ಹೊರಗಡೆ ರಿವಾಲಿ ಧರಿಸಿ ನಿಂತಿದ್ದ ಬೋರ "ಇದು ಸಾಹೇಬರನ್ನು ನೋಡುವ ಕಾಲವಲ್ಲ" ಎಂದು ತಡೆದನು.

"ಯಾರೋ ಬೋರ ಅದು" ಎಂದು ಕೂಗಿದರು ರಾಮಾಶಾಸ್ತ್ರಿಗಳು.

"ವಿಮಲಮ್ಮನವರು ಬುದ್ಧಿ" ಎಂದ ಬೋರ.

"ಹಾಗಾದರೆ ಬಿಡೋ ಬೋರ" ಎಂದರು ಸಾಹೇಬರು ಒಳಕ್ಕೆ ಬಂದ ವಿಮಲೆಗೆ ಒಂದು ಕುರ್ಚಿಕೊಟ್ಟರು ಸಾಹೇಬರು.

"ಏನು ಸಾರ್! ಹೇಳಿಕಳುಹಿಸಿದಿರಲ್ಲಾ"

"ಹಾಗೆಯೇ ಸುಮ್ಮನೆ ಬೇಜಾರಾಯಿತು ಹೇಳಿ ಕಳುಹಿಸಿದೆ ವಿಮಲ."

"ಪಾಠ ಆಗ್ತಾ ಇದೆ ಹೋಗ್ತೀನೀ ಸಾರ್"

"ಕುಳಿತುಕೋ ವಿಮಲ ಪಾಠ ಇದ್ದೇ ಇರ್ತದೆ."

" ಇಲ್ಲಾ ಸಾರ್ ಬಹಳ ' ಇಂಪಾರ್ಟೆಂಟ್ ' ಅಂತೆ, ಚೆನ್ನಾಗಿದೆ ಅನಂತಯ್ಯನವರು ಸೊಗಸಾಗಿ ಹೇಳ್ತಿದ್ದಾರೆ, ಪರೀಕ್ಷೆಗೆ ಬರ್ತ್ತದಂತೆ.''

" ನಾನಿರುವಾಗ ಪರೀಕ್ಷೆಯ ವಿಚಾರ ನಿನಗೇಕೆ ಕುಳಿತುಕೋ ವಿಮಲ.''

" ಇತ್ತ ಬಾ ವಿಮಲ '' ಎಂದು ತಮ್ಮ ಕುರ್ಚಿಯ ಸಮೀಪಕ್ಕೆ ಕರೆದರು ರಾಮಾಶಾಸ್ತ್ರಿಗಳು. ಬರಲು ವಿಮಲೆಗೆ ನಾಚಿಕೆಯಾಯಿತು. ಆದರೂ ಬಂದಳು. ಬಂದು ಅವರ ಪಕ್ಕದಲ್ಲೇ ಕುಳಿತಳು.

" ಏಕೆ ನೆನ್ನೆ ರಾತ್ರಿ ಮನೆಗೆ ಪಾಠಕ್ಕೆ ಬರಲಿಲ್ಲವಲ್ಲ? ''

" ನೆನ್ನೆ ಊರಲ್ಲಿರಲಿಲ್ಲ ಸಾರ್ ! ''

" ಎಲ್ಲೋಗಿದ್ದೆ ?''

" ಮೈಸೂರಿಗೆ ನಮ್ಮ ದೊಡ್ಡಪ್ಪನವರ ಮನೆಗೋಗಿದ್ದೆ ಸಾರ್.''

" ನನಗೆ ಹೇಳಿದ್ದರೆ ನಾನೂ ಬರುತ್ತಿದ್ದನಲ್ಲ, ಇಬ್ಬರೂ ಗಾಯತ್ರೀ ಟಾಕೀಸಿಗೆ " Hundred Kisses " ಸಿನಿಮಾಕ್ಕೋಗಬಹುದಾಗಿತ್ತಲ್ಲ.''

" ಇದ್ದಕ್ಕಿದ್ದಂತೆಯೇ ಹೊರಡಬೇಕಾಯಿತು ಸಾರ್.''

ಸಿನಿಮಾ ಇಲ್ಲದಿದ್ದರೆ ಇಲ್ಲೇ ಸಿನಿಮಾ ಆಡೋಣವೆಂದು ವಿಮಲೆಯ ಸಮೀಪಕ್ಕೆ ಸಾಹೇಬರು ಬಂದರು. ಬಂದವರು ಅವಳ ರೆಟ್ಟೆಗಳೆರಡನ್ನು ಹಿಡಿದುಕೊಂಡು ಮುಖವನ್ನು ಮೇಜಿನ ಮೇಲೆ ಮಲಗಿಸಿದರು. ಕಿಟಕಿಯಿಂದ ಗಾಳಿ ಜೋರಾಗಿ ಬೀಸಿತು. ಅದರಿಂದ ವಿಮಲೆಯ ಎದೆಯ ಮೇಲಿದ್ದ ಸೆರಗು ಚೆಲ್ಲಾಪಿಲ್ಲಿಯಾಯಿತು. ತಲೆಯ ಕೂದಲೆಲ್ಲಾ ಮುಖದ ಮೇಲೆ ಹಾರಾಡಿತು. ಈ ದೃಶ್ಯ ರಾಮಾಶಾಸ್ತ್ರಿಗಳನ್ನು ಉದ್ರೇಕಿಸಿತು. ವಿಮಲೆಯನ್ನು ಬಿಗಿಯಾಗಿ ಅಪ್ಪಲು ಹೋದರು. ಅಷ್ಟರಲ್ಲಿ " ಸಾರ್ ! ಸ್ಕೂಲ್ ಡೇ ಗೆ ಯಾವ ನಾಟಕ ಅಭಿನಯಿಸುವುದು " ಎಂದು ರತ್ನಮಾಲೆ, ನಿರ್ಮಲೆಯರು ಬಂದರು. ಬಂದವರ ಕಣ್ಣಿಗೆ ಒಳ್ಳೇ ದೃಶ್ಯವೇ ಬಿತ್ತು. ಹಾಗೆಯೇ ಕಣ್ಣು ಮುಚ್ಚಿಕೊಂಡು ಹಿಂತಿರುಗಿದರು.

ಸಾಹೇಬರಿಗೆ ಗಾಬರಿಯಾಯಿತು. ಬೋರನ ಮೇಲೆ ರೇಗಿಬಿದ್ದರು. " ಆ ವೇಳೆಯಲ್ಲಿ ಬೇರೆ ಯಾರನ್ನೂ ಬಿಡಬೇಡವೆಂದು ಹೇಳಿರಲಿಲ್ಲವೇನೋ ಕತ್ತೆ ; ನಿನಗೆ ಒಂದು ರೂಪಾಯಿ ಫೈನ್ ಹಾಕಿದ್ದೇನೆ ಹೋಗು '' ಎಂದರು

ವಿಮಲೆಯ ಮುಖದ ಮೇಲೆಲ್ಲಾ ಬೆವರು ಹರಿಯತೊಡಗಿತು. ಗೆಳತಿಯರಿಗೆ ಹೇಗೆ ಮುಖ ತೋರಿಸುವುದೆಂದು ನಾಚಿ ತರಗತಿಗೆ ಹೋಗದೆ ಮನೆಯ ಕಡೆ ಹೋದಳು. ಮಧ್ಯಾಹ್ನ ರಾಮಾಶಾಸ್ತ್ರಿಗಳೇ ಖುದ್ದಾಗಿ ಬಂದು ಹಾಜರಿಕೊಟ್ಟರು.

ಸ್ಕೂಲ್ ಡೇ, ಚೌಲ್ಟ್ರಿ ಮೈದಾನದಲ್ಲಿ ಮಾಡುವುದೆಂದು ತೀರ್ಮಾನವಾಯಿತು: ಭಾಷಣಗಾರರನ್ನು ಕರೆಸುವ ವಿಚಾರದಲ್ಲಿ, ನಾಟಕ ಯಾವುದನ್ನು ಅಭಿನಯ ಮಾಡುವುದೆನ್ನುವ ವಿಚಾರದಲ್ಲಿ ಸ್ವಲ್ಪ ಗಲಾಟೆಯಾಯಿತು. ರಾಮಾಶಾಸ್ತ್ರಿಗಳಿಗೆ ಯಾವುದಾದರೂ ಇಂಗ್ಲೀಷು ನಾಟಕ ಅಭಿನಯಿಸಬೇಕೆಂದು. ಆದರೆ ಕಾರಂತರ 'ಕಿಸಾಗೋತಮಿ' ಆಡಬೇಕೆಂದು. ಕೊನೆಗೆ 'ಕಿಸಾಗೋತಮಿ'ಯೆಂದೇ ತೀರ್ಮಾನವಾಯಿತು. ರಾಮಾಶಾಸ್ತ್ರಿಗಳು ತಾವೂ ಪಾತ್ರವಹಿಸುವುದಾಗಿ ಅದರಲ್ಲೂ ಷೇಕ್ಸ್‌ಪಿಯರನ 'ಬಾಟಮ್'ನ ಹಾಗೆ ಎಲ್ಲಾ ಪಾತ್ರಗಳನ್ನೂ ತಾವೊಬ್ಬರೇ ಅಭಿನಯಿಸುವುದಾಗಿ ಹೇಳಿದರು. ಹೆಡ್‌ಮಾಸ್ಟರು ಅಧ್ಯಕ್ಷರು ಇತರ ಕೆಲಸಗಳ ಮೇಲ್ವಿಚಾರಣೆ ನೋಡಿಕೊಳ್ಳಬೇಕಾದ್ದರಿಂದ ಪಾತ್ರವಹಿಸುವುದು ಬೇಡವೆಂದು ತೀರ್ಮಾನವಾಯಿತು. ಇನ್ನು ಮುಖ್ಯ ಭಾಷಣಕಾರರನ್ನು ಕರೆಸುವುದೆಂಬ ವಿಚಾರದಲ್ಲಿ ಶಾಸ್ತ್ರಿಗಳು ಡಿ. ಇ. ಓ. ಕರೆಸಿದರಾಯಿತೆಂದು, ಅನಂತಯ್ಯನವರು ಇಂತಹ ಕೆಲಸಕ್ಕೆಲ್ಲಾ ಹೆಸರಾದಂತ ಕನ್ನಡ ಸಾಹಿತಗಳನ್ನೋ ಅಥವಾ ಕಾಲೇಜಿನ ಅಧ್ಯಾಪಕರನ್ನೋ ಕರೆಸಬೇಕೆಂದು ಸೂಚಿಸಿದರು. ಎಲ್ಲರೂ ಇದಕ್ಕೆ ಒಪ್ಪಿಗೆಕೊಟ್ಟರು.

ನಾಟಕದ ಮೇಲ್ವಿಚಾರಣೆ ಬಸವರಾಜನಿಗೆ ಬಿತ್ತು. ಒಳ್ಳೆಯ ನಟರನ್ನು ಹುಡುಕುವ ಕೆಲಸಕ್ಕೆ ಕೈಹಾಕಿದ ಬಸವರಾಜ. ವಿದ್ಯಾರ್ಥಿಗಳಲ್ಲಿ ಯಾರಾದರೂ ಪಾತ್ರವಹಿಸುವುದಾದರೆ ಹೆಸರು ಕೊಡಬೇಕೆಂದು ಕೇಳಿದ. ಮೂರುನಾಲ್ಕು ಹೆಸರು ಬಂತು. ಬುದ್ಧನ ಪಾತ್ರ ಅಭಯಕುಮಾರ, ಕಿಸಾಗೋತಮಿಯ ಪಾತ್ರ ರತ್ನಮಾಲೆ, ಆನಂದನ ಪಾತ್ರ ಬಸವರಾಜನದೆಂದು ಗೊತ್ತಾಯಿತು. ತಾನು ಕಿಸಾಗೋತಮಿಯ ಪಾತ್ರವನ್ನು ವಹಿಸುವುದಾಗಿ ವಿಮಲೆ ಹೇಳಿದಳು. ಒಂದು ಸಾರಿ ಅಭಿನಯಮಾಡಿಸಿ ನೋಡಿದ. ಶೂರ್ಪಣಖಿಯ ಪಾತ್ರಕ್ಕೆ ಲಾಯಕ್ಕೇ ಹೊರತು ಕಿಸಾಗೋತಮಿಯ

ಪಾತ್ರಕ್ಕೆ ವಿಮಲೆಯು ಅಸಾಲಾಯಕ್ಕೆಂಬುದು ಸರ್ವಾನುಮತದಿಂದ ತೀರ್ಮಾನವಾಯಿತು. ರಾಮಾಶಾಸ್ತ್ರಿಗಳು ಮಧ್ಯ ಮಧ್ಯೆ ಪ್ರವೇಶಿಸಿದರು. ಅವರನ್ನು ತೃಪ್ತಿ ಪಡಿಸಲು ವಿಮಲೆಗೆ ಒಬ್ಬಳು ಗೃಹಿಣಿಯ ಪಾತ್ರಕೊಟ್ಟರು.

ಸ್ಕೂಲ್‌ಡೇ ಬಂತು. ಸ್ಕಾಟ್ ಬಂಗಲೆಯಲ್ಲಿ ತಿಂಡೀ ಫೊಟೋಗಳ ಏರ್ಪಾಡಾಗಿತ್ತು. ಇನ್ನೂರು ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು, ಉಪಾಧ್ಯಾಯರುಗಳೂ, ಮುಖ್ಯ ಅತಿಥಿ ದ. ರಾ. ಬೇಂದ್ರೆಯವರು ಎಲ್ಲರೂ ಸ್ಕೂಲಿನಿಂದ ಬಂಗಲೆಗೆ ಬಂದರು. ಅಲ್ಲಿ ವಿಶಾಲವಾದ ವನದಲ್ಲಿ ಗಾಯತ್ರೀಭವನದವನು ತಿಂಡಿಗೆ ಏರ್ಪಾಡುಮಾಡಿದ್ದ. ತಿಂಡಿ ಮುಗಿದಮೇಲೆ ಬೇಂದ್ರೆಯವರು ಬಂಗಲಿ ನೋಡಲು ಹೋದರು. ರಾಮಾಶಾಸ್ತ್ರಿಗಳು ಚರಿತ್ರೆಯ ಮೇಷ್ಟ್ರಾದ್ದರಿಂದ ಶ್ರೀರಂಗಪಟ್ಟಣದ ಇತಿಹಾಸವನ್ನೆಲ್ಲಾ ಇದ್ದದ್ದು, ಇಲ್ಲದೇಯಿದ್ದದ್ದನ್ನೆಲ್ಲಾ ಸೇರಿಸಿ ಬುರುಡೆ ಹೊಡೆಯುತ್ತಾ ಬಂದರು. "ಅಹುದು ಅಹುದು" ಎಂದು ಕೋಲೇಬಸವನ ಹಾಗೆ ತಲೆ ಅಲ್ಲಾಡಿಸುತ್ತಾ ಬರುತ್ತಿದ್ದರು, ಕನ್ನಡದ ಕಣ್ವಾದ ಅಂಬಿಕಾತನಯದತ್ತರು. ಹುಡುಗರೆಲ್ಲಾ ಅಲ್ಲಲ್ಲೆ ಗುಂಪು ಗುಂಪು ನಿಂತು ಕೋಟಿಗೆ ಹೂವು ಸಿಗಿಸುತ್ತಿದ್ದರು. ಕ್ರಾಪು ಬಾಚಿಕೊಳ್ಳುತ್ತಿದ್ದರು. ಹುಡಗಿಯರನ್ನು ಕದ್ದು ಕದ್ದು ನೋಡುತ್ತಿದ್ದರು. ರತ್ನಮಾಲೆ ಯಾವುದೋ ಮರದ ಕೆಳಗೆ ಕುಳಿತು ತನ್ನ ಪಾತ್ರ ಗಟ್ಟಿ ಮಾಡಿ ಕೊಳ್ಳುತ್ತಿದ್ದಳು.

ಎಲ್ಲರೂ ಚೌಲ್ಟ್ರೀ ಮೈದಾನಕ್ಕೆ ಬಂದರು. ವೇದಿಕೆಯ ಮೇಲೆ ಬೇಂದ್ರೆಯವರು, ರಾಮಾಶಾಸ್ತ್ರಿಗಳು ಕುಳಿತರು. ರತ್ನಮಾಲೆ ನಿರ್ಮಲೆಯರಿಂದ ಪ್ರಾರ್ಥನೆಯಾದಮೇಲೆ ಅಭಯಕುಮಾರರ ಸ್ವಾಗತ ಭಾಷಣ ಓದಿದ. ಅನಂತ ಉಪಾಧ್ಯಾಯರನ್ನು ಹೊಗಳುವ ಒಂದು ಪುಟ ಅದರಲ್ಲಿ ಸೇರಿತ್ತು. ರಾಮಾಶಾಸ್ತ್ರಿಗಳು ದುರುದುರುನೆ ನೋಡಿದರು. ಇತರ ಉಪಾಧ್ಯಾಯರುಗಳು ಮಾತ್ರ, ಅನಂತಯ್ಯನವರ ಬೆನ್ನು ಚಪ್ಪರಿಸಿದರು. ಕರತಾಳಗಳು ಒಂದೇ ಸಮನೆ ಮಳೆಯ ಹನಿಯಂತೆ ಸಭೆಯಿಂದ ಬರುತ್ತಿತ್ತು. ಬೇಂದ್ರೆಯವರಿಗೆ ಇದೇನೆಂಬುದು ಗೊತ್ತಾಯಿತು. ಏಕೆಂದರೆ ಅವರೂ ಒಬ್ಬರು ಮಾಸ್ತರು. ಅನಂತಯ್ಯನವರು ಹುಡುಗರ ಹೃದಯದಲ್ಲಿ ಪ್ರೇಮಸಾಮ್ರಾಜ್ಯ ಸ್ಥಾಪಿಸಿದ್ದರೆಂದು ತಿಳಿದುಕೊಂಡರು.

ಬೇಂದ್ರೆಯವರು ಮಾತನಾಡುವ ಮುನ್ನ ಅನಂತ ಉಪಾಧ್ಯಾಯರನ್ನು ಮಾತನಾಡಬೇಕೆಂದು ಕೇಳಿಕೊಂಡರು. ನಾನು ಮಾತನಾಡುವುದಿಲ್ಲವೆಂದು ಅನಂತಯ್ಯನವರು ಹೇಳುತ್ತಿದ್ದರೂ, ಜಿಡವೆ ವೇದಿಕೆಯ ಮೇಲೆ ತಂದು ನಿಲ್ಲಿಸಿದರು. ಅನಂತಯ್ಯನವರು ಬಂದು ನಿಂತರು. ಸಭೆಯಿಂದ ಸುರು ವಾಯಿತು ಮತ್ತೊಮ್ಮೆ ಚಪ್ಪಾಳೆಗಳ ಸಪ್ಪಳಗಳು, ಓ! ಓ! ಎಂದು ಹುಡುಗರು ತಮ್ಮ ಟೋಪಿಗಳನ್ನೆಲ್ಲಾ ಮೇಲೆಸೆದರು. ತುಟಿ ಪಿಟಕ್ಕೆನ್ನದೆ ಸಭೆ ಕುಳಿತಿತ್ತು.

"ಪೂಜ್ಯ ಬೇಂದ್ರೆಯವರೆ, ಹೆಡ್ ಮಾಸ್ಟರೇ, ಹಿರಿಯರೇ, ಮತ್ತು ನೆಚ್ಚಿನ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳೇ. ಅನಿರೀಕ್ಷಿತವಾಗಿ ನಿಮ್ಮ ಮುಂದೆ ನನ್ನನ್ನು ಈ ಕನ್ನಡ ಸಾಹಿತ್ಯಯೋಗಿ ತಳ್ಳಿದ್ದಾರೆ. ಸಾಹಿತ್ಯದಲ್ಲಿ ಯೋಗವನ್ನು ಬೆರೆಸಿದ ಈ ಕನ್ನಡದ ಕಣ್ಮಣಿ ಅಂಬಿಕಾತನಯದತ್ತನ ಮುಂದೆ ನಾನು ನಿಲ್ಲುವುದೆಂದರೆ ಸಿಂಗನ ಮುಂದೆ ಮಂಗ ನಿಂತಂತಾಗುತ್ತದೆ. ಆದರೂ ಯೋಗಿಯ ಅಪ್ಪಣೆಯಾಗಿದೆ. ಎರಡು ಮಾತು ನಿಮ್ಮಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ. ನನ್ನ ಮಾತು ಕೇವಲ ವಿದ್ಯಾರ್ಥಿಗಳಿಗೆ. ಮಿಕ್ಕದ್ದನ್ನೆಲ್ಲಾ ಬೇಂದ್ರೆಯವರು ಹೇಳುತ್ತಾರೆ.

ಹಿಂದೂಧರ್ಮದಲ್ಲಿ ರಾಮಕೃಷ್ಣ ಪರಮಹಂಸರ, ಸ್ವಾಮಿ ವಿವೇಕಾನಂದರ ಹೆಸರು ಮನೆ ಮಾತಾಗಿದೆ. ಒಬ್ಬರು ಮೂಲ ಮೂರ್ತಿಯಾದರೆ ಇನ್ನೊಬ್ಬರು ಉತ್ಸವ ಮೂರ್ತಿ. ಒಬ್ಬರು ದಕ್ಷಿಣೇಶ್ವರದಲ್ಲಿ ಕುಳಿತು ಧರ್ಮ ಪ್ರಚಾರ ಮಾಡಿದರೆ, ಇನ್ನೊಬ್ಬರು ನಾಡಿನ ಮೂಲೆಮೂಲೆಯಲ್ಲಿ ಸಂಚರಿಸಿ, ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ಉಪನಿಷತ್ತಿನ ಅಮರಸಂದೇಶ ಸಾರಿದರು. ಅದೇರೀತಿ ವಿದ್ಯೆಯೆಂಬ ಗುಡಿಗೆ ಎರಡು ಮೂರ್ತಿಗಳಿದಾವೆ. ಸರಸ್ವತಿ ಮೂಲಮೂರ್ತಿ. ಆಕೆ ಸದಾ ಗುಡಿಯಲ್ಲೇ ಇರುತ್ತಾಳೆ. ಆಕೆ ಅಗೋಚರಿ, ಆಕೆಯ ಪ್ರತಿನಿಧಿ ಗುರು. ಈತ ಉತ್ಸವ ಮೂರ್ತಿ. ಆಕೆಯ ಸಂದೇಶವನ್ನು ಒಯ್ಯುವ ಧೂತ ಈತ. ಆದ್ದರಿಂದ ಅವನಲ್ಲಿ ಸರಸ್ವತಿಯ ಅಂಶ ಅಡಗಿದೆ. ನೀವು ಅವನಿಗೆ ಸರಿಯಾದ ಮನ್ನಣೆ, ಮರ್ಯಾದೆ, ಗೌರವ ಕೊಡಬೇಕು. ಅವನಿಲ್ಲದಿದ್ದರೆ ಸರಸ್ವತಿಯ ದರ್ಶನ ಮಾಡಲಾರರಿ. ಆದ್ದರಿಂದಲೇ ಬಸವಣ್ಣನವರು ಹೇಳಿದ್ದು "ಶಿವಪಥವನರಿವಡೆ ಗುರುಪಥವೆ

ಮೊದಲು" ಎಂದು. ನಿಮ್ಮನ್ನು ಸುಸಂಸ್ಕೃತರನ್ನಾಗಿ ಕಡೆಯುವ ಅಮರ ಶಿಲ್ಪಿ; ನಿಮ್ಮನ್ನು ತಿದ್ದಿ ಒಳ್ಳೆಯ ಜ್ಞಾನದ ರಸ್ತೆಯಲ್ಲಿ ನಡೆಸುವ ರಸ್ತಾಸೂಚಕ ಗುರು.

ವಿದ್ಯೆಯ ಗುರಿ ಪಶುತ್ವದಿಂದ ಮಾನವತ್ವಕ್ಕೆ ಅಲ್ಲ ಮಾನವತ್ವದಿಂದ ದೈವತ್ವಕ್ಕೆ ಏರುವುದು. ನಮ್ಮ ನುಡಿ, ನಡತೆ, ಶೀಲ, ಆಚಾರಗಳು ಹದವಾಗಬೇಕು, ಮೃದುವಾಗಬೇಕು. ತಾಮಸಿಕ ಭಾವನೆಯನ್ನು ನಮ್ಮ ಮನಸ್ಸಿನಿಂದ ಕಿತ್ತೊಗೆಯಬೇಕು. ಅಲ್ಲಿ ಸಾತ್ವಿಕ ನೆಲೆಯಾಗಬೇಕು. ಇತರರಲ್ಲಿ ಸಹನೆ ಬೇಕು. ನಮ್ಮ ಜೀವನದ ಸರ್ವ ಕಾರ್ಯಗಳನ್ನೂ ಅಹಿಂಸೆ ಪುಟಗೊಳಿಸಬೇಕು.

ವಿದ್ಯಾರ್ಥಿಗಳೇ! ನೀವೆಲ್ಲಾ ನಮ್ಮ ಸ್ಕೂಲನ್ನು ಬಿಟ್ಟುಹೋಗುತ್ತಿದ್ದೀರಿ. ಇಷ್ಟು ದಿನಗಳೂ ನಿಮಗೆ ಪಾಠ ಹೇಳಿದ್ದಕ್ಕೆ ನೀವು ಕಾಣಿಕೆ ಕೊಡಬೇಕು. ತಿಂಡಿ ತಿನ್ನಿಸಲಿಲ್ಲವೇ ಎನ್ನಬಹುದು ನೀವು. ಆದರೆ ನಮಗೆ ಬೇಕಿದ್ದು ಅದಲ್ಲ. ನಮಗೆ ಬೇಕಾದ ಕಾಣಿಕೆ ಬೇರೆ. ನಿಮ್ಮ ವಿದ್ಯಾಗಂಗೆ 'ಏ' ಕ್ಲಾಸಿನಲ್ಲಿ ಹುಟ್ಟಿ ಮೆಟ್ರಿಕ್ಕು, ಇಂಟರು, ಬಿ.ಎ. ಎಂಬ ಹಳ್ಳ, ತಿಟ್ಟು, ಕಣಿವೆಗಳನ್ನು ಹಾಯ್ದು ಪದವೀಧರನೆಂಬ ಬಂಗಾಳಾ ಕೊಲ್ಲಿಯಲ್ಲಿ ಐಕ್ಯವಾಗುತ್ತದೆ. ಹಾಗೆ ಗಂಗೆ ಹರಿದುಹೋಗುವಾಗ ಅಲ್ಲಲ್ಲೇ ಕಾಶೀ, ಅಲಹಾಬಾದು, ಹರಿದ್ವಾರಗಳಂತೆ ಪುಣ್ಯಕ್ಷೇತ್ರಗಳನ್ನು ಕಟ್ಟಿಕೊಂಡು ಅರ್ಚಕರು ದೇವರನ್ನು ಪೂಜಿಸುತ್ತಾರೆ. ದೇವರ ದರ್ಶನವಾಗಬೇಕಾದರೆ ಅರ್ಚಕರಿಗೆ ಕಾಣಿಕೆ ಕೊಡಬೇಕು. ಹಾಗೆಯೇ ಈ ವಿದ್ಯಾಗಂಗೆಯ ದಡದಲ್ಲಿ ಹೈಸ್ಕೂಲು ಕಾಲೇಜುಗಳೆಂಬ ಕ್ಷೇತ್ರಗಳಿವೆ. ಸರಸ್ವತಿಯ ದರ್ಶನವಾಗಬೇಕಾದರೆ ಗುರುವಿಗೆ ದಕ್ಷಿಣೆ ಕೊಡಬೇಡವೆ? ನಾವು ಕೇಳುವ ದಕ್ಷಿಣೆ ದುಡ್ಡಲ್ಲ. ನೀವು ಎಲ್ಲಿ ಹೋದರೂ ನರಸಿಂಹಯ್ಯನವರ ಶಿಷ್ಯರು ಒಳ್ಳೆಯವರಪ್ಪ, ಶ್ರೀರಂಗಪಟ್ಟಣದ ಹೈಸ್ಕೂಲಿನ ಹುಡುಗರು ನಿದಾನವಂತರಪ್ಪ ಎಂದು ಜನ ಹೇಳಿದರೆ, ಅಷ್ಟೇ ಕಾಣಿಕೆ ನಮಗೆ ಸಾಕು. ಕೊನೆಯಲ್ಲಿ ಆದಿಕವಿ ಪಂಪನ ಮಾತಿನಲ್ಲಿ ಮುಕ್ತಾಯಮಾಡುತ್ತೇನೆ. "ಯಾರಂ ಕುಶಮಿಟ್ಟೊಡಂ ಎನ್ನ ಮನ ನೆನೆವುದು ಬನವಾಸಿ ದೇಶಮುನ್" ಎನ್ನುವ ಪಂಪನ ಮಾತಿನಂತೆ ಎಲ್ಲಿ ಹೋದರು, ನಿಮ್ಮ ಮನ ನೆನೆಯಲಿ ಶ್ರೀರಂಗಪಟ್ಟಣದ ಹೈಸ್ಕೂಲನ್ನು ಎಂದು, ಅನಂತಯ್ಯನವರು ಮಾತು ಮುಗಿಸಿದರು.

ಬೇಂದ್ರೆಯವರು ಮಾತನಾಡಲು ಮೇಲೆದ್ದರೂ ಅನಂತ ಉಪಾಧ್ಯಾಯರನ್ನುದ್ದೇಶಿಸಿ ಹೊಡೆಯುತ್ತಿದ್ದ ಚಪ್ಪಾಳೆಗಳು ನಿಂತಿರಲಿಲ್ಲ. "ಈಗ ಅರ್ಥವಾಗಬಹುದು ನಿಮಗೆ ಮಂಗ ಯಾರು ಸಿಂಗಯಾರೆಂಬುದಾಗಿ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಏಕೆಂದರೆ ಗಂಟಲು ತುಂಬ ತಿಂದು ತೃಪ್ತಿಯಾಗಿರುವ ನಿಮಗೆ ವಾಂತಿಯಾಗಬಹುದು'' ಎಂದು ಒಂದರ್ಧಗಂಟೆ ಕನ್ನಡ ಸಾಹಿತ್ಯದ ಮೇಲೆ ಮಾತನಾಡಿದರು ಬೇಂದ್ರೆಯವರು.

ಭಾಷಣಗಳೆಲ್ಲಾ ಮುಗಿದ ಮೇಲೆ ಪರದೆ ಮೇಲೋಯಿತು. ಬುದ್ಧದೇವನ ರೂಪತಾಳಿ ಅಭಯ ಕುಮಾರ ಧ್ಯಾನದಲ್ಲಿ ಕುಳಿತಿದ್ದ. ಅಲ್ಲೇ ವನದಲ್ಲಿ ಗೆಡ್ಡೆಗೆಣಸುಗಳನ್ನು ಅರಸುತ್ತಾ ಆನಂದನಿದ್ದಾನೆ. ಆಗ ಕಿಸಾಗೋತಮಿ ತನ್ನ ಸತ್ತ ಮಗುವನ್ನು ಎತ್ತಿಕೊಂಡು ಅಳುತ್ತಾ ಬರುತ್ತಾಳೆ. ಬುದ್ಧನ ಹತ್ತಿರ ಅವಳನ್ನು ಆನಂದ ಕರೆತರುತ್ತಾನೆ. ಅವಳಿಗೆ "ಸಾವಿಲ್ಲದಾ ಮನೆಯಲ್ಲಿ ಸಾಸಿವೆಯ ತಾರಮ್ಮ" ಎಂದು ಬುದ್ಧ ಹೇಳಿದಮೇಲೆ ತರಲಾಗದೆ, 'ಜೀವಕ್ಕೆ ಸಾವುನೆಂಟು' ಎಂದು ಅರಿವಾಗಿ ಹೊರಟುಹೋಗುತ್ತಾಳೆ.

ಸಾಕ್ಷಾತ್ ಬುದ್ಧ ದೇವನೇ ಅವತರಿಸಿ ಬಂದಿದ್ದಾನೆಯೋ ಎಂದು ಅಭಯ ಕುಮಾರ ಅಭಿನಯಿಸಿದ. ಅವನ ರೂಪು, ಮಾತಿನ ನಯ, ಉಡುಪುಗಳೆಲ್ಲಾ ಬುದ್ಧನದೇ ಆಗಿತ್ತು. ಬಸವರಾಜ ಆನಂದನಾಗಿದ್ದ. ಗುರು ಶಿಷ್ಯರ ಪಾತ್ರ ಸ್ವಾಭಾವಿಕವಾಗಿತ್ತು.

ರತ್ನಮಾಲೆಯಂತೂ ಜನರನ್ನು ಮುಗ್ಧಗೊಳಿಸುವಂತೆ ಹಾಡಿದಳು, ಅಭಿನಯಿಸಿದಳು. ಅವಳ ದುಃಖದ ನುಡಿಗಳಂತೂ ಎಲ್ಲರ ಕಣ್ಣಿನಲ್ಲಿಯೂ ನೀರು ತರಿಸಿತು. ಮಾತಿನ ಮಾಧುರ್ಯ, ನುಣ್ಪು, ಪಳಗಿದ ನಟಿಯರ ಬಾಯಿಂದ ಬಂದಂತಿತ್ತು. ಇನ್ನೂ ಕೇವಲ ಹುಡುಗಿ ಇಷ್ಟು ಚೆನ್ನಾಗಿ ಅಭಿನಯಿಸುವುದೆಂದರೆ ಎಲ್ಲರಿಗೂ ಆಶ್ಚರ್ಯವೇ ಸರಿ. ಅಂತು ಎಲ್ಲರ ತಲೆಯನ್ನೂ ತೂಗಿಸಿಬಿಟ್ಟಳು ರತ್ನಮಾಲೆ. ನಾಟಕ ಮುಗಿದ ಮೇಲೆ ಬೇಂದ್ರೆಯವರು ರಂಗಸ್ಥಳಕ್ಕೆ ಬಂದು ರತ್ನಮಾಲೆಗೊಂದು ಅಭಯ ಕುಮಾರನಿಗೊಂದೊಂದು ಹೂವಿನ ಹಾರವನ್ನು ಹಾಕಿದರು. "ಇದು ನಿಜವಾಗಿಯೂ ಸಲ್ಲಬೇಕಾದ್ದು ನಮಗಲ್ಲ ಅವರಿಗೆಂದು" ಅನಂತಯ್ಯನವರ ಕತ್ತಿಗೆ ರತ್ನಮಾಲೆ ಅಭಯ ಕುಮಾರ ಹಾರ ಹಾಕಿದರು.

ರಾತ್ರಿ ಮನೆಗೆ ಬಂದ ಶ್ರೀಕಂಠಯ್ಯನವರು ತಮ್ಮ ಹೆಂಡತಿಯೊಂದಿಗೆ "ಲೇ ಸೀತಾ ಯಾರೆ ಆ ಹುಡುಗಿ ಕಿಸಾಗೋತಮಿಯ ಪಾತ್ರ ವಹಿಸಿದ್ದು ಎಷ್ಟು ಚೆನ್ನಾಗಿ ಹಾಡಿದಾಳೆ ನಟಿಸಿದಾಳೆ."

ಸೀತಮ್ಮನವರಿಗೆ ಅವಳಾರೆಂಬುದು ಗೊತ್ತಿತ್ತು. ಆದರೆ ಯಜಮಾನರಿಗೆ ಹೇಳಿರಲಿಲ್ಲ. "ನನಗೆ ಗೊತ್ತಿಲ್ಲಾಂದ್ರೆ" ಎಂದರು.

"ಆ ಬುದ್ಧನ ಪಾತ್ರವೂ ಅಷ್ಟೇ ಚೆನ್ನಾಗಿತ್ತೆ, ಏನು ಜೋಡಿಯೇ ಅವರದು, ನಾಟಕಾಂದ್ರೆ ಹೀಗಿರಬೇಡವೆ, ನಮ್ಮವರೂ ಕಂಸಾಸುರನವಧೆ, ಸಂಪೂರ್ಣ ರಾಮಾಯಣ ಎಂದು ಕುಣಿದಿದ್ದೇ ಕುಣಿದಿದ್ದು."

"ಎಲ್ಲಾ ಅನಂತ ಉಪಾಧ್ಯಾಯರ ತಯಾರಿಯಂತೇಂದ್ರೆ."

"ಅವರನ್ನು ಬಿಡೆ, ಅವರಿಗೆ ಯಾವ ಕಲೆ, ವಿದ್ಯೆ ಬರೋಲ್ಲ."

"ಆ ಕಿಸಾಗೋತಮಿಯ ಪಾತ್ರ ವಹಿಸಿದ್ದವಳು ನಿಮ್ಮ ಮಗಳು ರತ್ನ ಅಲ್ವೇಂದ್ರೆ; ನಿಮ್ಮ ಮಗಳನ್ನೇ ಗುರಿತಿಸ್ದಲೇ ಹೋದ್ರಲ್ಲ." ಎಂದರು ಸೀತಮ್ಮನವರು.

"ಅಹುದನೆ! ಎಲಾ ಕಳ್ಳಿ ನನಗೆ ಹೇಳ್ದೆ ನನ್ನ ಮುಂದೇನೇ ಕಮಾಲು ಮಾಡ್ಬಿಟ್ಲಲ್ಲ, ಬರಲಿ ತಡಿ," ಎಂದು ಶ್ರೀಕಂಠಯ್ಯನವರು ಮಾತನಾಡುತ್ತಿದ್ದಂತೆ, ರತ್ನಮಾಲೆ ಹೂವಿನ ಹಾರ ಹಿಡಿದುಕೊಂಡು ಮನೆಗೆ ಬಂದಳು.

"ಏನಮ್ಮ ರತ್ನ ಹಾರಗೀರ ಹಿಟ್ಕಂಡ್ಬಂದ್ಬಿಟ್ಟೆ?"

"ಅನಂತಮೇಷ್ಟ್ರು ಕೊಟ್ರಣ್ಣ."

"ಅಲ್ಲಾ ಕಣೆ ಕಳ್ಳಿ, ನೀನು ನಾಟಕ ಮಾಡ್ತೀನೀಂತ ನನಗೆ ಹೇಳ್ಬೇಡ್ವೆ.?"

"ಅಮ್ಮನ ಕೈಲಿ ಹೇಳಿದ್ನಣ್ಣ, ನಿನಗೇಳವಳೇಂತ ತಿಳಿದಿದ್ನಣ್ಣ."

"ಏನೆ ಸೀತಾ, ಕೇಳೆ ನಿನ್ನ ಮಗಳನ್ನು."

"ನಾಟಕದಲ್ಲಿ ಮಗಳನ್ನು ಗುರಿತಿಸ್ತೀರೊ ಇಲ್ವೋಂತ ಸುಮ್ನಿದ್ದೇಂದ್ರೆ" ಎಂದರು ಸೀತಮ್ಮನವರು.

ಹಾಗೆಯೇ ಒಮ್ಮೆ ನಕ್ಕು ಮಗಳನ್ನು ಕೂಡಿ, ಅಡಿಗೆಯ ಮನೆಗೆ ನಡೆದು ಹೋದರು ಶ್ರೀಕಂಠಯ್ಯನವರು.

೬

ಅನಂತ ಉಪಾಧ್ಯಾಯರ ಮೂರು ಮಕ್ಕಳಲ್ಲಿ ಹಿರಿಯುವಳು ಸುವರ್ಣ. ನಾಮಕರಣದ ಹೆಸರು ಸುವರ್ಣಲತೆಯೆಂದು. ಆದರೆ ಮಾಸ್ತರ ಬಡತನ ನೋಡಿ ಮಗಳ ಲತೆಯು ಬುಡದಲ್ಲೇ ಬಾಡಿಹೋಯಿತು. ಎರಡನೆಯದು ಗಂಡು. ಇವನೂ ತನ್ನ ಅಕ್ಕನ ಸಂಪ್ರದಾಯವನ್ನು ಪಾಲಿಸಿದ. ಬಾಹುಬಲಿಯಿಂದ ಸುರವಾಗಿ ಬಾಬುಲಿಯಲ್ಲಿ ಪರಿವರ್ತನೆಯಾಗಿ ಕೊನೆಗೆ ಬಾಬುವಿನಲ್ಲಿ ನಿಂತ. ಸುವರ್ಣ ಎರಡೊಂದೆರಡು ಎರಡೆರಡ್ಲು ನಾಲ್ಕುವಿನ ಸ್ಕೂಲಿಗೋದರೆ ಬಾಬು ಶಿಶುವಿಹಾರಕ್ಕೆ ಹೋಗುತ್ತಾನೆ. ಮೂರನೆಯವಳು ಸುಕನ್ಯ. ಈ ಹೆಸರಿನ ಪರಿವರ್ತನೆಗೆ ಕಾಲ ಬರಬೇಕು. ಸದಾ ತಾಯಿ ಸೊಂಟದಲ್ಲೇ ಚಚ್ಚಿಕೊಂಡಿರುವ ಕೂಸಿದು.

ಮಾಸ್ತರು ಮಕ್ಕಳನ್ನು ಬೆಳೆಸುವ ಕಲೆ ಚೆನ್ನಾಗಿ ಬಲ್ಲರು. ಎಲ್ಲರಿಗೂ ತಮ್ಮ ಜೊತೆಯಲ್ಲೇ ಸಾಬೂನಾಕಿ ಸ್ನಾನ ಮಾಡಿಸುವರು. ತಾವೇ ಖುದ್ದಾಗಿ ಮಡಿ ಅಂಗಿಗಳನ್ನು ಹಾಕಿ, ಜೊತೆಗೆ ತಿಂಡಿಗೆ ಕುಳ್ಳಿಸಿರಿಸಿಕೊಳ್ಳುತ್ತಾರೆ. ಕ್ಲುಪ್ತ ಕಾಲಕ್ಕೆ ಊಟ ತಿಂಡಿಯಾಗುತ್ತಿತ್ತು. ಸಂಜೆ ಹೊತ್ತು ಮಾಸ್ತರ ಸಂಸಾರವೆಲ್ಲಾ ಹೊಳೆಯ ಕಡೆನೋ, ಬಸ್ತೀಗುಡಿಯ ಕಡೆನೋ ವಾಕಿಂಗ್ ಹೋಗುತ್ತಿತ್ತು. "ಅಪ್ಪಾಜಿ ತಡಿಯಪ್ಪಾಜಿ ಅಭಯಣ್ಣನ ಕರಕಂಡ್ಬತ್ತಿನಿ" ಎಂದು ಸುವರ್ಣ ಚೆಂದವ್ವನವರ ಮನೆಗೆ ಓಡಿಹೋಗುತ್ತಾಳೆ. ಊಟ ಮುಗಿಸಿಕೊಂಡು ಬೀದಿಯ ಬಾಗಿಲಲ್ಲಿ ಹಪ್ಪಳ ತಿನ್ನುತ್ತಾ ನಿಂತಿರುತ್ತಿದ್ದ ಅಭಯ, ಸುವರ್ಣನನ್ನು ಬಾಚಿ ಅಪ್ಪಿಕೊಂಡು ಬರುತ್ತಾನೆ. ಎಲ್ಲರೂ ಬಸ್ತೀ ಗುಡಿಗೆ ಬಂದು ಆದೀಶ್ವರಸ್ವಾಮಿಯ ಪೂಜೆ ನೋಡಿಕೊಂಡು, ರಂಗನಾಥನ ಗುಡಿಗೆ ಬಂದು ಕೈಮುಗಿದು, ತೀರ್ಥ ಕುಡಿದು ಹಾಗೆಯೇ ಹೊಳೆಯ ಹತ್ತಿರಕ್ಕೆ ಹೋಗಿಬರುತ್ತಾರೆ.

ಮನೆಗೆ ಬಂದರೆ ಹಿರಿಯುವಳನ್ನು ಕೂರಿಸಿಕೊಂಡು 'ಸಾವಿತ್ರಿಯ ಕಥೆ' 'ಚಂದನಾದೇವಿಯ ಕಥೆ' 'ವನಮಾಲೆಯ ಕಥೆ' 'ಸುನಂದೆಯ ಕಥೆ' ಹೇಳುತ್ತಾರೆ. "ಎಷ್ಟು ಒಳ್ಳೆಯವರಪ್ಪಾಜಿ ಅವರೆಲ್ಲ" ಎಂದು ಸುವರ್ಣ ಹೇಳಿದರೆ "ನೀನೂ ಆರೀತಿ ಆಗಬೇಕು ಮಗು" ಎನ್ನುವರು ಉಪಾಧ್ಯಾಯರು. "ಅಮ್ಮ ಆರೀತಿ ಇದಾಳಪ್ಪಾಜಿ, ನಾನೂ ಹಂಗಾಯ್ತಿನಿ"

ಎನ್ನುತ್ತಾಳೆ. ಇದನ್ನು ಕೇಳಿದ ರುಕ್ಮಿಣಮ್ಮನವರಿಗೆ ಆನಂದಭಾಷ್ಪಗಳು ಉದುರುತ್ತಿದ್ದವು. ಮಾಸ್ತರು ಮಗಳ ಬೆನ್ನು ತಟ್ಟಿದರು. ಅನಂತರ ಬಾಬು ವನ್ನು ಕೂರಿಸಿಕೊಂಡು "ಎಲ್ಲಾ ಹೇಳು ಬಾಬು" ಎಂದು 'ಓಂ, ವೃಶಭ, ಅಜಿತ, ಶಂಭವ, ಅಭಿನಂದನ' ಎಂದು ಇಪ್ಪತ್ತನಾಲ್ಕು ತೀರ್ಥಂಕರ ಹೆಸರನ್ನೆಲ್ಲಾ ಹೇಳುತ್ತಿದ್ದರು. ರಾಮ, ಕೃಷ್ಣ, ಬುದ್ಧ, ಗಾಂಧಿಯರ ಹೆಸ ರನ್ನೂ ಜೊತೆಗೆ ಹೇಳುವಂತೆ ಹೇಳುತ್ತಿದ್ದರು.

ಹುಡಗರು ಮಲಗುವ ಕೊಠಡಿಯನ್ನು ಚೊಕ್ಕಟವಾಗಿರಿಸಿ ವಿಶ್ವ ವಿಭೂತಿ ಪುರುಷರುಗಳ ಫೋಟೋಗಳಿಂದ ಅಲಂಕರಿಸಿದ್ದರು. ಎದ್ದ ತಕ್ಷಣ ಇದು ನೋಡು ಮಗು ಭಗವಾನ್ ಮಹಾವೀರರು ಸಮವಸರಣದಲ್ಲಿ ಕುಳಿ ತಿರುವ ಚಿತ್ರ, ಇದು ನೋಡು ಕೃಷ್ಣ ರಥದಲ್ಲಿ ಕುಳಿತು ಅರ್ಜುನನಿಗೆ ಗೀತೆ ಹೇಳುತ್ತಿರುವ ಫೋಟೊ, ಇದು ಗಾಂಧೀಜಿಯವರು ದಂಡೀ ಸತ್ಯಾಗ್ರಹಕ್ಕೆ ಹೋಗುತ್ತಿರುವ ಚಿತ್ರವೆಂದು ಹೇಳುತ್ತಿದ್ದರು.

ರುಕ್ಮಿಣಮ್ಮನವರೂ ಸಹ ಮಕ್ಕಳಿಗೆ ಹೊಡೆಯುತ್ತಿರಲಿಲ್ಲ. ಗಟ್ಟಿ ಯಾಗಿಯೂ ಸಹ ಮಾತನಾಡುತ್ತಿರಲಿಲ್ಲ. ಅವು ಕೇಳಿದ್ದನ್ನು ಮಾಡಿಕೊಡು ತ್ತಿದ್ದರು. ಮಾಸ್ತರು ಸ್ಕೂಲಿಗೆ ಹೋದಮೇಲೆ ಸುವರ್ಣನನ್ನು ಕೂರಿಸಿ ಕೊಂಡು ಸಂಗೀತ ಹೇಳಿಕೊಡುತ್ತಿದ್ದರು. ತಾಯಿ ಎಲೆ ಕಟ್ಟುತ್ತಿದ್ದರೆ ಹಂಚಿ ಕಡ್ಡಿ ಗೀರಿಕೊಡುವುದು, ಹೂವು ಕಟ್ಟುತ್ತಿದ್ದರೆ ನಾರು ಹರಿದು ಕೊಡು ವುದನ್ನು ಮಾಡುತ್ತಿದ್ದಳು ಸುವರ್ಣ.

ಗುಣವತಮ್ಮನವರೇನಾದರೂ ಹೆಚ್ಚುಕಟ್ಟಲೆ ಮಾಡಿದರೆ, ವಿಶೇಷ ತಿಂಡಿ ಬೇಯಿಸಿದರೆ ಸುವರ್ಣನನ್ನು ಕರೆಸಿಕೊಳ್ಳುತ್ತಿದ್ದರು. ಅಭಯನೇ ಹೋಗಿ ಕರೆದುಕೊಂಡು ಬರುತ್ತಿದ್ದ. ಮಧ್ಯಾಹ್ನವೇನಾದರೂ ಬಂಹರೆ ತಾವೇ ಮುಖ ತೊಳೆದು, ತಲೆ ಹೆಣೆದು, ಮೊಗ್ಗು ಮುಡಿಸಿ, ತಿಂಡಿ ತಿನ್ನಿಸಿ ಕಳುಹಿಸುತ್ತಾರೆ ಗುಣಾವತಮ್ಮನವರು. ಇದು ಚೆಂದಮ್ಮನಿಗಾಗುತ್ತಿರಲಿಲ್ಲ. "ಹಾಗೆ ಮಕ್ಕಳನ್ನು ಕಂಡರೆ ಆಸೆಯಾದರೆ ಹಾಸನದಿಂದ ನಮ್ಮ ಬ್ರಹ್ಮ ಮಗಳಿದಾಳೆ ಕರೆಸ್ಕೋ" ಎಂದು ಸಿಡಿಯುತ್ತಿದ್ದರು.

ಒಂದು ದಿನ ಹಾಗೆಯೇ ಸೀನಕ್ಕನ ಮನೆಗೆ ಸುವರ್ಣ ಬಂದಳು. ಅಡಿಗೆಯ ಮನೆಯಲ್ಲಿ ಸೀನಕ್ಕ ಅವರೇಕಾಳು ಹುರಿಯುತ್ತಿದ್ದಳು.

'ವಿಮಲಕ್ಕ' ಎಂದು ಕೂಗಿಕೊಂಡು ಸುವರ್ಣ ಹಟ್ಟಿಯಲ್ಲಿ ನಿಂತಳು. ವಿಮಲೆ ಅಡಿಗೆಯ ಮನೆಯಲ್ಲಿ ಒಂದು ಪೊಟ್ಟಣಕ್ಕೆ ಅವರೇಕಾಳು ಕಟ್ಟಿ ಕೊಳ್ಳುತ್ತಿದ್ದಳು. ಬಹುಶಃ ರಾಮಶಾಸ್ತ್ರಿಗಳ ಮನೆಗೆ ತೆಗೆದುಕೊಂಡು ಹೋಗಲಿರಬಹುದು.

"ಅಡಿಗೆಯ ಮನೆ ಬಾಗಿಲಾಕೆ ವಿಮಲ ಸುವರ್ಣ ಬರ್ತಾಳೆ; ಹಟ್ಟಿ ಯಲ್ಲಿ ಯಾರೂ ಇಲ್ಲ ಹೋಗು, ಗೂಡಿನಲ್ಲಿರುವ ಸಾಮಾನು ಗೀಮಾನು ಹೋದಾತು" ಎಂದಳು ಸೀನಕ್ಕ.

"ಏನದು ಸುವರ್ಣ" ಎಂದಳು ವಿಮಲೆ.

"ನಮ್ಮ ಬಾಬು ಅಳ್ತಿದಾನೆ, ಹಾಲಿದ್ದರೆ ಇಸ್ಕಂಡ್ಬಾಂತುಅಮ್ಮ ರಾತ್ರಿಕ್ಕೆ ಕೊಡ್ತಿದಂತೆ" ಅಂದಳು ಸುವರ್ಣ. ಹಾಲು ಒಲೆಯಮೇಲೆ ಬೇಕಾದಷ್ಟಿತ್ತು. "ಆದರೂ ಆಗಲೆ ಹೆಪ್ಪಾಕ್ಬಿಟ್ಟಿದ್ದೇವೆ ಇಲ್ಲಾ ಕಣಮ್ಮ" ಎಂದು ಅಡಿಗೆಯ ಮನೆಯಿಂದಲೇ ಸೀನಕ್ಕ ಉತ್ತರಿಸಿದಳು. ಬರಿಯ ಬಟ್ಟಲಲ್ಲೇ ಸುವರ್ಣ ಹಿಂತಿರುಗಿ ಹೋದಳು. ಸಂಜೆ "ಬೆಳ್ಳಿಯ ತಟ್ಟೆ ಹಟ್ಟಿಯಲ್ಲಿಟ್ಟಿದ್ದು ಇಲ್ಲವೇ ಇಲ್ವಲ್ಲ ಯಾರು ತೆಗೆದುಕೊಂಡೋದರೆ ವಿಮಲ" ಎಂದು ಸೀನಕ್ಕ ಕೇಳಿದಳು.

"ನನಗೇನು ಗೊತ್ತಮ್ಮ ನಾನು ಮೇಷ್ಟ್ರಮನೆಗೋಗಿದ್ದೆ."

"ಬೆಳಗ್ಗೆ ಪಕ್ಕದ ಮನೆ ಹುಡ್ಗಿ ಬಂದಿತ್ತು ತೆಗೆದ್ಕೊಂಡೋಗಿರ್ಬೇ ಕೆಲ್ವೇನೆ?"

"ಇರಬಹುದಮ್ಮ."

"ಅವಳು ಬಂದಾಗಲೇ ನಾನೇಳ್ಳಿಲ್ವೆ ನಿನಗೆ ಹಟ್ಟಿಯ ಸಾಮಾನು ಸ್ವಲ್ಪ ನಿಗಾ ಇರ್ಲಿಂತ" ಎಂದಳು.

ರಾತ್ರಿ ಬೀದಿಯ ಬಾಗಿಲಲ್ಲಿ ಕುಳಿತಾಗ "ನಿಮ್ಮ ಹುಡ್ಗಿ ನಮ್ಮದೊಂದು ಬೆಳ್ಳಿತಟ್ಟೆ ತೆಗೆದ್ಕೊಂಡೋಗಿದೆ ಕೊಟ್ಟುಕಳುಹಿಸಿ ರುಕ್ಮಿಣಮ್ಮನವರೆ" ಎಂದಳು ಸೀನಕ್ಕ.

"ಇಲ್ಲ ತೆಗೆದ್ಕೊಂಡ್ಬಂದಿಲ್ಲ ಸೀನಕ್ಕನವರೆ."

"ಇನ್ನ್ಯಾವ ಕಳ್ಳ ಬರ್ತಾನೆ, ಬಂದಿದ್ದವಳು ಅವಳೊಬ್ಬಳೆತಾನೇ."

" ನಮ್ಮ ಮನೆಯಲ್ಲಿ ಯಾವ ಬೆಳ್ಳಿಯ ಪಾತ್ರೆಯೂ ಇಲ್ಲ ಬೇಕಿದ್ದರೆ ನೋಡ್ಕೊಬನ್ನಿ ಸೀನಕ್ಕನವರೆ."

" ಇಲ್ಲ ತೆಗೆದ್ಕೊಂಡೋಗಿದೆ, ನಮ್ಮ ವಿಮಲೆ ಕಣ್ಣಾರೆ ನೋಡಿದ್ಲಂತೆ."

" ಓ! ಓ! ಈ ವ್ಯಾಪಾರಕ್ಕೇರೆ ಸುರು ಮಾಡಿದ್ರೇನು ಉಪಾಧ್ಯಾಯರ ಹೇಡತಿ " ಎಂದರು ಮೆಲ್ಲನೆ ಮುದುಕಿ ಚೆಂದವ್ವನವರು.

" ಇನ್ನೇನು ದುಡಿಯಕ್ಕಾಗ್ಬಿದ್ರೆ " ಎಂದಳು ಸೀನಕ್ಕ.

ರುಕ್ಮಿಣಮ್ಮನವರಿಗೆ ಮಾತು ಕೇಳಲಾಗಲಿಲ್ಲ. ಒಂದೊಂದು ಮಾತೂ ಒಂದೊಂದು ಶೂಲದಂತಿತ್ತು. ಮನೆಯೊಳಕ್ಕೆ ಬಂದವರು ಮಲಗಿದ್ದ ಸುವರ್ಣ ನನ್ನು ಎಬ್ಬರಿಸಿ " ತಟ್ಟೆ ಕದ್ಕಂಬಂದಿದಿಯೇನೆ ಚಿನಾಲಿ ಎಂದು ನಾಲ್ಕು ಏಟುಕೊಟ್ಟರು. ಸುವರ್ಣ ನಿದ್ರೆಯ ಕಣ್ಣಿನಲ್ಲೇ ಅಳುತ್ತಾ ಮಲಗಿದಳು.

ಅನಂತಯ್ಯನವರು ಬಂದರು. ಬಿಕ್ಕಿಡಿಸಿ ಬಿಕ್ಕಿಡಿಸಿ ಅಳುತ್ತಿದ್ದ ಮಗಳನ್ನು ನೋಡಿದರು. " ಇದೇನು ಸಮಾಚಾರ ರುಕ್ಕು" ಎಂದರು. ಎಲ್ಲವನ್ನೂ ರುಕ್ಮಿಣಮ್ಮನವರು ಹೇಳಿದರು. ಅವರು ಏನೇನೋ ಹೇಳಿ ದ್ರೂಂತ ಹುಡುಗಿಯನ್ನು ಹೊಡೆದ್ಬಿಡಬೇಕೂನ್ನೊ; ನಿನಗೆ ಸಾಕಕ್ಕಾಗ್ದಿದ್ರೆ ಹೊಳೆಗಾದ್ರೂ ತಳ್ಳಿಬಿಡು " ಎಂದರು. ರುಕ್ಮಿಣಮ್ಮನವರು ಮಾತನಾಡಲಿಲ್ಲ. ಸುಮ್ಮನಾದರು.

ವಿಷಯ ಅಲ್ಲಿಗೆಯೇ ಕೊನೆಗಾಣಲಿಲ್ಲ. ಸೀನಕ್ಕನ ಸಾಪಾಳಗಳು ತಟ್ಟೆ ಬರುವವರೆಗೂ ನಿಲ್ಲುವಂತಿರಲಿಲ್ಲ. ಬೆಳಗಾದರೆ, ಸಂಜೆಯಾದರೆ ರುಕ್ಮಿಣಮ್ಮನವರ ಮೇಲೆ ಅವರ ಮಗಳ ಮೇಲೆ ಬೈಗಳಗಳಾಗುತ್ತಿತ್ತು.

" ಹೋಗಲಿ ಅದೆಷ್ಟು ಬೆಲೆಯಾಗುತ್ತೆ ಹೇಳ್ಬಿಡಿ ಸೀನಕ್ಕನವರೆ ಕೊಟ್ಬಿಡ್ತೇನೆ. ಹೀಗೆಲ್ಲಾ ದಿನಾಲು ಬೈತಿದ್ರೆ ನಮ್ಮ ಹುಡ್ಗಿ ಬಡವಾಗ್ತಿದೆ" ಎಂದರು ರುಕ್ಷ್ಮಿಣಮ್ಮನವರು.

"ನಾವು ಮಾಡಿಸ್ದಾಗ ಹತ್ತು ರೂಪಾಯಿಯಾಗಿತ್ತು, ಈಗ ಬೆಳ್ಳಿ ಬೆಲೆ ಜಾಸ್ತಿಯಿದೆ. ಆದ್ದರಿಂದ ತಟ್ಟೇನೇ ತಂದ್ಕೊಟ್ಬಿಡಿ."

" ಹೋಗಲಿ, ಹದಿನೈದು ರೂಪಾಯಿ ತೆಗೆದುಕೊಳ್ಳಿ " ಎಂದು ಹದಿನೈದು ರೂಪಾಯಿಗಳನ್ನು ವೃಥಾ ದಂಡಕೊಟ್ಟರು ರುಕ್ಮಿಣಮ್ಮನವರು.

ಯಾವುದೋ ಕೆಲಸದ ಮೇಲೆ ರಾಮಾಶಾಸ್ತ್ರಿಗಳ ಮನೆಗೆ ಅಭಯ

ಕುಮಾರ ಹೋಗಿದ್ದ. ಅಲ್ಲಿ ಮೇಜಿನ ಮೇಲೆ ಬೆಳ್ಳಿಯ ತಟ್ಟೆಯೊಂದಿತ್ತು. ಇದೇನು ಮೇಷ್ಟ್ರ ಮನೆಯಲ್ಲಿ ಬೆಳ್ಳಿಯ ತಟ್ಟೆಯೆಂದುಕೊಂಡನು. ಮೊನ್ನೆ ಪಕ್ಕದ ಮನೆಯಲ್ಲಿ ಆದ ಬೆಳ್ಳಿತಟ್ಟೆಯ ಗಲಾಟೆ ಅವನಿಗೂ ಗೊತ್ತಿತ್ತು. ವಿಮಲೆ ಮನೆಯಿಂದ ತಿಂಡಿ ತಂದುಕೊಟ್ಟದ್ದು ಅಲ್ಲಿಯೇ ಇತ್ತು. "ಈ ತಟ್ಟೆ ನಮ್ಮ ಪಕ್ಕದ ಮನೆಯವರದ್ದು ಸರ್" ಎಂದು ತಟ್ಟೆಯನ್ನು ತಂದು ರುಕ್ಮಿಣಮ್ಮನವರ ಮನೆಗೆ ಕೊಟ್ಟನು. ರಾಮಾಶಾಸ್ತ್ರಿಗಳು ಅಷ್ಟಾಗಿ ಗಮನ ತೆಗೆದುಕೊಳ್ಳಲಿಲ್ಲ. ಅವರು ಮಾವನ ಊರಿಗೆ ಹೊರಡುವ ಆತುರದಲ್ಲಿದ್ದರು. ಅವರ ಹೆಂಡತಿಯೂ ಕಾಗದದ ಮೇಲೆ ಕಾಗದ ಹಾಕಿದ್ದಳು. "ನಿಮ್ಮ ಹೆಂಡತಿಗೆ ಖಾಯಿಲೆ ಜಾಸ್ತಿ" ಎಂದು ಅವರ ಮಾವ ಟೆಲಿಗ್ರಾಮ್ ಕೊಟ್ಟ ಮೇಲೆ ಹೊರಟರು.

ರಾಮಾಶಾಸ್ತ್ರಿಗಳ ಮಾವ ನರಸಿಂಹಶಾಸ್ತ್ರಿಗಳು. ಭದ್ರಾವತಿಯಲ್ಲಿ ಕಬ್ಬಿಣ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಬಳ ಕೈತುಂಬ ಬಂದರೂ ಮನೆತುಂಬ ಜನರಿದ್ದಾರೆ. ಅವರಿಗೆ ಸಿಕ್ಕಿರುವ ಅಳಿಯಂದಿರೋ ಎಲ್ಲಾ ರಾಮಾಶಾಸ್ತ್ರಿಗಳವರಂತೆಯೇ ಎರಡೆರಡು ಮಕ್ಕಳಾದರೂ ಹೆಣ್ಣು ಮಕ್ಕಳು ತೌರುಮನೆಯಲ್ಲೇ ಇದಾವೆ. ಇತರರು ತೌರುಮನೆಗೆ ಬರಲು ಆಸೆಪಟ್ಟುಕೊಂಡಿದ್ದರೆ ನರಸಿಂಹಶಾಸ್ತ್ರಿಗಳ ಹೆಣ್ಣುಮಕ್ಕಳು ತೌರುಮನೆ ಬಿಟ್ಟುಹೋಗುವುದೇ ಇಲ್ಲವೆನ್ನುತ್ತವೆ. ಅಳಿಯಂದಿರುಗಳೆಲ್ಲಾ ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಮನೆ ಸಿಗುವ ತಾಪತ್ರಯ ವಿಪರೀತವಾದ್ದರಿಂದ ಹೆಂಡತಿಯರುಗಳನ್ನೆಲ್ಲಾ ಮಾವನ ಮನೆಯಲ್ಲೇ ಬಿಟ್ಟಿದ್ದಾರೆ.

ರಾಮಾಶಾಸ್ತ್ರಿಗಳಿಗೂ ಮೊನ್ನೆ ಮೊನ್ನೆ ಜೂನಿಯರ್ ಶಾಸ್ತ್ರಿಯೊಬ್ಬ ಹುಟ್ಟಿದ. ಅವನನ್ನು ನೋಡಲೂ ಬಂದಿರಲಿಲ್ಲ. ಈಗ ಪರೀಕ್ಷೆಯ ಕಾಲ ಬರಲಾಗುವುದಿಲ್ಲವೆಂದು ಬರೆದಿದ್ದರು. ಜೂನಿಯರ್‌ಶಾಸ್ತ್ರಿ ಹುಟ್ಟಿದ ನಕ್ಷತ್ರ ಬಲದಿಂದ ಸೀನಿಯರ್ ಶಾಸ್ತ್ರಿಗಳು ಸೀನಿಯರ್ ಮೇಸ್ಟ್ರನರಸಿಂಹಶಾಸ್ತ್ರಿಗಳ ಮನೆಗೆ ಬಂದಿದ್ದಾರೆ. ಬಂದರೆ ಮಾವನ ಮನೆಯಲ್ಲಿ ಯಾರೂ ಮಾತನಾಡಿಸಲಿಲ್ಲ. ಅವರ ಹುಡುಗಿ ಜಲಜ ಹೊರಗೆ ನಿಂತಿದ್ದಳು. "ಅಮ್ಮ ಅಪ್ಪ ಬಂತು ಮಿಠಾಯಿ ತಂತು" ಎಂದು ಕೂಗಿಕೊಂಡು ಬಂದಳು. ಕಮಲಮ್ಮನವರು ಹೊರಗೆ ಬಂದು ಯಜಮಾನರನ್ನು ಎದುರುಗೊಂಡರು.

" ನಿಮ್ಮ ಮಗ ನೋಡಿ ಹೊಗಿದ್ದಾನೆ."

" ಎಲ್ಲಾ ನನ್ನ ಅಚ್ಚೇ ಕಣೆ " ಎಂದರು ರಾಮಾಶಾಸ್ತ್ರಿಗಳು.

" ಮಗುವಿಗೆ ಬಟ್ಟೆ ಆಟದ ಸಾಮಾನೇನೂ ತರಲಿಲ್ವೇಂದ್ರೆ " ಎಂದರು ಕಮಲಮ್ಮ.

" ಸಂಬಳ ಬಂದಿರಲಿಲ್ಲ, ಇಲ್ಲಿಗೇ ಕಳುಹಿಸಿರೆಂದು ಹೇಳಿ ಬಂದಿದೇನೆ" ಎಂದರು ರಾಮಾಶಾಸ್ತ್ರಿಗಳು.

ಎಂಟು ಹತ್ತು ದಿನಗಳು ಭದ್ರಾವತಿಯಲ್ಲೇ ಶಾಸ್ತ್ರಿಗಳು ಕಾಲ ಕಳೆದರು. ಅಷ್ಟರಲ್ಲೇ ಚೆನ್ನಗಿರಿಯಿಂದ ಕಾಗದವೊಂದು ಬಂದಿತು.

" ಇಷ್ಟು ಹತ್ತಿರ ಬಂದಿದ್ದೀರಿ ಹಾಗೆಯೇ ನಮ್ಮ ಹಳೆಯ ಗೆಳೆತನದ ಗುರುತಿಗಾಗಿ ಒಂದು ವಿಜಿಟ್ ಕೊಟ್ಟೋಗಿ. ಎಂದು ಚೆನ್ನಗಿರಿಯ ಮಿಡ್ ವೈಫ್ ಕಾಗದ ಬರೆದಿದ್ದಳು. ತಕ್ಷಣ ರಾಮಾಶಾಸ್ತ್ರಿಗಳು ಚೆನ್ನಗಿರಿಗೆ ಹೊರಟರು ಮನೆಯಲ್ಲಿ ಇಲ್ಲೇ ಜೋಗ್‌ಗೆ ಹೋಗಿಬರುತ್ತೇನೆಂದು ಹೇಳಿ ಬಂದರು. ಒಂದೆರಡು ದಿನಗಳು ಕಾಲಾ ಪರಂಗಿಯವರ ಜೊತೆ ಶಾಸ್ತ್ರಿಗಳು ಕಾಲ ಕಳೆದರು. ಹಳೆಯ ಶಿಷ್ಯರೆಲ್ಲಾ ಏನಾದರೂ ನಮ್ಮ ಮೇಷ್ಟ್ರು ಬದಲಾಯಿಸಿದ್ದಾರೆಯೆಂದು ನೋಡಲು ಬಂದರು. ಅದೇ ವಕ್ರ ವಕ್ರ ಬೂಟ್ಸು, ಹರಿದಿರುವ ಪ್ಯಾಂಟು, ಮುಂಕರಿಯಂತಿರುವ ಹ್ಯಾಟು ಧರಿಸಿದ್ದರು ಶಾಸ್ತ್ರಿಗಳು. ಎರಡು ದಿನಕ್ಕೆ ಬರುತ್ತೇನೆಂದು ಹೇಳಿಬಂದ ಶಾಸ್ತ್ರಿಗಳು ನಾಲ್ಕು ದಿನ ಅವಳಕೂಡ ಚಕ್ಕಂದವಾಡುತ್ತಾ ಕುಳಿತರು. " ಏನ್ ಸರ್ ಗಿರಾಕಿ ಹುಡುಕಿಕೊಂಡು ಬಂದೇ ಬಿಟ್ರಲ್ಲ, ಇನ್ನೂ ಬಿಡ್ಲಿಲ್ವೆ ಸರ್ ಈ ವಿದ್ಯೆನ" ಎಂದು ಕೆಲವು ಶಿಷ್ಯರು ಕೇಳಿಯೂ ಕೇಳಿದರು.

ಮನೆಗೆ ಬಂದರೆ " ಇದೇನೂಂದ್ರೆ ಎರಡು ದಿನಕ್ಕೇ ಬರ್‍ತಿನೀಂದವ್ರು ನಾಲ್ಕು ದಿನಗಳಾಯಿತು " ಎಂದು ಕಮಲಮ್ಮ ಕೇಳಲಾಗಿ " ಅಲ್ಲೇ ಸ್ನೇಹಿತರು ಸಿಕ್ಕಿದರು ಜೊತೆಗೆ ಉಡುಪಿಗೂ ಹೋಗಿದ್ದೆ ಉಡುಪಿಯ ಕೃಷ್ಣನ ದರ್ಶನ ಮಾಡಕ್ಕೆ'' ಎಂದು ಹೇಳಿದರು. " ಹೇಳಿದ್ರೆ ನಾನೂ ಬರುತ್ತಿರಲಿಲ್ವೇಂದ್ರೆ.''

" ಮುಂದಿನ ಸಲ ಹೋದರಾಯಿತು ತಗೊ ಕಮಲ" ಎಂದು ಆಸೆ

ತೋರಿಸಿ ಮಾತಿನಲ್ಲಿಯೇ ಉಡುಪಿಯ ಯಾತ್ರೆ ಮುಗಿಸಿದರು, ಉರುಫ್ ಬುರುಡೆ ಶಾಸ್ತ್ರಿಗಳು.

ರಜ ಕಳೆದಮೇಲೆ ಶ್ರೀರಂಗಪಟ್ಟಣಕ್ಕೆ ರಾಮಾಶಾಸ್ತ್ರಿಗಳು ಹೊರಟರು. "ನಾನೂ ಬರುತ್ತೇನೇಂದ್ರೆ, ಇನ್ನೆಷ್ಟುದಿನ ತೌರುಮನೆಯಲ್ಲಿರುವುದು" ಎಂದು ಕಮಲಮ್ಮ ಕೇಳಿದರು.

"ಇನ್ನೂ ಸರಿಯಾದ ಮನೆ ಸಿಕ್ಕಿಲ್ಲ ಕಣೆ, ಮನೆ ಸಿಕ್ಕಿದಮೇಲೆ ಕರ ಕೊಂಡೋಗ್ತೀನಿ" ಎಂದರು.

ಇದು ನರಸಿಂಹಶಾಸ್ತ್ರಿಗಳಿಗೆ ಗೊತ್ತಾಯಿತು. ನರಸಿಂಹಾವತಾರ ತಾಳಿದರು. "ಎರಡು ಮಕ್ಕಳ ಗಡವನಾದಷ್ಟೂ, ಹೆಂಡತಿ ಸಾಕಕ್ಕಾಗ್ದಲೆ ಇಲ್ಲೇ ಬಿಟ್ಟಿರುವ ಮುಟ್ಠಾಳರಿಗೆಲ್ಲಾ ಏಕೆ ಮದ್ವೆ, ಇನ್ಮೇಲೆ ನಿಮ್ಮ ಹೆಂಡತೀನ ನಮಗೆ ಸಾಕಕ್ಕಾಗಲ್ಲ" ಎಂದು ಗದರಿಬಿದ್ದರು. ರಾಮಾಶಾಸ್ತ್ರಿಗಳಿಗಿದು ತಿಳಿಯಿತು.

"ಸಾಕಕ್ಕಾಗ್ದಲೆ ನಿಮ್ಮ ಮನೇಲಿ ಬಿಟ್ಟಿರಲಿಲ್ಲ, ನನ್ನ ಸಡಕನಿಗೆ ಒಂದುಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟಿದ್ದೀರಿ. ನನಗೆ ಏನೂ ಇಲ್ಲವೇ ಇಲ್ಲವಲ್ಲ ಅದಕ್ಕೇ ಬಿಟ್ಟಿರುವುದು."

"ಗೆಯ್ಯಕ್ಕಾಗದ ಮುಟ್ಠಾಳನ ಮಾತಾಡ್ತಿಯಲ್ಲೊ, ನೀನು ಬಿ.ಎ. ಪಾಸುಮಾಡಿ ಮುಂಡಾಮೋಚ್ತು" ಎಂದರು ನರಸಿಂಹಾವತಾರದ ನರಸಿಂಹ ಶಾಸ್ತ್ರಿಗಳು. "ಈಗಲೇ ಹೋಗ್ತೀನಿ ನಿಮ್ಮ ಮನೆ ಬಿಟ್ಟು" ಎಂದು ಗಂಟು ಮೂಟೆ ಕಟ್ಟಿಕೊಂಡು ಹೆಂಡತಿ ಮಕ್ಕಳೊಡನೆ ಶ್ರೀರಂಗಪಟ್ಟಣಕ್ಕೆ ಹೊರಟು ಬಂದರು ರಾಮಾಶಾಸ್ತ್ರಿಗಳು.

೭

ಸಾಹಿತ್ಯಸಂಘದ ಪ್ರತಿನಿಧಿಯಾಗಿ ಅನಂತಯ್ಯನವರು ಸಾಹಿತ್ಯ ಸಮ್ಮೇಳನಕ್ಕೆ ಹರಪನಹಳ್ಳಿಗೆ ಬಂದರು. ಬರುವಾಗ ಜತೆಯಲ್ಲಿ ಅಭಯ ಕುಮಾರನನ್ನೂ ಕರೆತಂದರು. ಹರಿಹರದವರೆಗೆ ರೈಲಿನಲ್ಲಿ ಪ್ರಯಾಣ ಮಾಡಿ ಅಲ್ಲಿಂದ ಬಸ್ಸಿನಲ್ಲಿ ಬಂದರು. ರೈಲಿನತ್ತಿರ ಸ್ವಯಂ ಸೇವಕರು ಕಾದು ನಿಂತಿದ್ದರು. ಬಂದವರನ್ನೆಲ್ಲಾ ಪಕ್ಕದ ಹಿಲ್ಲಿನಲ್ಲಿಳಿಸಿ ಅಲ್ಲಿಂದ ಗೊತ್ತಾದ ಬಸ್ಸಿನಲ್ಲಿ ಹರಪನಹಳ್ಳಿಗೆ ಕಳುಹಿಸುತ್ತಿದ್ದರು.

ಮೈಸೂರಿನವರಿಗಾಗಿಯೇ ಮೀಸಲಾಗಿಟ್ಟಿದ್ದ ಕೊಠಡಿಯಲ್ಲಿ ಮಾಸ್ತರಿಗೆ ಸ್ಥಳ ದೊರಕಿತು. ಅಲ್ಲಿ ಅನೇಕ ಗೆಳೆಯರು ಸಿಕ್ಕಿದರು. ಬಿಡಾರ ಹೈಸ್ಕೂಲಿನಲ್ಲಿ ಏರ್ಪಾಡಾಗಿತ್ತು. ಊಟದ ಏರ್ಪಾಡು ಯಾವ ಸಮ್ಮೇಳನದಲ್ಲಿಯೂ ನಡೆಯದಷ್ಟು ಸುವ್ಯವಸ್ಥೆಯಿಂದ ಕೂಡಿತ್ತು. ಸಾವಿರ ಜನರು ನಾಲ್ಕು ಪಂಕ್ತಿ ಕುಳಿತು ಊಟಮಾಡುವಂತೆ ಏರ್ಪಾಡು ಮಾಡಿದ್ದರು.

ಸಮ್ಮೇಳನದ ಕಾರ್ಯಕ್ರಮ ಅಧ್ಯಕ್ಷ, ಸಿ. ಕೆ. ವೆಂಕಟರಾಮಯ್ಯನವರು, ಉದ್ಘಾಟಕರಾದ ಅತ್ತಾವರ ಬಾಲಕೃಷ್ಣಶೆಟ್ಟರು, ಸ್ವಾಗತ ಸಮಿತಿಯ ಅಧ್ಯಕ್ಷರಾದ ಇಜಾರಿ ವಸುಪಾಲಪ್ಪನವರ ಮೆರವಣಿಗೆಯಿಂದ ಮೊದಲಾಯಿತು. ಈ ಕನ್ನಡ ತ್ರಿಮೂರ್ತಿಗಳನ್ನೊತ್ತ ಮೂವತ್ತು ಜೊತೆ ಎತ್ತಿನ ರಥ ಹರಪನಹಳ್ಳಿಗೆ ಉತ್ತರದಲ್ಲಿ ನಿರ್ಮಿಸಿದ್ದ ಮೊದಲನೆಯ ಬಾಗಿಲಿನ ಮುಖಾಂತರ ಹೊರಟಿತು. ಹರಪನಹಳ್ಳಿ ಹಳ್ಳಿಯಲ್ಲ, ಅದು ಹುರುಪಿನಹಳ್ಳಿ, ಎಂದರು ಮಾನ್ಯ ಮಾಸ್ತಿಯವರು. ಅದು ಅಕ್ಷರ ಸಹ ಸತ್ಯ. ಮೆರವಣಿಗೆಗೆ ಊರಜನ ಕೊಟ್ಟ ಸ್ವಾಗತ ಹೇಳತೀರದು. ಊರಿನ ಬೀದಿಗಳ ಇಕ್ಕೆಡೆಗಳಲ್ಲೂ ಜನ ಕಿಕ್ಕಿರಿದು ತುಂಬಿದ್ದರು. ' ಸಿರಿಗನ್ನಡಂಗೆಲ್ಗೆ ' ತಾಯ್ಗನ್ನಡಂ ಬಾಳ್ಗೆ ' ಎಂಬ ಕನ್ನಡಿಗರ ಕೂಗು ನಭೋಮಂಡಲವನ್ನು ಭೇದಿಸುತಿತ್ತು. ಮೂವತ್ತು ಸಮ್ಮೇಳನದ ನೆನಪಿಗಾಗಿ ಮೂವತ್ತು ಗೇಟುಗಳನ್ನು ಊರಿನ ಚೌಕ ಚೌಕದಲ್ಲಿ ಹಾಕಲಾಗಿತ್ತು. ಮುಖ್ಯ ಬಾಗಿಲಿಗೆ ಮತ್ತು ಸಮ್ಮೇಳನ ನಡೆಯುವ ಜಾಗಕ್ಕೆ ಕಣ್ಮರೆಯಾದ ಕನ್ನಡಕಬ್ಬನೇ ಆದ ಕೈಲಾಸಂರವರ ಹೆಸರಿತ್ತು. ಸುಮಾರು ರಾತ್ರಿ ಒಂದುಗಂಟೆಗೆ ಮೆರವಣಿಗೆ ಕೈಲಾಸಂ ನಗರ ಸೇರಿತು.

ಮಾರನೆಯ ದಿನದ ಕಾರ್ಯಕ್ರಮ ಬೆಳಗ್ಗೆ ಒಂಭತ್ತು ಗಂಟೆಗೆ ಪ್ರಾರಂಭವಾಯಿತು. ಕನ್ನಡದ ಮುಖ್ಯನಾಯಕ, ಸರದಾರನಾದ ಸಿ. ಕೆ. ವೆಂ. ಕನ್ನಡ ಧ್ವಜವನ್ನು ಗಗನಕ್ಕೆ ಹಾರಿಸಿದನು. ಒಂದಾನೊಂದು ಕಾಲದಲ್ಲಿ ಅಂದರೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸದಾ ಕನ್ನಡದ ಗುಡಿ ಗಗನದಲ್ಲಿರುತ್ತಿತ್ತು. ಆದರೆ ತುರುಷ್ಕರ ಹಾವಳಿಯಿಂದ ತಾಳೀಕೋಟೆಯ ಯುದ್ಧದಲ್ಲಿ ಬಾವುಟ ಕೆಳಗಿಳಿಯಿತು. ಪುನಃ ಅದೇ ವಿಜಯನಗರದ ಹೃದಯದಲ್ಲಿರುವ ಹರಪನಹಳ್ಳಿಯಲ್ಲಿ ಸ್ವರಾಜ್ಯ ನಮ್ಮ ಹಸ್ತಗತವಾಗು

ತ್ತಿರುವ ಕಾಲದಲ್ಲಿ ಕನ್ನಡಿಗರು ತಮ್ಮ ಕನ್ನಡತನ ಕಾಪಾಡಿಕೊಳ್ಳುವುದಾಗಿ ದೀಕ್ಷೆ ಕೈಗೊಂಡರು, ಛಲ ತೊಟ್ಟರು. ಸದಾ ತಮ್ಮ ಧ್ವಜದ ಮಾನ ಕಾಪಾಡುವುದಾಗಿ ಪ್ರಮಾಣ ಕೈಗೊಂಡರು, ತೆಲುಗರ ದಾಳಿಗೆ ತಲೆ ತಗ್ಗಿಸುವುದಿಲ್ಲವೆಂದರು ಬಳ್ಳಾರಿಯ ಗಂಡುಗಲಿಗಳು.

ಬಳ್ಳಾರಿಯ ಹೆಣ್ಣುಮಕ್ಕಳಿಂದ ಸ್ವಾಗತವಾದ ಮೇಲೆ ಬಾಲಕೃಷ್ಣ ಶೆಟ್ಟರು ಸಮ್ಮೇಳನವನ್ನು ಉದ್ಘಾಟಿಸಿದರು. ಅನಂತರ ಮಾನ್ಯ ಮಾಸ್ತಿಯವರು ಸಿ. ಕೆ. ವೆಂ. ರವರ ಪರಿಚಯ ಮಾಡಿಕೊಟ್ಟರು. ವಸುಪಾಲಪ್ಪನವರು ಮುದುಕರು. ನೆರೆತ ಗಡ್ಡ ಮೀಸೆಗಳು ಬಂದಿವೆ. ಕುರ್ಚಿಯ ಮೇಲೆ ಕುಳಿತರೆ ಏಳಲೂ ಆಗುವುದಿಲ್ಲ. ಆದರೂ ಕನ್ನಡ ಸೇವೆಗೆ ಸೊಂಟಕಟ್ಟಿ ನಿಂತಿದ್ದಾರೆ. ಸಮ್ಮೇಳನದ ಮೇಲ್ವಿಚಾರಣೆ ವಹಿಸಿದ್ದಾರೆ. ಅವರ ಮಗ ಸ್ವಾಗತ ಭಾಷಣ ಓದಿದ. ಅದಾದ ಮೇಲೆ ಸಂಪ್ರದಾಯದ ಕಟ್ಟನ್ನು ಕಿತ್ತೊಗೆದು ಮೂರು ಗಂಟೆಗಳ ಕಾಲ ನಿರರ್ಗಳವಾಗಿ ಸಾಹಿತ್ಯವಾಹಿನಿ ಹರಿಸಿ, ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ, ರಾಜಕೀಯ, ಏಕೀಕರಣದ ವಿಚಾರವಾಗಿ ವಿಹಂಗಮವಾಗಿ ಸಭಿಕರಿಗೆ ಪರಿಚಯ ಮಾಡಿಕೊಟ್ಟರು. ಆಗಾಗ್ಗೆ ಸಭಿಕರನ್ನು ನಗಿಸುತ್ತಿದ್ದರು. ಕೈಲಾಸಂರವರನ್ನು ನೆನೆಸಿಕೊಂಡು ಮಗುವಿನಂತೆ ಅತ್ತರು. ಸುಮಾರು ನಾಲ್ಕೈದುಃಸಾವಿರ ಜನ ಸ್ತಬ್ಧರಾಗಿ ಮೂಕರಂತೆ ಕುಳಿತು ಕನ್ನಡ ತಾಯ ವಾಣಿಯನ್ನು, ಸಂದೇಹವನ್ನು ಕನ್ನಡ ಮಂದಿರದ ಪೂಜಾರಿಯಾದ ಸಿ. ಕೆ. ವೆಂ. ರವರಿಂದ ಕೇಳಿದರು. ಕೇಳಿ ತಮ್ಮ ಗುಡಿಯ ವೈಭವವನ್ನು ಸ್ಮರಿಸಿಕೊಂಡು ಹಿಗ್ಗಿದ್ದರು; ಈಗಿನ ದುಸ್ಥಿತಿಯನ್ನು ಕಂಡು ಅತ್ತರು, ಮರುಗಿದರು.

ಸಭೆಯಲ್ಲಿ ಅರ್ಧಕ್ಕರ್ಧ ಜನ ಹೆಂಗಸರೇ ಇದ್ದರು. ಮನೆಗೆಲಸ ಬಿಟ್ಟು, ಹೊಲಗೆಲಸ ಬಿಸಾಡಿ ಸಮ್ಮೇಳನಕ್ಕೆ ಬಂದಿದ್ದರು ಕನ್ನಡವ್ವನವರುಗಳು.

“ಸರ್, ಹರಪನಹಳ್ಳಿಯ ಹೆಣ್ಣುಮಕ್ಕಳಿಗಿರುವ ಕನ್ನಡ ಪ್ರೇಮ, ಭಕ್ತಿ, ಆದರ ಮೀಸೆ ಹೊತ್ತ ಮೈಸೂರ ಮಕ್ಕಳಿಗಿಲ್ಲವಲ್ಲ” ಎಂದನು ಅಭಯ ಕುಮಾರ.

“ಹಸಿದವರಿಗೆ ಅನ್ನದ ರುಚಿ ಗೊತ್ತು; ಗಡಿಯಲ್ಲಿರುವವರಿಗೆ

ಏಕೀಕರಣಬೇಕು. ಸಮ್ಮೇಳನದ ಅಗತ್ಯವಿದೆ; ಮೈಸೂರಿನವರು ಹೊಟ್ಟೆ ತುಂಬಿದವರು ಅಭಯ" ಎಂದರು ಅನಂತಯ್ಯನವರು.

"ಹಾಗಾದರೆ ಬಳ್ಳಾರಿಯ ಕನ್ನಡ ಬೇರೆ, ಮೈಸೂರು ಕನ್ನಡ ಬೇರೆಯೇ ಸರ್."

"ಸಾಹಿತಿಗಳು ಆ ರೀತಿ ತಿಳಿದಿಲ್ಲ; ಆದರೆ ಸ್ವಾರ್ಥ ರಾಜಕೀಯ ಪಟುಗಳು ಬೇರೆ ಎಣಿಸಿದ್ದಾರೆ."

"ಕನ್ನಡಿಗರ ಮನದಲ್ಲಿ ಕೊನೆಗೆ ಉಳಿಯುವವರು ಒಬ್ಬರು ಲತ್ಮೆಯಲ್ಲ, ಮೊದಲಿಯಾರರಲ್ಲ, ಪಂಪ, ಹರಿಹರ, ಷಡಕ್ಷರ, ಬಸವಣ್ಣನವರು ಸರ್."

"ಅದನ್ನು ನಮ್ಮ ರಾಜಕೀಯ ಮುಂದಾಳುಗಳು ಅರಿತಿದ್ದರೆ ಇಂತಹ ಸಮ್ಮೇಳನದ ಅಗತ್ಯೆಯೇ ಇರಲಿಲ್ಲ ಅಭಯ" ಎಂದರು ಮಾಸ್ತರು.

ಎರಡು ದಿನಗಳು ಹೇಳಲಾರದಷ್ಟು, ವರ್ಣಿಸಲಸಾಧ್ಯವಾದಷ್ಟು ಸಭೆಗಳು, ಗೋಷ್ಠಿಗಳು, ಕುಣಿತ, ಮೆರೆತಗಳು ನಡೆದುವು. ಅನಂತರ ಎಲ್ಲರೂ ಚೆದರಿದರು.

ಅನಂತಯ್ಯನವರು ಇಂದು ಶ್ರೀರಂಗಪಟ್ಟಣಕ್ಕೆ ಬರುವುವರಿದ್ದರು. ತಮ್ಮ ತಂದೆಯನ್ನು ನೋಡಲು ಸುವರ್ಣ ರೈಲ್ವೆ ನಿಲ್ದಾಣಕ್ಕೆ ಬಂದಿದ್ದಳು. ರುಕ್ಮಿಣಮ್ಮನವರು ಅಲ್ಲಿಯೇ ರಂಗನಾಥನ ಗುಡಿಯ ಮುಂದೆ ನಿಂತಿದ್ದರು. ಸಂಜೆ ಗುಡಿಯಿಂದ ತಿರುಗಾಡಲು ಬಂದ ಚಂಡಿದಾಸರು ರೈಲ್ವೆ ನಿಲ್ದಾಣದಲ್ಲಿ ಅಲೆದಾಡುತ್ತಿದ್ದರು. ಒಂಟಿಯಾಗಿ ನಿಂತಿದ್ದ ಸುವರ್ಣ ಅವಳ ಕಣ್ಣಿಗೆ ಬಿದ್ದಳು.

"ಏನಮ್ಮ ಮಗು ಇಲ್ಲಿ ನಿಂತೆ?"

"ನಮ್ಮ ಅಪ್ಪಾಜಿ ಈಗ ಬರ್‍ತಿದೆ, ನೋಡಕ್ಕೆ ನಿಂತೆ ದಾಸ್ರೆ!"

"ಎಲ್ಲಿಗೋಗವ್ರಮ್ಮ ನಿಮ್ಮ ಅಪ್ಪಾಜಿ."

"ಜಾತ್ರೆಗೋಗವ್ರೆ ದಾಸ್ರೆ!"

"ಈಗೆಂತಾ ಜಾತ್ರೆನಮ್ಮ."

"ಕನ್ನಡ ಜಾತ್ರೆಯಂತಲ್ಲ! ಹರಪನಹಳ್ಳಿಯಲ್ಲಿ ಅದಕ್ಕೆ ದಾಸ್ರೆ!"

"ಇನ್ನೂ ರೈಲು ಬರುವುದು ತಡ ಅಲ್ಲಿ ಗುಡಿಯ ಹತ್ತಿರ ಹೋಗಿ ಕುಳಿತ್ಕೊಳ್ಳೋಣ ಬಾ ಮಗು" ಎಂದು ಸುವರ್ಣನನ್ನು ಕರೆದುಕೊಂಡು ದಾಸರು ಹೋದರು. ಅವರ ಗುಡಿಯ ಹತ್ತಿರ ಯಾರೂ ಇರಲಿಲ್ಲ. ಪುರಾಣ

ಕೇಳಲು ಬಂದ ಜನರೆಲ್ಲಾ ಆಗಲೇ ಮನೆಗೆ ಹೊರಟು ಹೋಗಿದ್ದರು. ರೈಲು ನಿಲ್ದಾಣದ ಬೆಳಕು ಅಲ್ಲಿಯುವರೆಗೂ ಚೆಲ್ಲಿರಲಿಲ್ಲ. ಗುಡಿಯ ಹತ್ತಿರಕ್ಕೆ ಬಂದಾಗ ಚಂಡಿದಾಸರು ಸುವರ್ಣನ ಕತ್ತಿಗೆ ಕೈ ಹಾಕಿದರು. ಅವಳ ಕತ್ತಿನಲ್ಲಿ ಎರಡೆಳೆಯ ಚೈನಿತ್ತು. ಸುವರ್ಣ ಕಿಟ್ಟನೆ ಕಿರಿಚಿದಳು. ತಾವು ಹೊದ್ದಿದ್ದ ಕಾವಿಯ ಬಟ್ಟೆಯಲ್ಲೇ ಅವಳ ಬಾಯಿಮುಚ್ಚಿಕೊಂಡು ಹೊಳೆಯ ದಡಕ್ಕೆ ಕರೆತಂದರು. ಅಲ್ಲಿ ಅವಳ ಚೈನು, ಬಳೆಗಳನ್ನೆಲ್ಲಾ ಬಿಚ್ಚಿಕೊಂಡು ಕತ್ತು ಮುರಿದು ನದಿಗೆ ಬಿಸಾಡಿದರು.

ಅಂದಿನ ರೈಲು ಬರುವುದು ನಿದಾನವಾಯಿತು. ಇನ್ನೂ ರೈಲು ಬರಲಿಲ್ಲವಲ್ಲಾ ಮಗಳುನಿಲ್ದಾಣದಲ್ಲೇಇರಬಹುದೆಂದು ರುಕ್ಮಿಣಿಯಮ್ಮನವರು ರಂಗನಾಥನ ಗುಡಿಯಲ್ಲಿ ಕುಳಿತರು. ರೈಲು ಬಂತು. ಅನಂತಯ್ಯನವರು, ಅಭಯಕುಮಾರರಿಬ್ಬರೂ ಬಂದರು. ಹಿಂದಣ ಬೆಳಗ್ಗೆ ಹರಿಹರದಲ್ಲಿ ಕುಳಿತಿದ್ದವರಿಗೆ ರಾತ್ರಿಯಲ್ಲಾ ನಿದ್ರೆಯಿರಲಿಲ್ಲ. ಬಹಳ ಸುಸ್ತಾಗಿದ್ದರು. ಗಾಡಿಯ ಹತ್ತಿರ ರುಕ್ಮಿಣಮ್ಮನವರು ಭೇಟಿಯಾದರು. ಎಲ್ಲರೂ ಮನೆಗೆ ಬಂದರು.

"ಎಲ್ಲೆ ರುಕ್ಕು ಸುವರ್ಣ ಕಾಣೋದೇಯಿಲ್ಲ."

"ನಿಮ್ಮನ್ನು ನೋಡಲು ರೈಲು ಹತ್ತಿರ ಬಂದ್ಲಲ್ಲಾಂದ್ರೆ, ಸಿಕ್ಕಲಿಲ್ಲವೆ" ಎಂದು ಅಡಿಗೆಯ ಒಲೆಗೆ ಉರಿ ಹಾಕುತ್ತಿದ್ದ ರುಕ್ಮಿಣಮ್ಮನವರು ಹೇಳಿದರು.

"ಇದೇಯೆನೇ ರುಕ್ಕು ಮನೇಕಡೆ ನಿಗಾನೋಡೋದು" ಎಂದು ಹೆಗಲಮೇಲೆ ಟವಲ್ ಹಾಕಿಕೊಂಡು ರೈಲ್ವೆ ನಿಲ್ದಾಣದ ಕಡೆ ಅನಂತಯ್ಯನವರು ಹೊರಟರು.

ರೈಲು ಹೊರಟೋಗಿ ಬಹಳ ಹೊತ್ತಾಗಿತ್ತು. ಇನ್ನಾವ ರೈಲೂ ಬರುವಂತಿರಲಿಲ್ಲ. ಒಂದು ನರಪಿಳ್ಳೆಯೂ ಪ್ಲಾಟ್‌ಫಾರಂಮಿನ ಮೇಲಿರಲಿಲ್ಲ. ಸ್ಟೇಷನ್‌ಮಾಸ್ಟರು ಆಗಲೇ ಮನೆಗೆ ಹೋಗಿದ್ದರು. ಪೋರ್ಟರ್ 'ವೇಯ್ಟಿಂಗ್' ರೂಮಿನ ಹೊರಗಡೆ ಬೀಡಿ ಸೇದುತ್ತಾ ನಿಂತಿದ್ದ. ಮಾಸ್ತರು ನಿಲ್ದಾಣಕ್ಕೆ ಬಂದದ್ದನ್ನು ನೋಡಿ "ಅದಾರಯ್ಯ ಆದು ಇಷ್ಟೊತ್ತಿನಲ್ಲಿ ಸ್ಟೇಷನ್ನಿನಲ್ಲಿ ತಿರುಗಾಡುವವನು" ಎಂದು ಕೂಗಿದ ಪೋರ್ಟರ್.

"ನಾನೋ ಸಿದ್ಧ, ನಮ್ಮ ಹುಡುಗಿಯೇನಾದ್ರೂ ಇಲ್ಲಿ ಬಂದಿತ್ತೇನೊ" ಎಂದರು ಅನಂತಯ್ಯನವರು.

ಮಾಸ್ತರ ಧ್ವನಿ ಸಿದ್ಧನಿಗೆ ಪರಿಚಿತವಾದದ್ದು. ಆಗಾಗ್ಗೆ ಮಾಸ್ತರು ಸ್ಟೇಷನ್ನಿನ ಆಫೀಸಿನಲ್ಲಿ ಬಂದುಕುಳಿತುಕೊಳ್ಳುತ್ತಿದ್ದರು. ಸ್ಟೇಷನ್ ಮಾಸ್ಟರಿಗೂ ಅನಂತಯ್ಯನವರಿಗೂ ಗಾಢಸ್ನೇಹವಿತ್ತು.

"ಇಲ್ಲ ಬುದ್ಧಿ ಕಾಣಲಿಲ್ಲ, ಅದ್ಯಾಕೆ ಮನೇಲಿಲ್ವೆ ಬುದ್ಧಿ."

"ಇಲ್ಲಾ ಕಣೋ, ರೈಲು ಬಂದಾಗ ಇಲ್ಲಿಗೆ ಬಂದಿದ್ಲಂತೆ" ಎಂದು ಹೇಳಿ ಅಲ್ಲೆಲ್ಲಾ ಹುಡುಕಿ ರಂಗನಾಥನ ಗುಡಿಯ ಕಡೆ ಹೋದರು. ಸಿದ್ಧನೂ 'ವೇಯ್ಟಿಂಗ್ ರೂಮು' ಮುಚ್ಚಿಕೊಂಡು ಅವರ ಹಿಂದೆಯೇಬಂದ. ಇಬ್ಬರೂ ರಂಗನಾಥನ ಗುಡಿಯ ಮುಂದೆ ಬಸ್ತೀಗುಡಿಯ ಬಳಿ ಹುಡುಕಿದರು. ಅಲ್ಲಿ ಕತ್ತೆಗಳು ನಿದ್ರಿಸುತ್ತಿದ್ದುದೇ ಹೊರತು ಮನುಷ್ಯರ ನೆರಳಾವುದೂ ಇರಲಿಲ್ಲ. ಎಲ್ಲೂ ಸಿಗಲಿಲ್ಲ, ಮನೆಗೆ ಬಂದರು. ರುಕ್ಮಿಣಮ್ಮನವರು ಬಿಸಿ ರೊಟ್ಟಿಮಾಡಿ ಮಣೆಹಾಕಿ ತಿಂಡಿಗೆ ಸಿದ್ಧ ಮಾಡಿದರು.

"ಇದ್ಯಾಕೆ ಸಿಕ್ಕಲಿಲ್ವೇಂದ್ರೆ" ಎಂದು ರುಕ್ಮಿಣಮ್ಮನವು ಕೇಳಿದರು. ಮಾಸ್ತರು ಮಾತನಾಡಲಿಲ್ಲ.

"ಅಭಯ! ಅಭಯ!" ಎಂದು ಜಗುಲಿಯ ಮೇಲೆ ನಿಂತು ಎರಡು ಮೂರು ಬಾರಿ ಕೂಗಿದರು. ಫಲಹಾರ ಮಾಡಲು ಹೊರಡುತ್ತಿದ್ದ ಅಭಯ ಕುಮಾರ ಹಾಗೆಯೇ ಓಡಿಬಂದ.

"ಏನು ಸಾರ್! ಏನು ಸಾರ್! ಅದು."

"ನಮ್ಮ ಹುಡುಗಿ ತಪ್ಪಿಸಿಕೊಂಡೋಗ್ಬಿಟ್ಟಿದ್ದಾಳಂತೆ, ಸೈಕಲ್ಲಿನಲ್ಲಿ ಹೋಗಿ ದರಿಯಾದೌಲತ್ತಿನ ಕಡೆ ನೋಡಿಕೊಂಡು ಬಾಪ್ಪ" ಎಂದರು.

ಹಾಗೆಯೇ ನೆಟ್‌ಬನೀನಲ್ಲೇ ಅಭಯ ಬಸವರಾಜನ ಮನೆಗ ಬಂದ. ಅವನನ್ನು ಎಚ್ಚರಿಸಿ ಸೈಕಲ್ಲು ತೆಗೆದುಕೊಂಡು ದರಿಯಾ ದೌಲತ್ತಿನ ಕಡೆ ಹೊರಟನು. ಸಿದ್ದ ಸ್ಕಾಟ್ ಬಂಗಲಿಯ ಕಡೆ ಹುಡುಕಿಕೊಂಡು ಹೋದ. ಅನಂತಯ್ಯನವರು ಊರಲ್ಲೆಲ್ಲಾ ಹುಡುಕಿದರು. ಎಲ್ಲಿಹುಡುಕಿದರುಸುವರ್ಣನ ಪತ್ತೆ ಹಚ್ಚಲಾಗಲಿಲ್ಲ. ರುಕ್ಮಿಣಮ್ಮನವರು ಅಳುತ್ತಾ ಬೀದಿಯ ಬಾಗಿಲಲ್ಲಿ ನಿಂತರು. ಗುಣಾವತಮ್ಮನವರು ಬಂದು "ಬರತಾಳೆ ತಗೊ ರುಕ್ಮಿಣಿ, ಏಕಿಂಗೆ

ಅಲ್ಲಿ, ಸಾಲಿಗ್ರಾಮದ ಗುರುಗಳಿಗೆ ಹರಕೆ ಕಟ್ಟಿಕೊ" ಎಂದು ಸಮಾಧಾನ ಹೇಳುತ್ತಿದ್ದರು. ನಿದ್ರೆ ಮಾಡುತ್ತಿದ್ದ ಹುಡುಗರಿಗೆಲ್ಲಾ ಈ ವಿಷಯ ಗೊತ್ತಾಯಿತು. ಎಲ್ಲರೂ ಬಂದರು. ಕಪಿ ಸೈನ್ಯ ಹೊರಟಂತೆ ಹೊರಟಿತು ವಿದ್ಯಾರ್ಥಿಗಳ ಹಿಂಡು. ಬಸವರಾಜನ ಗುಂಪು ನದಿಯಹತ್ತಿರ ಬಂತು. ಕಟ್ಟೆಯ ಮೇಲೆ ನಿಂತು ಪಂಜಿನ ಬೆಳಕಿನಲ್ಲಿ ಹೊಳೆಯನ್ನೆಲ್ಲಾ ಹುಡುಕಿದರು. ಅಲ್ಲಿ ನದಿಯ ಕಲ್ಲು ಬಂಡೆಗಳ ಮಧ್ಯದಲ್ಲಿ ಯಾವುದೋ ಒಂದುಶವ ನಿಂತಿತ್ತು. ಡೆಲ್ಲೀ ಗೇಟಿನ ಹತ್ತಿರ ನದಿಯಲ್ಲಿ ಚಂಡಿದಾಸರು ಬಿಸಾಡಿದ ಸುವರ್ಣನ ಶವ ತೇಲಿಕೊಂಡು ಬಂದು ಬಂಡೆಗಳಿಗೆ ಸಿಕ್ಕಿಕೊಂಡು ಮೆಟ್ಟಿಲುಗಳ ಹತ್ತಿರ ನಿಂತಿತ್ತು. ಎಲ್ಲರೂ ದಡದಲ್ಲೇ ನಿಂತರು, ಶ್ರೀನಿವಾಸ ಪಂಜನ್ನು ಹಿಡಿದುಕೊಂಡು ನೀರಿಗಿಳಿದ. ಬಸವರಾಜ ಹಿಂದೆಯೇ ಬಂದ. ಅಲ್ಲಿ ನೋಡಲಾಗಿ ಅನಂತ ಉಪಾಧ್ಯಾಯರ ಮಗಳು ಸುವರ್ಣನ ಶವ ಬಂಡೆಗಳಿಗೆ ತಗಲಿ ನಿಂತಿತ್ತು. ಶವವನ್ನು ಮೆಲ್ಲನೆ ಮೇಲೆತ್ತಿ ಹೆಗಲಿನ ಮೇಲೆ ಮಲಗಿಸಿಕೊಂಡು ದಡಕ್ಕೆ ಬಂದರು. ಅಷ್ಟೊತ್ತಿಗಾಗಲೆ ಹುಡುಗಿ ಸಿಕ್ಕಿದಳೆಂಬ ಸಮಾಚಾರ ಅನಂತಯ್ಯನವರಿಗೆ ತಿಳಿಯಿತು. ಎಲ್ಲರೂ ನದಿಯ ದಡಕ್ಕೆ ಓಡಿಬಂದರು. ಅಲ್ಲಿ ಅವರು ಕಂಡದ್ದು ಸುವರ್ಣನನ್ನಲ್ಲ ಅವಳ ಶವವನ್ನು. ತೆಗೆದುಕೊಂಡು ಬಂದು ಜಗುಲಿಯಮೇಲೆ ಮಲಗಿಸಿದರು. ರುಕ್ಮಿಣಮ್ಮನವರು ಕಿಟ್ಟನೆ ಕಿರಿಚಿದರು. ಮಗಳನ್ನು ತಬ್ಬಿಕೊಂಡುಬಿಟ್ಟರು. ಗುಣಾವತಮ್ಮನವರು ಎಷ್ಟು ಸಮಾಧಾನ ಮಾಡುತ್ತಿದರೂ, ರುಕ್ಮಿಣಮ್ಮನವರು ಒಂದೇ ಸಮನೆ "ಅಯ್ಯೋ ಮಗಳೇ! ಸುವರ್ಣ'" ಎಂದು ಅಳುತ್ತಿದ್ದರು. ಅನಂತಯ್ಯನವರು ಸುಮ್ಮನೆ ಗೋಡೆಗೆ ಒರಗಿ ಕುಳಿತರು. ಹುಡುಗರೆಲ್ಲಾ ಅಲ್ಲಲ್ಲೆ ಕುಳಿತರು. ಯಾರಿಗೂ ನಿದ್ರೆಯಿಲ್ಲದೆ ರಾತ್ರಿಯನ್ನು ಕಳೆದರು.

ಬೆಳಗ್ಗೆ ಅನಂತಯ್ಯನವರ ಮನೆಯ ಮುಂದೆ ಬೆಂಕಿ ಉರಿಯುತ್ತದೆ. ಗುಣಾವತಮ್ಮನವರು ರುಕ್ಮಿಣಮ್ಮನವರ ಮನೆಯ ಕೆಲಸವನ್ನೆಲ್ಲಾ ತಾವೇ ಮಾಡಿದರು. ರಾತ್ರಿ ಅನಂತಯ್ಯನವರಿಗೆ ತಿಂಡಿಗಿಟ್ಟಿದ್ದಕ್ಕೆ ಇರುವೆ ಮುತ್ತಿತ್ತು. ಹಾಲನ್ನು ಕೊತ್ತಿ ಕುಡಿದುಕೊಂಡು ಹೋಗಿತ್ತು. ರೊಟ್ಟಿಯನ್ನು ಎತ್ತಿ ಒದ್ದೆಯಬಟ್ಟೆಯಲ್ಲಿ ಸುತ್ತಿಟ್ಟರು. ಬಾಬು ಸುಕನ್ಯೆಯರನ್ನು ತಮ್ಮ ಮನೆಗೇ ಕರೆದುಕೊಂಡು ಹೋದರು.

ನಾಭಿರಾಜಯ್ಯನವರು ಎಷ್ಟು ಕೇಳಿದರೂ ಹೆಣವನ್ನು ಕೊಡದೆ ರುಕ್ಮಿಣಮ್ಮನವರು ತಮ್ಮ ತೋಳಲ್ಲಿ ಬಿಗಿಯಾಗಿ ಹಿಡಿದುಕೊಂಡಿದ್ದರು.

"ಕೊಟ್ಟುಬಿಡು ರುಕ್ಮಿಣಿ, ಹೊತ್ತಾಗ್ತಿದೆ ಸ್ಮಶಾಣಕ್ಕೋಗ್ಲಿ" ಎಂದರು ಗುಣಾವತಮ್ಮನವರು.

"ಅಯ್ಯೋ ಮಗಳಿದ್ರೆ ನಿಮಗ್ಗೊತ್ತಾಕ್ತಿತ್ತು ಆ ಕಷ್ಟ ಗುಣಾವತಕ್ಕ, ಹೇಗೆಕೊಡ್ಲಿ, ನನ್ನನ್ನೂ ಜೊತೆಗೆ ಸುಟ್ಟಿಡಿ, ಇನ್ನಾರನ್ನು ಸುವರ್ಣ, ಸುವರ್ಣ ಅಂದು ಕೂಗ್ಲಿ ಗುಣಾವತಕ್ಕ" ಎಂದು ಒಂದೇಸಮನೆ ಅಳುತ್ತ ಕುಳಿತರು. ಕೊಟ್ಬಿಡೆ ರುಕ್ಕು; ಎಲ್ಲಾ ಕೊಡವ್ನೂ ಅವ್ನೆ ಕಿತ್ಕೊಂಡೋಗವ್ನೂ ಅವ್ನೆ" ಎಂದು ಆಕಾಶದ ಕಡೆ ಕೈ ತೋರಿಸಿದರು ಅನಂತಯ್ಯನವರು. ಆಗ ರುಕ್ಮಿಣಮ್ಮನವರು ನಾಭಿರಾಜಯ್ಯನವರ ಕೈಗೆ ತಮ್ಮ ಮಗಳಶವವನ್ನು ಹಾಕಿ ಬಾಯಿಬಾಯಿ ಬಡಿದುಕೊಂಡರು. ಹುಡುಗರೆಲ್ಲಾ ಹೆಣದ ಹಿಂದೆ ನಡೆದುಹೋದರು. ಅನಂತಯ್ಯನವರು ತಲೆಯಮೇಲೆ ಚೌಕಮುಚ್ಚಿಕೊಂಡ ಮಗಳ ಹಿಂದೆ ಬಂದರು.

ನರಸಿಂಹಯ್ಯನವರು ಮತ್ತಿತರ ಸಹೋದ್ಯೋಗಿಗಳು ಅನಂತಯ್ಯನವರ ಮನೆಗೆ ಬಂದು, ಸಮಾಧಾನದ ಮಾತಾಡಿ ಹೋದರು. ಅವರಿಗೆ ಹತ್ತು ದಿನಗಳು ಸಂಬಳದಮೇಲೆ ರಜವನ್ನು ಮಂಜೂರು ಮಾಡಿದರು ನರಸಿಂಹಯ್ಯನವರು.

ಸುವರ್ಣನ ಶವ ಜಗುಲಿಯ ಮೇಲೆ ಮಲಗಿಸಿದ್ದರಿಂದ ಮನೆಗೆ ಸೂತಕ ಬಂತೆಂದು ಮೂರು ತಿಂಗಳು ಮನೆ ಬಿಡಬೇಕೆಂದು ಸೀನಕ್ಕ ಕೇಳಿದಳು. "ಜಗಲಿಗೆ ಸುಣ್ಣ ಬಳಿಸಿದರಾಯಿತು ಸೀನಕ್ಕನವರೆ" ಎಂದರೆ; "ಇಲ್ಲ, ಇಲ್ಲಿ ಅದೆಲ್ಲಾ ಆಗೋಲ್ಲಾ ರುಕ್ಮಿಣಮ್ಮನವರೆ, ಮನೆ ಬಿಟ್ಕೊಟ್ಬಿಡಿ" ಎಂದೇ ಕುಳಿತಳು.

ಅನಂತಯ್ಯನರಿಗೆ ಯೋಚನೆಯ ಮೇಲೆ ಯೋಚನೆ, ಕಷ್ಟದಮೇಲೆ ಕಷ್ಟ. ಅಲ್ಲೇ ಎದುರಿಗಿದ್ದ ಮನೆಗೆ ಸಾಮಾನನ್ನೆಲ್ಲಾ ಸಾಗಿಸಿ ಖಾಲಿಮಾಡಿ ಕೊಟ್ಟರು.

## ೮

ರಾಮಾಶಾಸ್ತ್ರಿಗಳೀಗ ಸೀನಕ್ಕನ ಮನೆಯ ಪಕ್ಕಕ್ಕೇ ಬಂದಿದ್ದಾರೆ. ಅವರು ಬಾಡಿಗೆ ಕೊಡುವುದು ಹತ್ತುರೂಪಾಯಿ. ಬಾಗಿಲು ಗೋಡೆಗಳನ್ನೆಲ್ಲಾ ಸರಿಮಾಡಿಸಿಕೊಟ್ಟಿದ್ದಾರೆ. ಎಲೆಕ್ಟ್ರಿಕ್‌ಲೈಟು ಬೇರೆ ಬಂದಿದೆ. ವಿಮಲೆಯ ಓದು ಅಲ್ಲಿಗೇ ನಿಂತಿತು. ಮೆಟ್ರಿಕ್ಕು ಅವಳ ಮೆಟ್ರಿ ಹಿಡಿದು ಮೂರು ಸಲ ನೀರು ಕುಡಿಸಿದಮೇಲೆ ಓದಿಗೆ ಶರಣು ಹೊಡೆದಳು. ಆದರೂ ಮಗಳಿಗೆ ಮನೆಯಲ್ಲಿಯೇ ಪಾಠ ಹೇಳಿಸಿಕೊಡಲು ಸೀನಕ್ಕನಿಗೆ ಇಷ್ಟ. ಸಂಗೀತ ಅಷ್ಟೇನು ಚೆನ್ನಾಗಿ ಹಾಡುತ್ತಿರಲಿಲ್ಲ. ವಿಮಲೆಯ ಕಂಠ ಸ್ವಲ್ಪ ಕತ್ತೆಯನ್ನೇ ಹೋಲುತ್ತಿತ್ತು. ಆದ್ದರಿಂದ ಮುಂದೆ ಬರುವ ಅಳಿಯನಿಗೆ ಟೋಪಿ ಹಾಕಲು ಒಂದು ಮೆಟ್ರಿಕ್ ಮಾಡಿಸಬೇಕೆಂದು ರಾಮಾಶಾಸ್ತ್ರಿಗಳನ್ನು ಮನೆಪಾಠಕ್ಕೆ ಗೊತ್ತುಮಾಡಿದಳು.

ಪ್ರತಿನಿತ್ಯ ರಾಮಾಶಾಸ್ತ್ರಿಗಳು ಸೀನಕ್ಕನ ಮನೆಗೆ ಬಂದು ಪಾಠ ಹೇಳಿಕೊಡುತ್ತಾರೆ. ಈ ರೀತಿ ಶಾಸ್ತ್ರಿಗಳು ಬಂದು ಹೋಗುತ್ತಿದ್ದ ಒಂದು ವರ್ಷದಲ್ಲೇ ಸೀನಕ್ಕನಿಗೆ ಇನ್ನೊಂದು ಗಂಡುಮಗುವಾಯಿತು. ಬಹಳ ದಿನಗಳಾದ ಮೇಲೆ ಮಗುವಾಯಿತೆಂದು ಎಲ್ಲರಿಗೂ ಸಕ್ಕರೆ ಹಂಚಿದಳು. ಚೆಂದವ್ವನವರಂತೂ ಬೆಳಗಿನಿಂದ ಸಂಜೆಯವರೆಗೂ ಸೀನಕ್ಕನ ಮನೆಯಲ್ಲೇ ಕಾಲಕಳೆಯುತ್ತಾರೆ.

"ಏಕೆ ಮಗು ಲೋಕಪಾಲನ ಮುಖದಂಗಿಲ್ಲವೇಯಿಲ್ಲವಲ್ಲಾ" ಎಂದರು ಗುಣಾವತಮ್ಮನವರು.

"ಬೆಳೆದಮೇಲೆ ಗೊತ್ತಾಗುತ್ತೆ ಕಣೆ" ಎಂದು ಸೀನಕ್ಕನ ಪರ ಚೆಂದವ್ವನವರೇ ಉತ್ತರಿಸಿದರು.

ತೊಟ್ಟಿಲಿನಲ್ಲಿ ಸೀನಕ್ಕನ ಕೂಸು ಮಲಗಿತ್ತು, ಚೆಂದವ್ವನವರು 'ಲಾಲಿ, ಲಾಲಿ, ದೂರಿ, ದೂರಿ' ಎಂದು ತೂಗುತ್ತಿದ್ದರು. ಅಭಯಕುಮಾರ ಬಂದವನು ಮಗುವನ್ನು ನೋಡಿದ. "ಏಕೋ ಮಗು, ನಮ್ಮ ರಾಮಾಶಾಸ್ತ್ರಿಗಳ ಮುಖದಂಗೇ ಕಾಣ್ತೆತಜ್ಜಿ" ಎಂದ. ಸೀನಕ್ಕನ ಮುಖ ಕದ್ದವನ ಕಳ್ಳತನ ಹಿಡಿದು ನೀನು ಕದಿಯಲಿಲ್ಲವೇಂದರೇಗಾಗುತ್ತೇ ಹಾಗಾಯಿತು. "ಅಪೆಲ್ಲಾ ನಿಮ್ಮ ಅನಂತಉಪಾಧ್ಯಾಯರ ಹೆಂಡತಿಗೇಳ್ಕೊ ಹೋಗು"

ಎಂದು ಜಾಡಿಸಿ ಮಾತನಾಡಿದಳು. ವಿಮಲೆ ಹಟ್ಟಿಯಲ್ಲಿರಲಿಲ್ಲ. ಅಡಿಗೆಯ ಮನೆಯಲ್ಲೇ ನಿಂತು ಓರೆ ನೋಟದಿಂದ ಅಭಯನ ಮುಖ ನೋಡುತ್ತಿದ್ದಳು. ಅಭಯ ನಿಂತಿರುವವರೆಗೂ ಅಲ್ಲೇ ನಿಂತಿದ್ದಳು.

ಹೆಡ್‌ಮಾಸ್ಟರ್ ನರಸಿಂಹಯ್ಯನವರಿಗೆ ಕೃಷ್ಣರಾಜನಗರಕ್ಕೆ ವರ್ಗವಾಗಿದೆ. ಅದು ಶ್ರೀರಂಗಪಟ್ಟಣದ ಹೈಸ್ಕೂಲಿಗೆ ನಷ್ಟವಾದರೆ ಕೃಷ್ಣರಾಜನಗರದ ಹೈಸ್ಕೂಲಿಗೆ ಲಾಭವಾಯಿತು. ಹಿಂದೆ ಅದೇ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಿದ್ದರು. ಆದ್ದರಿಂದ ಅದು ಅವರನ್ನು ತೆರೆದ ಕೈಗಳಿಂದ ಸ್ವಾಗತಿಸಿತು. ಹೋಗುವಾಗ ಅನಂತ ಉಪಾಧ್ಯಾಯರನ್ನೂ ತಮ್ಮ ಜತೆಗೇ ಬರುವಂತೆ ಕರೆದರು. "ಎಲ್ಲಿಯಾದರೇನು ಸರ್ ವಿದ್ಯಾದಾನ ಮಾಡಲು" ಎಂದರು ಅನಂತಯ್ಯನವರು.

ನರಸಿಂಹಯ್ಯನವರು ಹೋದ ಕೆಲವೇ ದಿನಗಳಲ್ಲಿ ಅನಂತಯ್ಯನವರಿಗೂ ವರ್ಗದ ಆರ್ಡರ್ ಬಂತು. ಅವರನ್ನು ತೆಗೆದು ಹರಿಹರಕ್ಕೆ ಬಿಸಾಡಿದರು. ಅನಂತ ಉಪಾಧ್ಯಾಯರು ಹೋಗಲು ತಯಾರಿದ್ದರು. ಸರ್ಕಾರಿ ಕೆಲಸ ಮಾಡುವವರಿಗೆ ಯಾವ ಊರಾದರೇನೆಂದು ಗಂಟುಮೂಟೆ ಕಟ್ಟಲಣಿವಾದರು. ಸ್ಕೂಲಿನ ವಿದ್ಯಾರ್ಥಿಗಳಿಗಿದು ಗೊತ್ತಾಯಿತು. ಅನಂತಯ್ಯನವರನ್ನು ವರ್ಗ ಮಾಡುವುದಾದರೆ ತಾವೂ ಸ್ಕೂಲಿಗೆ ಸ್ಟ್ರೈಕ್ ಮಾಡುವುದಾಗಿ ಬೆದರಿಸಿದರು. "ನೀವು ಸ್ಟ್ರೈಕ್ ಮಾಡುವುದಾದರೆ ಲಾಠಿ ಚಾರ್ಜ್ ಮಾಡಿಸುತ್ತೇನೆ" ಎಂದು ಗದರಿಸಿದರು ಹೆಡ್‌ಮಾಸ್ಟರ್ ರಾಮಾಶಾಸ್ತ್ರಿಗಳು. ವಿದ್ಯಾರ್ಥಿಗಳೆಲ್ಲಾ ಸ್ಕೂಲಿನ ಹೊರಗಡೆ ಗುಂಪು ಸೇರಿದರು. ನಾರಾಯಣನನ್ನು ನಾಯಕನನ್ನಾಗಿ ಆರಿಸಿಕೊಂಡರು. ಮುನಿಸಿಪಾಲಿಟಿಯ ಮುಂದೆ ಜಯಕಾರ ಮಾಡತೊಡಗಿದರು. 'Down with Rama Shastri' "ಅನಂತ ಉಪಾಧ್ಯಾಯರ ವರ್ಗ—ನಮಗೆ ಬೇಕಿಲ್ಲ, ಅನಂತ ಮಾಸ್ತರು ನಮಗೆ ಬೇಕು" ಎಂದು ಕೂಗಾಡತೊಡಗಿದರು. ಸ್ಕೂಲಿನ ಸೆಕ್ರೆಟರಿಯುವರಾದ ಅಮಲ್ದಾರರು ಹೊರಗೆ ಬಂದರು. ಇಷ್ಟೊತ್ತಿಗಾಗಲೇ ರಾಮಾಶಾಸ್ತ್ರಿಗಳು ಪೋಲೀಸರಿಗೆ ಹೇಳಿಕಳುಹಿಸಿ ಒಂದು ವ್ಯಾನು ಪೋಲೀಸರನ್ನು ಕರೆಸಿಕೊಂಡರು. ಪೋಲೀಸರೆಲ್ಲಾ ಸಜ್ಜಾಗಿ, ಬಂದೂಕ ಬಾರು ಮಾಡಿಕೊಂಡು ನಿಂತಿದ್ದರು. ಇನ್ನೆಲ್ಲಿ ಅನಾಹುತವಾದೀತೆಂದು ಅನಂತ ಉಪಾ

ಧ್ಯಾಯರೇ ಖುದ್ದಾಗಿ ಬಂದು ವಿದ್ಯಾರ್ಥಿಗಳಿಗೆ ಸಮಾಧಾನದ ಮಾತಾಡಿ "ಸಾಕು ಬಿಡ್ರೊ ಒಂದೇಕಡೆ ಎಷ್ಟು ದಿನ ಇರೋದು; ನಾನು ಎಲ್ಲಿ ಹೋದ್ರೂ ನಿಮ್ಮನ್ನು ನೆನೆಸಿಕೊಳ್ಳುತ್ತೇನೆ; ಸತ್ಯಾಗ್ರಹ ಬಿಟ್ಟು ಸ್ಕೂಲಿಗೆ ಹಿಂತಿರುಗಿ" ಎಂದು ಉಪದೇಶ ಹೇಳಿದರು.

"ಅದೆಲ್ಲಾ ನಮಗೆ ಗೊತ್ತಿಲ್ಲ ಸಾರ್, ನೀವು ಇಲ್ಲಿಂದ ಹೋಗ ಕೂಡದು, ಅಥವ ನಮ್ಮನ್ನೆಲ್ಲಾ ನೀವು ಹೋಗುವ ಕಡೆಗೇ ಕರೆದುಕೊಂಡು ಹೋಗಿ" ಎಂದ ನಾರಾಯಣ.

"ಅಹುದು, ಅಹುದು ಅನಂತ ಉಪಾಧ್ಯಾಯರಿಲ್ಲದ ಸ್ಕೂಲಿಗೆ ನಾವು ಹೋಗುವುದಿಲ್ಲ" ಎಂದಳು ಶಕುಂತಳ.

"ಆಗಲಿ, ನಿಮ್ಮ ಮೇಷ್ಟ್ರರ ವರ್ಗವನ್ನು 'ಕ್ಯಾನ್ಸಲ್' ಮಾಡಿಸಿ ಕೊಡುತ್ತೇನೆ, ಈಗ ಸ್ಕೂಲಿಗೆ ಹೋಗ್ರಪ್ಪ" ಎಂದು ಸೆಕ್ರೆಟರಿಯವರು ಭರವಸೆ ಕೊಟ್ಟಮೇಲೆ ಸ್ಕೂಲಿನ ಕಡೆ ತಂಡ ನಡೆದು ಹೋಯಿತು. ಅನಂತ ಉಪಾಧ್ಯಾಯರೂ ಜೊತೆಯಲ್ಲಿ ಬಂದರು. ಅಷ್ಟೊತ್ತಿಗೆ ಪೋಲೀಸಿನವರು ಮಂಗಳಮಾಯವಾಗಿದ್ದರು.

ಕಮಲಮ್ಮನವರಿಗೆ ಬೇಸರವಾದರೆ ಎದುರಿನ ರುಕ್ಮಿಣಮ್ಮನವರ ಮನೆಗೆ ಬಂದು ಕುಳಿತುಕೊಳ್ಳುತ್ತಾರೆ. ಹನ್ನೊಂದು ಗಂಟೆಯಾದರೆ ಯಜ ಮಾನರು ಹೈಸ್ಕೂಲಿನ ರಾಜ್ಯಭಾರ ಮಾಡಲು ಹೊರಡುತ್ತಾರೆ. ಮಧ್ಯೆ ಕಾಫಿಗೂ ಮನೆಗೆ ಬರುವುದಿಲ್ಲ. ಕೆಲಸ ವಿಪರೀತವೆಂದು ಆಫೀಸು ರೂಮಿಗೇ ಕಾಫಿ ತಿಂಡಿ ತರಿಸಿಕೊಳ್ಳುತ್ತಾರೆ. ಬಿಸಿಬಿಸಿ ಉಪ್ಪಿಟ್ಟು ಕಾಫಿ ಮಾಡಿ ಜಲಜನ ಕೈಯಲ್ಲಿ ಕಳುಹಿಸುತ್ತಾರೆ ಕಮಲಮ್ಮನವರು. ಸಂಜೆ ಮನೆಗೆ ಬಂದರೆ "ನಿಮ್ಮಪ್ಪನ ಮನೆ ಗಂಟೋದಷ್ಟಂಗಾಡ್ತಿಯಲ್ಲ, ಇನ್ನು ಸ್ವಲ್ಪ ಉಪ್ಪಿಟ್ಟು ಜಾಸ್ತಿ ಕಳ್ಸಕ್ಕೇನು" ಎಂದು ಗದರಿಕೊಳ್ಳುತ್ತಾರೆ ರಾಮಾಶಾಸ್ತ್ರಿ ಗಳು. ಯಜಮಾನರಿಗೆ ಎಷ್ಟು ಬೇಕೋ ಅಷ್ಟು ಕಳುಹಿಸುತ್ತಾರೆ ಕಮಲಮ್ಮ ನವರು. ಪಾಪ ಅವರಿಗೇನು ಗೊತ್ತು ಉಪ್ಪಿಟ್ಟಿನಲ್ಲಿ, ನಳಿನಿಗೂ ಅರ್ಧ ಹಿಸ್ಸೆಯಾಗಬೇಕೆಂದು.

ಮನೆಯಲ್ಲಿ ಒಬ್ಬರೇ ಕುಳಿತುಕೊಳ್ಳಲು ಕಮಲಮ್ಮನವರಿಗೆ ಬೇಸರ ವಾಯಿತು. "ಬಾಮ್ಮ ಬಾಬು ಮನೆಗೆ ಹೋಗೋಣ" ಎಂದು ಜಲಜ

ಕಮಲಮ್ಮನವರ ಕೈ ಎಳೆದಳು. ತಾಯಿ ಮಗಳಿಬ್ಬರೂ ಮನೆಗೆ ಚಿಲಕ ಹಾಕಿಕೊಂಡು ಎದುರು ಮನೆಗೆ ಬಂದರು. ಅಲ್ಲಿ ರುಕ್ಮಿಣಮ್ಮನವರು ಸುಕನ್ಯೆಗೆ ಜಡೆ ಹೆಣೆಯುತ್ತಿದ್ದರು. "ಬನ್ನಿ ಕಮಲಮ್ಮನವ್ರೆ, ಕುಳಿತ್ಕೊಳಿ" ಎಂದು ಒಂದು ಬಣ್ಣದ ಚಾಪೆ ಕೊಟ್ಟರು ರುಕ್ಮಿಣಮ್ಮನವರು. ಕಮಲಮ್ಮನವರು ಅದರ ಮೇಲೆ ಕುಳಿತು ತಮ್ಮ ಜಲಜನಿಗೆ ಸ್ವೆಟರ್ ಹಾಕುತ್ತಿದ್ದರು, ಜಲಜ ಬಾಬುವಿನಸಂಗಡ ಜಗಲಿಯ ಮೇಲೆ ಬೊಂಬೆಯಾಟವಾಡಲು ಹೋದಳು.

"ಎಲ್ಲಿ ನಿಮ್ಮ ಮನೆ ನೋಡೋಣ ನಡೀರಿ ರುಕ್ಮಿಣಮ್ಮನವರೆ" ಎಂದು ಕಮಲಮ್ಮನವರು ಕೇಳಿದರು. ರುಕ್ಮಿಣಮ್ಮನವರು ಅಡಿಗೆಯಮನೆ, ಸ್ನಾನದ ಮನೆ, ದೇವರ ಮನೆಗಳನ್ನೆಲ್ಲಾ ತೋರಿಸುತ್ತಾ ಬಂದರು. ಅಲ್ಲಿಂದ ಅನಂತಯ್ಯನವರ ರೂಮಿಗೆ ಬಂದರು. ಚೊಕ್ಕವಾದ ಕೊಠಡಿ. ನೆಲದ ಮೇಲೆ ಜಮಖಾನ ಹಾಸಿತ್ತು. ಎರಡು ಬೀರುಗಳ ತುಂಬ ಇಂಗ್ಲೀಷು ಕನ್ನಡ ಪುಸ್ತಕಗಳಿದ್ದವು. ಗೋಡೆಯ ಮೇಲೆಲ್ಲಾ ಹತ್ತಾರು ಫೋಟೋಗಳು ನೇತಾಡುತ್ತಿದ್ದವು. ಫೋಟೋಗಳನ್ನೆಲ್ಲಾ ನೋಡುತ್ತ ಕಮಲಮ್ಮ ಬಂದರು. ಅಲ್ಲಿ ಒಂದು ಫೋಟೋವಿನಲ್ಲಿ ಮಾಸ್ತರ ಸಂಸಾರವೆಲ್ಲಾ ಇತ್ತು. ಕಮಲಮ್ಮ ಅಲ್ಲಿಯೇ ನಿಂತು "ಇದ್ಯಾರ ಹುಡುಗಿ ಇದು ರುಕ್ಮಿಣಮ್ಮನರೆ" ಎಂದು ಸುವರ್ಣನನ್ನು ತೋರಿಸಿದರು. ಅದಕ್ಕೆ ಉತ್ತರ ರುಕ್ಮಿಣಮ್ಮನವರ ಕಣ್ಣೀರೇ ಆಯಿತು. ಸುವರ್ಣನ ಚರಿತ್ರೆಯನ್ನೆಲ್ಲಾ ರುಕ್ಮಿಣಮ್ಮನವರು ಹೇಳಿದರು.

"ಎಷ್ಟು ಚೆನ್ನಾಗಿದೆ ರೂಮು ರುಕ್ಮಿಣಮ್ಮನವರೆ"

"ಹಾಗಿಲ್ಲದಿದ್ದರೆ ಯಜಮಾನರು ಪುಸ್ತಕವನ್ನು ಕಂಕಳಲ್ಲಿರಿಕಿಕೊಂಡು ದರಿಯಾದೌಲತ್ತಿಗೆ ಹೊರಟುಹೋಗ್ತಾರ್ರಿ."

"ಏನ್ರಿ ನೆನ್ನೆರಾತ್ರಿ ಒಂದು ಗಂಟೆಯಾದರೂ ನಿಮ್ಮ ರೂಮಿನಲ್ಲಿ ಲೈಟು ಉರಿಯುತಿತ್ತು."

"ಸದಾ ಯಜಮಾನ್ರು ಓದುತ್ತಲೇ ಇರ್ತರೆ ಅದಕ್ಕೇ ರೂಮಿನಲ್ಲಿ ಲೈಟಿತ್ರಿ" ಎಂದರು ರುಕ್ಮಿಣಮ್ಮನವರು.

ಹಟ್ಟಿಗೆ ಬಂದು ಕುಳಿತರು. ಬೆಳ್ಳಿಯ ತಟ್ಟೆಯಲ್ಲಿ ಹುರಿದ ಅವಲಕ್ಕಿ ತಂದಿಟ್ಟು "ತಗೋಳಿ ಕಮಲಮ್ಮನವರೆ" ಎಂದರು.

" ಇಲ್ಲ ರುಕ್ಮಿಣಮ್ಮನವರೆ, ಇದೆಲ್ರಾನೆ, ಊಟ ಆಯ್ತು "

" ಪರವಾಗಿಲ್ಲ ಅದಕ್ಕೇನು ನಾಲ್ಕು ಕಾಳು ಬಾಯಿಗೆಸೆದುಕೊಳ್ಳಿ."

ಕಮಲಮ್ಮ ಅವಲಕ್ಕಿ ತಿಂದು ನೀರು ಕುಡಿದರು. ಜಲಜ ಆಟ ಮುಗಿಸಿಕೊಂಡು ಬಂದಳು. ಅವಳ ಜೇಬಿಗೆ ಅವಲಕ್ಕಿ ತುಂಬಿದರು ರುಕ್ಮಿಣಮ್ಮನವರು.

ರಾಮಾಶಾಸ್ತ್ರಿಗಳು ಮನೆಗೆ ಬಂದು ನೋಡಲಾಗಿ ಕಮಲಮ್ಮ ಚಿಲಕ ಹಾಕಿಕೊಂಡು ಎಲ್ಲೋ ಹೋಗಿದ್ದರು. ಶಾಸ್ತ್ರಿಗಳು ಇಂದು ಜಾಗ್ರತೆಯಾಗಿ ಬಂದಿದ್ದರು. " ಮನೆ ಬಿಟ್ಟು ಎಲ್ಲೋಗಿದ್ದೆ ? " ಎಂದು ಕಮಲಮ್ಮನನ್ನು ಕೇಳಲಾಗಿ ;

" ಇಲ್ಲೇ ಎದುರು ಮನೇಲಿ ಕುಳಿತಿದ್ದೇಂದ್ರೆ "

" ಯಾರ ಮನೇಲಿ ? "

" ರುಕ್ಮಿಣಮ್ಮನವರ ಮನೇಲೀಂದ್ರೆ "

" ಆ ಅನಂತಯ್ಯನ ಮನೆಯಲ್ಲಾ ? "

" ಅಹುದು "

" ನಿನಗೇನು ಸ್ವಲ್ಪನಾದ್ರೂ ಮಾನಗೀನ ಇದೆಯೇ ಇಲ್ವೆ ; ನಿನ್ನ ಅಂತಸ್ತೇನು, ನೀನು ಯಾರ ಹೆಂಡತಿ, ಅವಳ ಅಂತಸ್ತೇನು, ಅವಳ ಮನೆ ಗೋಗ್ತಿಯಲ್ಲ "

" ಯಾರಾದ್ರೇನು, ನಮ್ಮ ಹೆಂಗಸರಿಗೆ ನೆರೆ ಹೆಚ್ಚೂಂದ್ರೆ "

" ಸಾಕು ಮುಚ್ಚೆ ನಿನ್ನ ಪುರಾಣನ, ನನ್ನ ಮಾನ ಹಾಳ್ಮಾಡಕ್ಕೆ ಮಾಡ ಕೆಲ್ಸಕಣೆ ಇದು " ಎಂದರು ಶಾಸ್ತ್ರಿಗಳು.

ಕಮಲಮ್ಮನವರು ಸುಮ್ಮನಿದ್ದರು.

" ಹಾಗೇನಾದ್ರೂ ಬೇಜಾರಾದ್ರೆ ಪಕ್ಕದ ಮನೆ ಸೀನಕ್ಕನವ್ರಿಲ್ವೆ, ಅಲ್ಲಿ ಹೋಗಿ ಕುಳಿತ್ಕೊ "

" ನನಗೇನು ಮನೇಲೇ ಹೂಣಿಸ್ಕಂಡಿರ್‍ತೀನಿ, ನಿಮ್ಮ ಮಗಳು ಬಾಮ್ಮ ಬಾಬು ಮನೆಗೋಗಣಾಂದಳು, ಅದಕ್ಕೋಸ್ಕರ ರುಕ್ಮಿಣಮ್ಮನವರ ಮನೆ ಗೋಗಿದ್ದು " ಎಂದು ಕಮಲಮ್ಮನವರು ಸಿಡುಕಿನಿಂದಲೇ ಜವಾಬು ಕೊಟ್ಟ ಮೇಲೆ ರಾಮಾಶಾಸ್ತ್ರಿಗಳು ಗಪ್‌ಚಿಪ್ ಆಗಿಬಿಟ್ಟರು.

ಕೃಷ್ಣರಾಜನಗರದಲ್ಲಿ ಸ್ವಾಮಿವಿವೇಕಾನಂದರ ಮತ್ತು ನೇತಾಜಿ ಸುಭಾಷರ ಜಯಂತಿಗಳಿಂದು. ಇಂದು ಭಾಷಣಗಳಾಗಬೇಕು. ಹಿಂದಣ ಸಂಜೆ ಅನಂತಯ್ಯನವರಿಗೆ ಆಹ್ವಾನ ಬಂದಿದೆ. ಎಲ್ಲಿಗೆ ಕರೆದರೂ ಒಲ್ಲೆ ಎನ್ನುವ ಸ್ವಭಾವವೇ ಅಲ್ಲ ಅನಂತಯ್ಯನವರದು. ಅದರಮೇಲೆ ನರಸಿಂಹಯ್ಯನವರ ಆಹ್ವಾನವೆಂದ ಮೇಲೆ ಕೇಳಬೇಕೆ. ನಿಂತಂತೆಯೇ ಹೊರಟರು. ಒಂದು ಬ್ಯಾಗಿಗೆ ಪಂಚೆ ಟವಲ್‌ಗಳನ್ನಾಕಿ ರೈಲ್ವೆ ನಿಲ್ದಾಣಕ್ಕೆ ರುಕ್ಮಿಣಮ್ಮನವರು ಕಳುಹಿಸಿದರು.

ರೈಲಿನಲ್ಲಿ ಕೃಷ್ಣರಾಜನಗರಕ್ಕೆ ಬಂದರು. ಅದೇಗೆ ಗೊತ್ತಾಯಿತೋ ಅನಂತಯ್ಯನವರ ಉಪನ್ಯಾಸ ಕೃಷ್ಣರಾಜನಗರದಲ್ಲಿದೆಯೆಂದು, ಅನೇಕ ವಿದ್ಯಾರ್ಥಿಗಳು ಪಟ್ಟಣದಿಂದ ಹೊರಟರು. ಅವರೆಲ್ಲಾ ಅನಂತಯ್ಯನವರ ಕಣ್ಣಿಗೆ ಬಿದ್ದದ್ದು ಕೃಷ್ಣರಾಜನಗರದ ರೈಲ್ವೆ ನಿಲ್ದಾಣದಲ್ಲಿ ಮಾತ್ರ.

ಅನಂತ ಉಪಾಧ್ಯಾಯರನ್ನು ಕರೆದುಕೊಂಡು ಹೋಗಲು ನರಸಿಂಹಯ್ಯನವರು ಅರ್ಧಗಂಟೆ ಮುಂಚೆಯೇ ನಿಲ್ದಾಣಕ್ಕೆ ಬಂದಿದ್ದರು.

"ಇದೇನು ಅನಂತಯ್ಯನವರೆ ನಿಮ್ಮ ಸೈನ್ಯವೂ ಬಂದಿದೆ" ಎಂದರು ನರಸಿಂಹಯ್ಯನವರು.

ಅನಂತಯ್ಯನವರು ತಿರುಗಿನೋಡಲು ಅವರ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ನಿಂತಿದ್ದರು. "ಇದೇನೋ ನಾರಾಯಣ ಇಲ್ಲಿಗೆ ಬಂದಿರಿ" ಎಂದರು ಅನಂತಯ್ಯನವರು. "ಇಲ್ಲೇ ಕಟ್ಟೆಗೆ ಬಂದಿದ್ದೆವು, ಹಾಗೆಯೇ ಬಂದೆವು ಸರ್" ಎಂದು ಸುಳ್ಳು ಸುಳ್ಳು ಹೇಳಿದರು ಹುಡುಗರು.

ಕೃಷ್ಣರಾಜನಗರ ಕೃಷ್ಣ ಭೂಪನಂತೆ ಸೌಮ್ಯವಾದ ಊರು. ಸುಂದರವಾದ ಕಟ್ಟಡಗಳು, ಅಗಲವಾದ ರಸ್ತೆಗಳಿಂದ ಊರು ನಲಿಯುತ್ತಿದೆ. ಊರಿನ ಮಧ್ಯದಲ್ಲಿ ಒಂದು ಸುಂದರವಾದ ಉದ್ಯಾನವನವಿದೆ. ಊರಿಗೂ ನಿಲ್ದಾಣಕ್ಕೂ ಒಂದೊಂದೂವರೆ ಮೈಲಿ ನಡೆದು ಬರಬೇಕು. ಅದು ತಾಲ್ಲೋಕು. ಅಮಲ್ದಾರರು, ಶೇಕದಾರರುಗಳೇ ಪೂರ್ಣಾಧಿಕಾರ ಚಲಾಯಿಸುವ ಸರ್ವಾಧಿಕಾರಿಗಳು. ಊರು ಬೋರೆಯ ಮೇಲೆ ಕಟ್ಟಿದೆ. ಊರಿನಿಂದ ಪ್ರತ್ಯೇಕವಾಗಿ ಎತ್ತರವಾದ ಸ್ಥಳದಲ್ಲಿ ಹೈಸ್ಕೂಲಿದೆ. ಮಾದರಿಯ ಹೈಸ್ಕೂಲಿನಂತಿದೆ. ಸಾಕಷ್ಟು ಲೈಬ್ರರಿಯಿದೆ, ವಿಜ್ಞಾನದ ವಸ್ತುಗಳಿವೆ,

ಉಪಾಧ್ಯಾಯರುಗಳು ಹೆಚ್ಚಿಗೆಯೇ ಇದ್ದಾರೆ. ಇಂತಹ ಉತ್ತಮ ಹೈಸ್ಕೂಲಿನ ಸರ್ವೋತ್ತಮ ಹೆಡ್‌ಮಾಸ್ಟರ್ ನರಸಿಂಹಯ್ಯನವರು, ಅಷ್ಟು ಚೆನ್ನಾಗಿಲ್ಲದ ಶ್ರೀರಂಗಪಟ್ಟಣದ ಹೈಸ್ಕೂಲಿನ ಅಸಿಸ್ಟೆಂಟ್ ಮಾಸ್ಟರ್ ಅನಂತಯ್ಯನವರನ್ನು ಭಾಷಣಮಾಡಲು ಅದೂ ಹಿಂದೂಸ್ಥಾನದ ವಿಭೂತಿ ಪುರುಷರುಗಳಾದ ಸ್ವಾಮಿ ವಿವೇಕಾನಂದ, ನೇತಾಜಿ ಬೋಸರ ಮೇಲೆ ಮಾತನಾಡಲು ಕರೆಸಿರಬೇಕಾದರೆ ಅನಂತಯ್ಯನವರ ಜ್ಞಾನದ ಮಟ್ಟ ಏನಿರಬೇಕು? ನಿಮ್ಮ ಊಹೆಗೆ ಬಿಡೋಣ.

ಹೈಸ್ಕೂಲಿನ ಕಾರ್ಯದರ್ಶಿ ಸೂರ್ಯನಾರಾಯಣ ಸ್ವಾಗತಮಾಡಿದ ಮೇಲೆ ಇಂದಿರಮ್ಮ ಪ್ರಾರ್ಥನೆ ಹಾಡಿದಳು. ಕಾರ್ಯಕ್ರಮದಲ್ಲಿ ಭಾಷಣವೆಂದಿತ್ತು. ಅನಂತಯ್ಯನವರು ಮಾತನಾಡಲು ಶುರುಮಾಡಿದರು. "ಇದು ಪ್ರಜಾಪ್ರಭುತ್ವದ ಯುಗ, ಪ್ರಜಾಪ್ರಭುತ್ವದ ತತ್ವವೇನೆಂದರೆ ಒಂದು ವಿಷಯವನ್ನು ವಿಮರ್ಶೆಮಾಡದೆ ಚರ್ಚೆಮಾಡದೆ ತೀರ್ಮಾನಕ್ಕೆ ಬರುವುದು ತಪ್ಪು. ನೆನ್ನೆ ನಮ್ಮೆಲ್ಲರ ಪ್ರೀತಿಪಾತ್ರರಾದ ನರಸಿಂಹಯ್ಯನವರು ನೀವು ನಾಳಿನ ನಮ್ಮ ಸಭೆಗೆ ಅಧ್ಯಕ್ಷರಾಗಬೇಕು, ಆ ರೀತಿ ನಾನು 'ಮೆಮೊ' ಕಳುಹಿಸಿದ್ದೇನೆ, ಕೂಡಲೇ ಹೊರಟು ಬನ್ನಿ ಎಂದು ಬರೆದಿದ್ದರು. ಇದು ತಪ್ಪು, ಲಾ ಪ್ರಕಾರ. ಆದರೆ ನಾವು ಬರಿಯ ಯಂತ್ರಗಳಲ್ಲ ಚಾಚೂ ತಪ್ಪದೆ ನಡೆಯಲಿಕ್ಕೆ. ಮನುಷ್ಯನೆಂದ ಮೇಲೆ ಪ್ರೇಮದ ಬಂಧನಗಳಿರುತ್ತೆ. ಇಲ್ಲಿ ನಮ್ಮಿಬ್ಬರ ಮಧ್ಯೆ ಪ್ರೇಮದ ತಂತಿ ಬಿಗಿಯಾಗಿ ಬಿಗಿದಿತ್ತು. ಆದ್ದರಿಂದ ನಾನು ಬರದಿದ್ದರೆ ನರಸಿಂಹಯ್ಯನವರಿಗೆ ಅವಮಾನವಾಗುತ್ತಿತ್ತು. ಒಪ್ಪಿಗೆ ಕೊಟ್ಟೆ. ಆದರೆ ಇದಕ್ಕೆ ನಾನು ಯೋಗ್ಯನೇ ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು.

ಪಾಶ್ಚಿಮಾತ್ಯ ತತ್ವಜ್ಞಾನಿ ಸೂಪನ್ ಓವರ್ ಹೇಳಿದ "Upanishads are the best solace to my life and death" ಉಪನಿಷತ್ತುಗಳು ನನ್ನ ಜೀವಕ್ಕೆ ಸಾವಿಗೆ ತಂಪೆರೆಯುತ್ತವೆ. ಅಂತಹ ಉಪನಿಷತ್ತಿನ ಜ್ಞಾನಿಗಳು ಮಾನವರನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಒಂದು ಸಾತ್ವಿಕರು, ಎರಡು ರಾಜಸಿಕರು, ಮೂರು ತಾಮಸಿಕರು.

ಅದೇರೀತಿ ಒಂದೆಡೆ ಸತ್ವಗುಣಗಳ ಶಿಕರಕ್ಕೇರಿದ ಸ್ವಾಮಿ ವಿವೇಕಾನಂದರಿದ್ದಾರೆ. ಇನ್ನೊಂದೆಡೆ ರಾಜಸಿಕ ಗುಣಕ್ಕೆ ತೌರುಮನೆಯಾಗಿ ಸದಾ

ಮುಖದಲ್ಲಿ ಕ್ಷತ್ರಿಯ ತೇಜೋ ಗುಣ ಹೊಮ್ಮುತ್ತಿರುವ ನೇತಾಜಿ ಇದ್ದಾರೆ. ಈ ಇಬ್ಬರು ವಿಶ್ವವ್ಯಕ್ತಿಗಳ ಮಧ್ಯೆ ಅಲ್ಪನೂ ತಾಮಸಿಕನೂ ಆದ ನಾನು ವಂಗ ಕೇಸರಿಗಳ ಮಧ್ಯೆ ಅಧ್ಯಕ್ಷನಾಗಿ ಕುಳಿತಿದ್ದೇನೆ. ನನಗೆ ಸಲ್ಲದ ಸ್ಥಳ ವಿದು. ಆಂಗ್ಲರಲ್ಲಿ ಒಂದು ನುಡಿಯಿದೆ 'The president must fit the chair' ಅಂದರೆ 'ಅಧ್ಯಕ್ಷನು ಕುರ್ಚಿಗೆ ಲಾಯಕ್ಕಾಗಿರಬೇಕು' ಇಬ್ಬರನ್ನೂ ಚೆನ್ನಾಗಿ ಅಧ್ಯಯನಮಾಡಿದ್ದವರನ್ನು ತಂದು ಕೂರಿಸಬೇಕಿತ್ತು. ಒಬ್ಬರು ಸ್ವಾಮಿ ಶಿವಾನಂದರು, ಇನ್ನೊಬ್ಬರು ಬಿಳಿಯ ಟೋಪಿಯುವರಿಗೆ ಸಿಕ್ಕಬೇಕಾಗಿದ್ದ ಪಟ್ಟವನ್ನು ನನ್ನ ತಲೆಗೆ ನರಸಿಂಹಯ್ಯನವರಿಟ್ಟಿದ್ದಾರೆ. ಕುಳಿತಿದ್ದಾಗಿದೆ" ಎಂದರು.

ಒಬ್ಬಿಬ್ಬರು ವಿದ್ಯಾರ್ಥಿಗಳು ಮಾತನಾಡಿದರು. ನರಸಿಂಹಯ್ಯನವರು ವಿವೇಕಾನಂದರ ಜೀವನವನ್ನು ಹೃದಯಂಗಮವಾಗಿ ವರ್ಣಿಸಿ, ಹೃದಯಕ್ಕೆ ತಾಗುವಂತೆ ಬಣ್ಣಿಸಿ; ಸಾತ್ವಿಕ ಭಾವನೆಗಳು ಹುಟ್ಟುವಂತೆ ಬೋಧಿಸಿದರು.

ಕೊನೆಯಲ್ಲಿ ಉಪಸಂಹಾರಮಾಡಲು ಅನಂತಯ್ಯನವರು ಮೇಲೆದ್ದರು. "ಇಲ್ಲಿಯವರೆಗೂ ನನ್ನ ಕಿರಿಯ ಗೆಳೆಯರೂ ಹಿರಿಯ ನರಸಿಂಹಯ್ಯನವರೂ ಮಾತನಾಡಿದ್ದನ್ನು ಕೇಳಿದ್ದೀರಿ. ನಾನು ಅಧ್ಯಕ್ಷನಾಗಿದ್ದಕ್ಕೆ ನಾಲ್ಕು ಮಾತನಾಡುತ್ತೇನೆ.

"ನಾನು ಮೊದಲೇ ಹೇಳಿದ ಹಾಗೆ ಇದು ಪ್ರಜಾಪ್ರಭುತ್ವದ ಯುಗ. ಅಧಿಕಾರ ಕೆಳಗಿನಿಂದ ಹರಿದುಬರುತ್ತದೆ. ಅದೇ ರೀತಿ ಸತ್ವ ಮೇಲ್ಮಟ್ಟದ್ದು. ರಾಜಸಿಕ ಅನಂತರ ಬರುವುದು. ಕೊನೆಯಲ್ಲಿ ತಾಮಸಿಕ ಬರುತ್ತದೆ. ಇಲ್ಲಿ ಇಬ್ಬರಲ್ಲಿ ಒಬ್ಬರೂ ತಾಮಸಿಕರಲ್ಲ. ಆದ್ದರಿಂದ ರಾಜಸಿಕದ ನೇತಾಜಿಯ ಮೇಲೆ ಎರಡು ಮಾತು ಮೊದಲಾಡುತ್ತೇನೆ. ನನ್ನ ಮಿತ್ರರೆಲ್ಲಾ ವಿವೇಕಾನಂದರ ಮೇಲೆ ಬಹಳ ಹೇಳಿದ್ದಾರೆ. ನೇತಾಜಿಯ ಮೇಲೆ ಸ್ವಲ್ಪ ಹೇಳದಿದ್ದರೆ ಅವರ ಜಯಂತಿಗೇ ಅನ್ಯಾಯ ಮಾಡಿದಂತಾಗುತ್ತದೆ. ಸುಭಾಷ್ಚಂದ್ರಭೋಸರು ೧೮೯೭ನೇ ಇಸವಿಯಲ್ಲಿ ಕಟಕ್ ಪಟ್ಟಣದಲ್ಲಿ ಹುಟ್ಟಿದರು. ಚಿಕ್ಕ ವಯಸ್ಸಿನಲ್ಲಿ ಮೂರು ಮಹಾವ್ಯಕ್ತಿಗಳು ಇವರ ಜೀವನದ ಮೇಲೆ ಪ್ರಭಾವ ಬೀರಿದರು. ಇವರ ತಾಯಿ ಪ್ರಭಾವತೀಬೋಸರು, ಗೆಳೆಯ ಹನುಮಂತ್‌ಖಾನ್, ಉಪಾಧ್ಯಾಯ ಬೇಸೀ ಬಾಬು. ಕೇವಲ ಹದಿನೆಂಟು

ಇಪ್ಪತ್ತೆಕ್ಕೇನೇ ಪದವೀಧರನಾದ ಬಾಬು. ಇಷ್ಟು ಹೊತ್ತಿಗೆ ರಾಜಕೀಯ ಇವನ ಚಿತ್ತವನ್ನು ಸೆಳೆಯಿತು. ರಂಗಕ್ಕೆ ಧುಮುಕಿದ. ತುರಂಗವಾಸ ಅನುಭವಿಸಿದ. ಮನೆಯವರು ಹೆದರಿದರು. ಇಂಗ್ಲೆಂಡಿಗೆ ಹೋದರೆ ಮನಸ್ಸು ಬದಲಾಯಿಸಬಹುದೆಂದೂ, ಒಳ್ಳೆಯ ಸರ್ಕಾರಿ ಉದ್ಯೋಗ ಮನಸ್ಸನ್ನು ಆಕರ್ಶಿಸಬಹುದೆಂದು ಐ. ಸಿ. ಎಸ್. ಓದಲು ಕಳುಹಿಸಿದರು. ಬಾಬು ಓದಲು ಹಿಂತೆಗೆದ, ಪಾಸಾದರೆ ಉಚ್ಚಧ್ಯೇಯ, ಉದಾತ್ತ ಆದರ್ಶಗಳಿಗೆ ಮಣ್ಣು ಮುಚ್ಚಬೇಕಾಗುತ್ತದೆಂದು : ಐ. ಸಿ. ಎಸ್. ನಲ್ಲಿ ರ್‍ಯಾಂಕಿನಲ್ಲಿ ಪಾಸು ಮಾಡಿದ ಧೀರವಂಗ ಬಾಬು. ಆಂಗ್ಲ ಸರ್ಕಾರ ಒಳ್ಳೆಯ ಉದ್ಯೋಗ ಕೊಡುವುದಾಗಿ ಹೇಳಿಕಳುಹಿಸಿತು. ಕೆಲಸಕ್ಕೆ ರಾಜೀನಾಮೆಯಿತ್ತು ಸ್ವದೇಶಕ್ಕೆ ಹಿಂತಿರುಗಿದ ಸುಭಾಷ್.

“ಗಾಂಧಿಜೀಯಿನ್ನೂ ರಾಜಕೀಯದ ಬೆಳಕಿಗೆ ಬಂದಿರಲಿಲ್ಲ, ಮುದುಕ ಇನ್ನೂ ಲಂಗೋಟೀಧಾರಿಯಾಗಿರಲಿಲ್ಲ, ನೆಹರುವಿನ್ನೂ ಕೇಂಬ್ರಿಡ್ಜ್ ಮೈದಾನದಲ್ಲಿ ಆಟವಾಡುತ್ತಿದ್ದಾಗ ಸುಭಾಷ್ ಬಾಳಿನಲ್ಲಿ ಬೇಸತ್ತು ಹಿಮಾಲಯಕ್ಕೆ ಓಡಿಹೋಗಿದ್ದ. ಭಾರತಕ್ಕೆ ಬಂದ ಮೇಲೆ ಸಿ. ಆರ್. ದಾಸರ ಗುರುತ್ವದಲ್ಲಿ ರಾಜಕೀಯಕ್ಕಿಳಿದ. ಸುಭಾಷು ಸ್ವಲ್ಪ ಉಗ್ರಗಾಮಿ. ಕ್ರಾಂತಿಯ ಕೂಗು ಕೂಗುವ ಕೇಸರಿ. ಇದು ಶಾಂತಿಯ ಗಾಂಧಿಗಾಗುತ್ತಿರಲಿಲ್ಲ. ಕಾಂಗ್ರೆಸ್ಸಿನಲ್ಲಿ ಒಡಕು ಹುಟ್ಟಿತು. ನಾವೇ ಕಚ್ಚಾಡಿದರೇನು ಫಲವೆಂದು ಬಾಬು ರಾಜೀನಾಮೆ ಕೊಟ್ಟ. ಕಾಂಗ್ರೆಸ್ಸು ಅವನೆದುರಾಯಿತು. ಆಂಗ್ಲರಿಗಿದು ಬೇಕಿತ್ತು. ಅವನ ಮೇಲೆ ವಾರೆಂಟ್ ಕೊಟ್ಟಿತು. ಇಂತಹ ಕಷ್ಟ ಸಮಯದಲ್ಲಿ ಬಾಬು ತನ್ನ ಮನೆ ಬಿಟ್ಟು, ಮಠ ತೊರೆದು ; ತಾಯಿ, ಸ್ನೇಹಿತರು, ಬಂಧು ಬಳಗಗಳನ್ನೆಲ್ಲಾ ಅಗಲಿ ನಾಡನ್ನು ಬಿಟ್ಟು ಹೊರಗೆ ಹೋಗಬೇಕಾಗಿ ಬಂತು. ಹೊರನಾಡಿನಲ್ಲಿ ನಿಂತು ತಾಯ್ನಾಡಸೇವೆ ಮಾಡಬಹುದೆಂದು ತಿಳಿದು ಬೋಸು ಬಂಗಾಳಾ ಬಿಟ್ಟು ಬರ್ಮಾಕ್ಕೆ ಬಂದನು. ಬರ್ಮಾದಿಂದ ಆಂಗ್ಲರಿಗೆ ಬ್ರಹ್ಮಾಸ್ತ್ರ ಪ್ರಯೋಗಿಸಲು ಬಂದನು.

ಅಜಾದ್ ಹಿಂದ್ ಸೈನ್ಯ ಕಟ್ಟಿ ನೇತಾಜಿ ಎಂಬ ಬಿರುದು ಪಡೆದ. ಸೈನ್ಯ ಆಂಗ್ಲರ ಮೇಲೆ ಯುದ್ಧಕ್ಕೆ ಹೋಗುವ ಮುನ್ನ ಹಿಂದೆ ಕುರುಕ್ಷೇತ್ರದಲ್ಲಿ ಅರ್ಜುನ ತನ್ನ ಪ್ರಥಮ ಬಾಣವನ್ನು ಗುರುದ್ರೋಣರ ಪಾದಗಳ

ಗರ್ಜಿಸಿದಂತೆ, ನೇತಾಜಿ ಗಾಂಧಿಯವರ ಆಶೀರ್ವಾದ ಕೇಳಿದ. ಬಾಪು, ನೀನು ರಾಷ್ಟ್ರದ ಪಿತಾಮಹ, ನಾನು ನಿನ್ನ ಮಗ. ತಪ್ಪು ಮಾಡಿರಬಹುದು. ಆದರೂ ಆಂಗ್ಲರ ಮೇಲೆ ಧರ್ಮ ಯುದ್ಧಕ್ಕೆ ಹೊರಟಿದ್ದೇನೆ. ನಿನ್ನ ಆಶೀರ್ವಾದ ಕೊಡು' ಎಂದು ಕೇಳಿದ. ನಾಡಿನ ಕೆಲಸದಲ್ಲಿ ತನ್ನ ಪ್ರಾಣ ಅರ್ಪಣೆ ಮಾಡಿದ ನಿಷ್ಕಾಮಕರ್ಮಿ ನೇತಾಜಿ.

ನೇತಾಜಿ ಕಾವಿ ಬಟ್ಟೆ ಧರಿಸದಿರಬಹುದು, ಪಂಚಕಮಂಡಲಗಳನ್ನು ಕೈಯಲ್ಲಿಡಿಯದೇ ಇರಬಹುದು. ಆದರೂ ಆತ ಅಚ್ಚ ಕರ್ಮ ಯೋಗಿ. ನಿಷ್ಕಾಮಕರ್ಮವೇ ಅವನ ಬಾಳಿನ ಆದರ್ಶವಾಗಿತ್ತು. ಆದರ್ಶದಂತೆ ಹೆಜ್ಜೆ ಹೆಜ್ಜೆಗೂ ನಡೆದ. ಅಂತಹ ಯೋಗಿಯ ನಾಮಸ್ಮರಣೆ ಮಾಡುವುದು ನಮ್ಮ ಕರ್ತವ್ಯ.

ಇನ್ನು ಸ್ವಾಮಿ ವಿವೇಕಾನಂದರ ವಿಚಾರ ಸವಿಸ್ತಾರವಾಗಿ ಹೇಳಿದ್ದಾರೆ. ಭಾರತೀಯರ ಸ್ಥಿತಿ ಹೀನ ದೆಸೆಯಲ್ಲಿದ್ದಾಗ, ಹಿಂದೂಧರ್ಮ ಅವನತಸ್ಥಿತಿಯಲ್ಲಿದ್ದಾಗ ಉದ್ಧರಿಸಲು ಅವತರಿಸಿದ ಮಹಾವ್ಯಕ್ತಿ ವಿವೇಕಾನಂದ. ನಮ್ಮ ನರಸಿಂಹಯ್ಯನವರು ಹೇಳಿದರು ಅವರ ಮನೆಯಲ್ಲಿ ಎದುರಿಗೇ ರಾಮಕೃಷ್ಣರ, ವಿವೇಕಾನಂದರ ಫೋಟೋಗಳಿವೆಯೆಂದು. ಆದರೆ ನಾನು ಹೇಳುತ್ತೇನೆ ನನ್ನ ಮನಸ್ಸಿನಲ್ಲೇ, ಹೃದಯದಲ್ಲೇ ಅವರಿಬ್ಬರ ಚಿನ್ಮಯ ಮೂರ್ತಿಗಳು ಅಚ್ಚೊತ್ತಿ ನಿಂತಿವೆಯೆಂದು.

ವಿವೇಕಾನಂದ ಅಚ್ಚ ಕರ್ಮಯೋಗಿ. ಆತನೊಬ್ಬ ಕ್ರಾಂತಿ ಪುರುಷ. ನೈತಿಕ ಕ್ರಾಂತಿಯಾಗಬೇಕೆಂದು ಮೂಲೆ ಮೂಲೆಯಲ್ಲಿ ಸಾರಿದ. ಹಿಂದಿನ ಋಷಿಗಳಂತೆ ಕಾಡಿಗೋಗಿ, ಸಂಸಾರ ಬಿಟ್ಟು ತಮ್ಮ ಆತ್ಮ ಪರಿಶುದ್ಧಿ ಮಾಡಿಕೊಳ್ಳಲೋಗಲಿಲ್ಲ. ಎಲ್ಲರೂ ಮೋಕ್ಷಕ್ಕೋದ ಮೇಲೆ ಕೊನೆಯಲ್ಲಿ ನಾನು ಮೋಕ್ಷಕ್ಕೋಗುತ್ತೇನೆಂದ. ನನಗೆ ಮೋಕ್ಷ ಬೇಡ. ಜನರ ಸೇವೆಬೇಕು. ಕೆಲಸ, ಕೆಲಸ ಎಂದು ಕೂಗಿದ. ಜನರಿಗೀಗ ಸತ್ವಕ್ಕಿಂತ ರಾಜಸ್ಸಿನ ಆವಶ್ಯಕತೆ ಹೆಚ್ಚು. ಶಕ್ತಿಯಿಲ್ಲದೆ, ಬಲವಿಲ್ಲದೆ ಜನ ಏನು ಯೋಗ ಮಾಡಿಯಾರು? ಎಲ್ಲಿ ನೋಡಲಿ ತಾಮಸಿಕ, ಆಲಸ್ಯ ಹಬ್ಬಿದೆ. ರಾಜಸ್ಸಿನ ಇಂಜಕ್ಷನ್ ಕೊಡಬೇಕು ಎಂದು ಬೋಧಿಸಿದ ವಿವೇಕಾನಂದ.

ಬರಿಯ ನೈತಿಕ ಪ್ರಚಾರಕನಲ್ಲ ವಿವೇಕಾನಂದ. ಸಮಾಜ ಸುಧಾರಕ. ಪಾಶ್ಚಿಮಾತ್ಯರ 'Tailored civilization' ಬೇಡ ಹಿಂದಿನ

ಗುರುಕುಲ ಬೇಕು. ಅದರ ಜೊತೆಗೆ ಪಾಶ್ಚಿಮಾತ್ಯರ ವಿಜ್ಞಾನವೂ ಬೇಕು. ನಾಡಿನ ಸಂಪತ್ತು ಏರಬೇಕು. ಎಂದು ಆರ್ಥಿಕ ಸುಧಾರಕನಾದ.

ಇನ್ನು ದೇವರ ಪ್ರಶ್ನೆ. ದೇವರಿದಾನೆಯೋ ಇಲ್ಲವೇ ಎಂಬುದು ಅನಾದಿಯ ಪ್ರಶ್ನೆ, ಅನುಮಾನ ಬರುವ ಪ್ರಶ್ನೆ. ಆದರೆ ಉಪನಿಷತ್ತು ಹೇಳಿತು ಬಹ್ಮ ಅತಿ ಸೂಕ್ಷ್ಮನೆಂದು. ಅಣುಪಿಗಿಂತ ಸೂಕ್ಷ್ಮ ಬ್ರಹ್ಮನ ರೂಪ. ನಾವು ಬ್ಯಾಸ್ಟೆಲ್, ಮೈಕ್ರೋಬ್‌ಗಳಂತಹ ಕೀಟಗಳನ್ನು ನೋಡ ಬೇಕಾದರೆ ಸೂಕ್ಷ್ಮದರ್ಶಕಯಂತ್ರ ಉಪಯೋಗಿಸುತ್ತೇವೆ. ಅತಿ ಸೂಕ್ಷ್ಮ ನಾದ ಬ್ರಹ್ಮನ ರೂಪ ನೋಡಬೇಕಾದರೆ, ಈ ವೈಜ್ಞಾನಿಕ ಸೂಕ್ಷ್ಮ ಯಂತ್ರ ಗಳು ಸಾಲದು. ಅದಕ್ಕೆ ಬೇಕು ಜ್ಞಾನದ, ಯೋಗದ, ತಪಸ್ಸಿನ ಯಂತ್ರ. ಅದರಲ್ಲಿ ನೋಡಿದರೆ ಅತಿ ಸೂಕ್ಷ್ಮನಾದ ಬ್ರಹ್ಮ ವಿರಾಟ್ ಸ್ವರೂಪನಾಗಿ, ವಿಶ್ವರೂಪನಾಗಿ ಕಾಣುತ್ತಾನೆ. ಎಲ್ಲಕ್ಕೂ ಮೊದಲು ನಂಬಿಕೆಬೇಕು, ದರ್ಶನ ಬೇಕು. ವೇದಗಳಲ್ಲಿ, ಪುರಾಣಗಳಲ್ಲಿ, ಸಿದ್ಧಾಂತದಲ್ಲಿ ನಂಬಿಕೆಬೇಕು. ಇಲ್ಲ ದಿದ್ದರೆ ದೇವರು ಕಾಣುವುದೇ ಇಲ್ಲ.

ಮಾನ್ಯ ಸಭಿಕರೆ! ಸ್ವಾಮಿ ವಿವೇಕಾನಂದರು ಹೊಸದೇನನ್ನೂ ಹೇಳ ಲಿಲ್ಲ. ಉಪನಿಷತ್ತುಗಾರರು ಹೇಳಿದ್ದನ್ನೇ ಜೋರಾಗಿ ಜನರನ್ನು ಮೇಲೆ ಬ್ಬರಿಸುವಂತೆ ಹೇಳಿದರು. ಆ ವ್ಯಕ್ತಿಯನ್ನು ನೋಡಿರಿ, ಏನು ಧ್ಯಾನಾಸಕ್ತ ನಾಗಿ ಕುಳಿತಿದ್ದಾನೆ. Awake, Arise, Stop not till the goal is reached" 'ಏಳು, ಎಚ್ಚರವಾಗು ನಿನ್ನ ಗುರಿ ಮುಟ್ಟುವ ವರೆಗೂ ನಿಲ್ಲಬೇಡ. ಈ ಉಪನಿಷತ್ತಿನ ವೀರವಾಣಿ ವೇದಾಂತ ಕೇಸರಿ ವಿವೇಕಾ ನಂದರ ಬಾಯಿಯಿಂದ ಗುಡಿಗಿಕೊಂಡು ಬಂದಿತು. ಅವರ ನುಡಿಯು ಹಿಂದೆ ಕಿಡಿಯಿದೆ. ತಾಮಸಿಕವನ್ನು ಸುಡುವ ಕಿಡಿಯದು.

ಹೇ ಮಾನವ ನಿನ್ನನ್ನು ನೀನು ಅರಿ, ನಿನ್ನ ಆತ್ಮಸ್ವರೂಪವನ್ನು ತಿಳಿ, ಪಾಪ-ಪುಣ್ಯದ ಭೀತಿಗೆ ಬೆದರು, ಸತ್‌ಚಾರಿತ್ರದಿಂದ ಬಾಳು. ಇಷ್ಟಾದರೆ ಸಾಲದು, ಇತರರಲ್ಲಿ ಈ ಗುಣಗಳನ್ನು ಎಚ್ಚರಿಸು. ನಿನ್ನ ಗುರಿ ಏನು? ಗುರಿ ಬ್ರಹ್ಮನನ್ನು ಅರಿಸುವುದು. ಜೀವಾತ್ಮನಿಂದ ಪರಮಾತ್ಮ ನಾಗುವುದು. ಬ್ರಹ್ಮನಲ್ಲಿ ನಿನ್ನ ಆತ್ಮ ಲೀನವಾಗುವವರೆಗೂ ಸುಮ್ಮನೆ ಕುಳಿತುಕೊಳ್ಳಬೇಡ." ಈ ರೀತಿ ಉದ್ದಾಮ ಭಾಷಣಕೊಟ್ಟು ನರಸಿಂಹಯ್ಯ ನವರನ್ನು ಒರೆಗಿ ಅನಂತಯ್ಯನವರು ಕುಳಿತರು.

ರಾತ್ರಿ ಹಾಗೆಯೇ ಸ್ವಲ್ಪ ಜ್ವರ ಬಂತು. "ಸ್ವಲ್ಪ ಸುಧಾರಿಸಿಕೊಂಡು ಹೋಗಿ ಅನಂತಯ್ಯನವರೆ" ಎಂದು ಒಂದೆರಡು ದಿನಗಳು ತಮ್ಮ ಮನೆಯಲ್ಲೇ ನರಸಿಂಹಯ್ಯನವರಿರಿಸಿಕೊಂಡರು. ಶ್ರೀರಂಗಪಟ್ಟಣಕ್ಕೆ ಎರಡು ದಿನಗಳಿಗೆ ರಜ ಬರೆದಾಕಿದರು. ಜೊತೆಯಲ್ಲಿ ನರಸಿಂಹಯ್ಯನವರ ಕಾಗದವೂ ಇಲ್ಲದಿದ್ದರೆ ರಾಮಾಶಾಸ್ತ್ರಿಗಳು ಅನಂತಯ್ಯನವರಿಗೆ ರಜ ಕೊಡುತ್ತಿದ್ದರೋ ಇಲ್ಲವೋ ಗೊತ್ತಿಲ್ಲ.

ಎರಡು ದಿನಗಳು ಕೃಷ್ಣರಾಜನಗರದಲ್ಲಿದ್ದ ಅನಂತಯ್ಯನವರನ್ನು ವಿದ್ಯಾರ್ಥಿಗಳೆಲ್ಲಾ ಬಂದು ನೋಡುತ್ತಿದ್ದರು. "ಇಲ್ಲಿಗೇ ಬಂದ್ಬಿಡಿ ಸರ್, ಮನೆ ಕೊಡಿಸ್ತೇವೆ" ಎಂದರು ಹುಡುಗರು. "ಎಲ್ಲಿದ್ದರೂ ಒಂದೇ ಬಿಡ್ರಪ್ಪ" ಎಂದರು ಅನಂತಯ್ಯನವರು.

ಎರಡು ದಿನಗಳನಂತರ ಮತ್ತೆ ರಾಮಾಶಾಸ್ತ್ರಿಗಳ, ಸೀನಕ್ಕನ ಸತ್ ಸಹವಾಸ ಅನುಭವಿಸಲು ಬಂದರು ಅನಂತ ಉಪಾಧ್ಯಾಯರು.

## ೯

ರತ್ನಮಾಲೆ ಈಗ ಮೂರು ವರ್ಷದಿಂದ ಪ್ರತಿನಿತ್ಯ ಪಟ್ಟಣದಿಂದ ಮೈಸೂರಿಗೆ ಹೋಗಿಬರುತ್ತಾಳೆ. ಬೆಳಗ್ಗೆ ಊಟ ಮಾಡಿಕೊಂಡು ಹತ್ತು ಗಂಟೆಯ ರೈಲಿನಲ್ಲಿ ಬರುತ್ತಾಳೆ. ಬರುವಾಗ ಒಂದು 'ಟಿಪಿನ್‌ಕ್ಯಾರಿಯರ್' ನಲ್ಲಿ ತಿಂಡಿ ಇಟ್ಟುಕೊಂಡು ತರುತ್ತಾಳೆ. ಮೈಸೂರಿನಲ್ಲಿ ರೈಲ್ವೆ ಆಫೀಸಿನ ಹತ್ತಿರ ಒಂಟಿಕೊಪ್ಪಲಿನಿಂದ ಕಾಲೇಜು ಹುಡುಗರು, ಹುಡುಗಿಯರುಗಳನ್ನು ಕರೆತರುವ ಸಿಟಿ ಬಸ್ಸಿನಲ್ಲಿ ಕುಳಿತುಕೊಳ್ಳುತ್ತಾಳೆ. ಅದು ಅವಳನ್ನು ಸೆಂಟ್ ಫಿಲೋಮಿನಾ ಕಾಲೇಜಿಗೆ ತಂದುಬಿಡುತ್ತದೆ. ಅಲ್ಲಿ ಓದುತ್ತಿದ್ದಾಳೆ ರತ್ನಮಾಲೆ. ಈಗ ಬಿ. ಎಸ್. ಸಿ. ಮೊದಲನೆಯ ವರ್ಷ ಅವಳೋದುತ್ತಿರುವುದು.

ಫಾದರ್, ಬ್ರೌನ್ ಕಾಲೇಜಿನ ಪ್ರಿನ್ಸಿಪಾಲು. ಆಡಳಿತದ ದಕ್ಷತೆ ಚೆನ್ನಾಗಿದೆ. ಪಾದ್ರಿಯ ಹಾಗೆ ಉದ್ದವಾದ ಬಿಳಿಯ ನಿಲುವಂಗಿ ಹಾಕಿಕೊಂಡು ಬಿಳಿಯ ಗಡ್ಡ ಬಿಟ್ಟಿದ್ದಾರೆ. ದಕ್ಷತೆಯಿಂದ ಕಾಲೇಜನ್ನು ನೋಡಿಕೊಳ್ಳುತ್ತಿದ್ದರೂ ರೋಮಿಯೋ ಜ್ಯೂಲಿಯಟ್‌ಗಳ ಆಟ ವಿಪರೀತ ಅಲ್ಲಿ.

ಲೇಡೀಸ್ ರೂಮಿನಲ್ಲಿ ವಿದ್ಯಾರ್ಥಿನಿಯರುಗಳೆಲ್ಲಾ ಹೊಟೇಲಿನಿಂದ ಹಲುವ, ಜಹಂಘೀರು, ಮಸಾಲದೋಸೆ, ಆಂಬೊಡೆಗಳನ್ನು ತರಿಸಿಕೊಂಡು ಕಾಲಮೇಲೆ ಕಾಲಿಟ್ಟು ಚಪ್ಪಲ್ಲಾಡಿಸುತ್ತಾ ತಿನ್ನುತ್ತಾ "ಲೇ ಸುಲು ಏನಿವತ್ತು ನಿಮ್ಮವರು ಬಹಳ ರೋಪ್‌ನಿಂದ ನೋಡುತ್ತಿದ್ದರು; ಆನಂದನ ಲವರ್ ಇಂದೇನು ಸರ್ಜ್‌ಸೂಟಿನಲ್ಲಿ ಬಂದಿದಾರೆ; ಆ ಕೈಯಣ್ಣೆ ಮೇಷ್ಟ್ರು ಇಂದೇಕೆ ಬಂದೇ ಇಲ್ಲ; ಇಂದು 'The bed chamber talks' picture ಹೋಗೋಣ ಕಣೆ ಆನಂದ" ಎಂದು ಹರಟೆ ಕೊಚ್ಚುತ್ತಿದ್ದರೆ, ರತ್ನಮಾಲೆ ಮಾತ್ರ ತಾನು ಮನೆಯಿಂದ ತಂದ ಉಪ್ಪಿಟ್ಟನ್ನೊ ಅಥವ ಇನ್ನಾವುದೋ ತಿಂಡಿಯನ್ನು ತಿನ್ನುತ್ತಿದ್ದಳು. "ಏನಮ್ಮ ಆನಂದ ಆ ರತ್ನಮಾಲೆಗೆ ಊರಿನಿಂದ ತಿಂಡಿತರಲಿಕ್ಕೆ, ಲಾಯರ ಮಗಳು ಬೇರೆಯಂತೆ ಸಾಲದ್ದಕ್ಕೆ" ಎಂದು ರತ್ನಮಾಲೆಗೆ ಕೇಳುವಂತೆಯೇ ಲಲಿತ ಮಾತನಾಡಿದಳು.

ಫಿಲೋಮಿನಾ ಕಾಲೇಜಿರುವುದು ಮೈಸೂರು ಸಿಟಿಯಿಂದ ಒಂದೆರಡು ಮೈಲಿ ಹೊರಗಡೆ. ನೂತನವಾದ ಸೊಗಸಾದ ಕಟ್ಟಡ. ಊರಿನ ಗದ್ದಲ ಗಲಾಟೆಗಳಿಂದ ದೂರ ನಿಂತಿದೆ. ವಿದ್ಯಾಭ್ಯಾಸಕ್ಕಿರಬೇಕಾದ ಒಳ್ಳೆಯ ಆವರಣ ಅಲ್ಲಿದೆ. ಇದನ್ನು ಹುಡುಗರ ಕಾಲೇಜೆನ್ನುವುದಕ್ಕಿಂತ ಹುಡುಗಿಯರ ಕಾಲೇಜೆನ್ನುವುದು ಸರಿಯೆನ್ನಿಸುತ್ತದೆ. ಅವರ ಸಂಖ್ಯೆ ಕಡಿಮೆಯಿದ್ದರೂ ಅವರ ಮಾತಿಗೇ ಹೆಚ್ಚು ಪ್ರಾಶಸ್ತ್ಯ.

ಅದೇ ಕಾಲೇಜಿನ ಯೂನಿಯನ್ನಿನ ಸೆಕ್ರೆಟರಿ ಬಸವರಾಜ. ಒಂದು ದಿನ ಯೂನಿಯನ್ನಿನ ಆಶ್ರಯದಲ್ಲಿ ನಾಟಕವೊಂದನ್ನು ಏರ್ಪಡಿಸಿದ್ದ. ಮುಖ್ಯ ಭೂಮಿಕೆಯ ಪಾತ್ರವನ್ನು ರತ್ನಮಾಲೆ ವಹಿಸಿದ್ದಳು. ನಾಯಕನ ಪಾತ್ರವನ್ನು ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ಕಾರ್ಯದರ್ಶಿ ಅಭಯಕುಮಾರ ವಹಿಸಿದ್ದ. ನಾಟಕ ಅದೇ ಕಾದಂಬರಿ 'ಕಿಸಾಗೋತಮಿ' ಕಿಸಾಗೋತಮಿಯ ಪಾತ್ರವನ್ನು ರತ್ನಮಾಲೆ ವಹಿಸಿದ್ದಾಳೆಂಬುದನ್ನು ಯಾರೂ ನಂಬದಂತಾದರು. "ಆ ಟಿಪನ್‌ಕ್ಯಾರಿಯರ್ನಲ್ಲಿ ತಿಂಡಿತರುವ ಗುಗ್ಗು ಏಕೆ ಈರೀತಿ ಅಭಿನಯಿಸಬಾರದೆಂದು" ಲಲಿತ ಅಂದಿಯೂ ಅಂದಳು. ಆದರೆ ವಂದನೆ ಅರ್ಪಿಸುವಾಗ ರತ್ನಮಾಲೆಯ ಹೆಸರು ಪಟ್ಟಿಯಮೇಲಿದ್ದಾಗ ಎಲ್ಲರೂ ಕಣ್ಣಾವಿಕ್ಕಿಯಾದರು.

" ಯಾವ ಹುತ್ತದಲ್ಲಿ ಯಾವ ಹಾವು ಇದೆಯೋನ್ನುವುದು ಗೊತ್ತಾಗುವುದಿಲ್ಲಾನ್ನುವುದು, ಇದಕ್ಕೇನೆ ಲಲಿತ " ಅಂದಳು ಆನಂದ.

ಈಗ ಎಲ್ಲರೂ ರತ್ನಮಾಲೆಯ ಗೆಳೆಯತನ ಬಯಸುತ್ತಾರೆ. " ಬನ್ನಿ ರತ್ನಮಾಲೆ ಕಾಫಿ ತರಿಸ್ತೇನೆ " ಎನ್ನುವಳು ಲಲಿತ. " ಇಲ್ಲೇಇರಿ ರತ್ನಮಾಲೆ ರಾತ್ರಿ ಸಿನಿಮಾಕ್ಕೋಗೋಣ " ಎನ್ನುತ್ತಾಳೆ ಆನಂದ. ಕಾಲೇಜಿನ ಹುಡುಗರಿಗಂತೂ ರತ್ನಮಾಲೆ ಬರದಿದ್ದರೆ ಕಾಲೇಜೇ ಮಂಕಾಗಿ ಕಾಣುತ್ತದೆ. ಪಾಠ ನಡೆಯುತ್ತಿದ್ದರೆ ಅವಳನ್ನೇ ನೋಡುತ್ತಿರುತ್ತಾರೆ. ಪ್ರಯೋಗ ಶಾಲೆಯಲ್ಲಂತೂ ಅವಳ ಮುಖ ನೋಡುತ್ತಾ ನೋಡುತ್ತಾ ಆಕ್ಸಿಜನ್ ತಯಾರು ಮಾಡಲು ಹೋಗಿ ನೈಟ್ರೋಜನ್ ತಯಾರುಮಾಡಿದ್ದಾರೆ.

ಆದರೆ ರತ್ನಮಾಲೆಗೆ ಒಂದು ದೊಡ್ಡ ಯೋಚನೆ. ವಿಶ್ವವಿದ್ಯಾನಿಲಯವೆಂದರೆ ವಿಶ್ವದ ಎಲ್ಲಾ ವಿಚಾರಗಳನ್ನೂ ತಿಳಿಯುವ ಕೇಂದ್ರವೆಂದು ತಿಳಿದಿದ್ದಳು. ಕಾಲೇಜನ್ನೆಲ್ಲಾ ತಡಕಿದರೂ ಅನಂತ ಉಪಾಧ್ಯಾಯರಂತ ಮಾಸ್ತರೊಬ್ಬರು ಇಲ್ಲವಲ್ಲಾನ್ನುತ್ತಿತ್ತು ಅವಳ ಮನಸ್ಸು.

ಕಾಲೇಜಿಗೆ ರಜ ಇದೆಯೆಂದು. ಶ್ರೀರಂಗಪಟ್ಟಣದಲ್ಲೇ ರತ್ನಮಾಲೆ ಉಳಿದಿದ್ದಾಳೆ. ಅನಂತ ಉಪಾಧ್ಯಾಯರ ಮನೆಗೆ ಬಂದಳು. ಉಪಾಧ್ಯಾಯರು ರೂಮಿನಲ್ಲಿ ಅಭಯ ಕುಮಾರನ ಸಂಗಡ ಮಾತನಾಡುತ್ತಿದ್ದರು. " ಬಾಮ್ಮ ರತ್ನ " ಎಂದು ಕರೆದರು ರುಕ್ಮಿಣಮ್ಮನವರು. " ಏನಮ್ಮ ರತ್ನ ನಮ್ಮನ್ನೆಲ್ಲಾ ಆಗಲೇ ಮರೆತಂಗೆ ಕಾಣ್ತೆದಲ್ಲ " ಎಂದರು ಅನಂತಯ್ಯನವರು.

" ಈ ಜನ್ಮದಲ್ಲಿ ಮಾತ್ರ ಅದು ಸಾಧ್ಯವಿಲ್ಲ ಸರ್ " ಎಂದಳು ರತ್ನ.

" ಪರವಾಗಿಲ್ಲ ಕಣೆ ರುಕ್ಕು, ನಮ್ಮ ರತ್ನ ಇನ್ನೂ ನಮ್ಮನ್ನು ಮರೆತಿಲ್ಲಾ ಕಣೆ " ಎಂದರು ಮಾಸ್ತರು.

ಸಂಜೆ ಎಲ್ಲರೂ ದರಿಯಾದೌಲತ್ತಿಗೋಗುವುದೆಂದು ತೀರ್ಮಾನವಾಯಿತು. ಉಪಾಧ್ಯಾಯರ ಮನೆಯಲ್ಲೇ ಚಿತ್ರಾನ್ನ, ಮೊಸರನ್ನಗಳನ್ನು ಮಾಡಿಸಿದರು. ರತ್ನಮಾಲೆ ತಮ್ಮ ಮನೆಯಿಂದ ಹಣ್ಣುಗಳನ್ನು ತಂದಳು. ನಿರ್ಮಲೆ ಕಾಫಿ ಕಾಯಿಸಿಕೊಂಡು ಬಂದಳು. ಸಂಜೆ ಗುಂಪು ನಡೆದು ಹೊರಟಿತು. ಮುಂದೆ ಅನಂತಯ್ಯನವರು ಅವರ ಶಿಷ್ಯಂದಿರಾದ ಅಭಯ ಕುಮಾರ, ಬಸವರಾಜ, ಶ್ರೀನಿವಾಸರು ಬರುತ್ತಿದ್ದರು. ಹಿಂದೆ ರುಕ್ಮಿಣಮ್ಮ

ನವರ ಸಂಗಡ ರತ್ನಮಾಲೆ, ನಿರ್ಮಲೆಯರಿದ್ದರು. ಇವರಿಬ್ಬರ ಮಧ್ಯೆ ಬಾಬು ಜಲಜರಿಬ್ಬರೂ ಕೈಹಿಡಿದುಕೊಂಡು ಬರುತ್ತಿದ್ದರು. ಸುಕನ್ಯೆ ಅಭಯ ಕುಮಾರನ ಹೆಗಲ ಮೇಲೆ ಕೋತಿಯಂತೆ ಕುಳಿತಿದ್ದಳು.

ಸಂಜೆ ಸೂರ್ಯ ಅಸ್ತಮಿಸುತ್ತಿದ್ದ. ಬಾನೆಲ್ಲಾ ಹೊಂಬಣ್ಣದ ರೂಪ ತಾಳಿತ್ತು. ಅದರ ಪ್ರತಿಛಾಯೆ ದರಿಯಾದೌಲತ್ತಿನ ಮೇಲೆ ನಿದ್ರಿಸುತ್ತಿತ್ತು. ಚಿನ್ನದ ಮೂಸೆಯಲ್ಲಿ ಅದ್ದಿ ತೆಗೆದಂತಿತ್ತು ದರಿಯಾದೌಲತ್ತು. ಮೊದಲೇ ಬಣ್ಣದ ಅರಮನೆ. ಇದರ ಮೇಲೆ ರವಿಯ ರಂಗು ಮೇಲೆ ನಲಿಯುತ್ತಿದೆ. ಅನಂತಯ್ಯನವರ ಗುಂಪು ಅಲ್ಲಿಗೇ ಬಂತು. ತಿಂಡಿಯ ಬುಟ್ಟಿ, ಕಾಫಿಯ ಪಾತ್ರೆಗಳನ್ನೆಲ್ಲ ಮರದ ಕೆಳಗಿಟ್ಟು ಸ್ವಲ್ಪ ತಿರುಗಾಡಿ ಬರಲು ಹೊರಟರು.

ಸುಂದರವಾದ ಉದ್ಯಾನವನ. ತರತರದ ಹೂವಿನ ಗಿಡಗಳು ಅಲ್ಲಲ್ಲಿ ಇವೆ. ಕಾಡು ಬಾಳೆಯಗಿಡಗಳು ನವಿಲಿನ ಜಾಗರಂತೆ ವಿಸ್ತಾರವಾಗಿ ಹರಡಿವೆ. ಒಮ್ಮೆ ಗಾಳಿ ಬೀಸಿದರೆ ರಪರಪ ಶಬ್ಧ ಮಾಡುತ್ತವೆ ಗಿಡಗಳು. ರಸ್ತೆಯ ಎರಡು ಕಡೆಗಳಲ್ಲೂ ಎತ್ತರವಾದ ಗಗನ ಚುಂಬಿಸುವ ಮರಗಳಿವೆ. ರಸ್ತೆ ಅಗಲವಾಗಿ ನೀರಿನಿಂದ ಚಿಮುಕಿಸಲ್ಪಟ್ಟಿವೆ. ಮಾಲಿಗಳು ಗಿಡಗಳಿಗೆಲ್ಲಾ ನೀರೆರೆಯುತ್ತಿದ್ದಾರೆ.

ಮಾಸ್ತರ ತಂಡ ಟೀಪುವಿನ ಬೇಸಿಗೆಯ ವಿಹಾರಗೃಹದ ಸುತ್ತ ನಡೆದು ಬಂತು. ಬಣ್ಣ ಬಣ್ಣದ ಗೋಡೆಗಳ ಮೇಲೆ ಮೈಸೂರು ಯುದ್ಧ, ರಾಜರ ದರ್ಬಾರುಗಳು, ಮಾಂಡಲಿಕರು ಕಪ್ಪ ಕಾಣಿಕೆಗಳನ್ನೊಪ್ಪಿಸುವುದನ್ನು ಬರೆದಿದ್ದಾರೆ. ಅನಂತರ ಒಳಗೆ ಬಂದು ಕೊಠಡಿಗಳನ್ನೆಲ್ಲಾ ನೋಡಿಕೊಂಡು ಮೇಲೆಲ್ಲಾ ಸುತ್ತಾಡಿ ಬಂದರು. ಎಲ್ಲರೂ ಮಾವಿನ ಮರದ ಕೆಳಗೆ ಬಂದು ಕುಳಿತ. ರುಕ್ಮಿಣಮ್ಮನವರು ಎಲ್ಲರ ಬಾಳೆಯ ಎಲೆಯ ಮೇಲೆಯೂ ಚಿತ್ರಾನ್ನ ಮೊಸರನ್ನಗಳನ್ನಿಟ್ಟರು. ಆದರೆ ಅಭಯ ರತ್ನರ ಪತ್ತೆಯೇ ಇರಲಿಲ್ಲ. "ಎಲ್ಲೋದನೋ ಅಭಯ, ಬಸವರಾಜ" ಎಂದರು ಮಾಸ್ತರು. "ಅಲ್ಲೇ ನೋಡ್ತಾ ನಿಂತಿದ್ದಾರೆ ಸರ್" ಎಂದ ಬಸವರಾಜ.

ಅಭಯಕುಮಾರ ರತ್ನಮಾಲೆಯೊಡನೆ ಪಕ್ಕದ ಹೊಳೆಯ ದಡದಲ್ಲಿ ಬಂದು ನಿಂತ. ಅಲ್ಲಿ ಹಾಸಿದ್ದ ಕಲ್ಲುಗಳ ಮೇಲೆ ಮಾತನಾಡುತ್ತಾ ಕುಳಿತರು. ನದಿಯ ನೀರು ಶಾಂತವಾಗಿ ಹರಿಯುತ್ತಿತ್ತು. ಬಾನೆಲ್ಲಾ ನಿರ್ಮಲವಾಗಿತ್ತು.

ಸಂಜೆಯಾ ಸವಿಗಾಳಿ ತಣ್ಣಗೆ ಬೀಸುತ್ತಿತ್ತು. ಇನ್ನು ಸ್ವಲ್ಪ ವೇಳೆಯಾದರೆ ಬಾನ ಮಧ್ಯದಿಂದ ಚಂದ್ರ ಹೊರಬರುವುದರಲ್ಲಿದ್ದ. ಅದರ ಚಿಹ್ನೆಗಳಾಗಲೇ ಆಕಾಶದಲ್ಲಿ ಕಾಣುತ್ತಿತ್ತು. ಅಲ್ಲಲ್ಲೇ ನಕ್ಷತ್ರಗಳು ಮಿನುಗುತ್ತಿದ್ದವು.

"ಏನು ನಿನ್ನ ಮದುವೆಯಂತಲ್ಲ! ಎಂದು?"

"ಯಾರೇಳಿದವರು ರತ್ನ ನಿನಗೆ?"

"ನಮ್ಮಜ್ಜಿ".

"ಅವರಿಗೆ ಯಾರೇಳಿದರಂತೆ"

"ನಿಮ್ಮಜ್ಜಿ ಚೆಂದವ್ವನವರು ಕಮಲಮ್ಮನವರಿಗೆ ಹೇಳಿದರಂತೆ, ಅವರು ಮೊನ್ನೆ ಗುಡಿಯಲ್ಲಿ ನಮ್ಮಜ್ಜಿಗೆ ಹೇಳಿದರಂತೆ"

"ಹೆಣ್ಯಾವುದಂತೆ"

"ನಿಮ್ಮ ಪಕ್ಕದ ಮನೆ ವಿಮಲೆಯಂತಲ್ಲ"

ವಿಮಲೆಯ ಹೆಸರು ಕೇಳಿದ ತಕ್ಷಣ ಗಟ್ಟಿಯಾಗಿ ಅಭಯಕುಮಾರ ನಕ್ಕುಬಿಟ್ಟನು.

"ಒಳ್ಳೆ ಸೀತೆಯನ್ನೇ ಹುಡುಕಿದಾರೆ ರತ್ನ" ಎಂದ.

"ನಮಗೇನು ಆಹ್ವಾನ ಪತ್ರಿಕೆ ಕಳಿಸ್ತೀಯೋ ಇಲ್ಲೋಪ್ಪ" ಎಂದಳು ರತ್ನಮಾಲೆ.

"ಕಳಿಸ್ದಲೆ ಉಂಟೆ ರತ್ನ, ಯಾರ ಅಳಿಯನಾಗುತ್ತೇನೆ ಹೇಳು? ಲಕ್ಷಪತಿ ಸೀನಕ್ಕನ ಏಕ ಮಾತ್ರ ಅಳಿಯ,, ಮಿರಾಂಡನಿಗೆ ಒಂದು ಕೈಮೀರಿದ ವಿಮಲೆಯ ಪತಿಯಾದ ಮೇಲೆ ಚಿನ್ನದ ಹಾಳೆಯ ಮೇಲೆ ವಿಮಲೆ ಅಭಯ ಕುಮಾರರಿಬ್ಬರ ಫೋಟೋಗಳನ್ನು ವಜ್ರಗಳಿಂದ ಕೆತ್ತಿಸಿ, ನಾವಿಬ್ಬರೇ ಬೆಳ್ಳಿಯ ರಥದಲ್ಲಿ ನಿಮ್ಮ ಮನೆಗೆ ಬಂದು ಆಹ್ವಾನ ನೀಡುತ್ತೇವೆ ಹೆದರ ಬೇಡ ರತ್ನ."

ಅಭಯಕುಮಾರನ ಮಾತು ಕೇಳಿ ತಡೆಯಲಾರದೆ ನಕ್ಕುಬಿಟ್ಟಳು ರತ್ನಮಾಲೆ.

"ಹೋಗಲಿ ನಿನ್ನ ಮದುವೆಯೆಂದು ಹೇಳು ರತ್ನ."

"ಮುಂದಿನ ಜನ್ಮಕ್ಕೆ."

"ಹಾಗಾದರೆ ಈ ಜನ್ಮದಲ್ಲಿ ಸನ್ಯಾಸಿಯಾಗ್ತಿಯೇನು."

"ಆಗೋಣಾಂತಿದ್ದೇನೆ."

"ಆದರೆ ಚಂಡಿದಾಸನ ಶಿಷ್ಯೆಯಾಗು."

ಈ ನಲ್ಲ ನಲ್ಲೆಯರ ಮಾತುಗಳನ್ನು ಕೇಳುತ್ತಿದ್ದ ಕಾವೇರಿಗೆ ನಗು ಬಂದು ನೀರಿನ ತುಂತುರುಗಳನ್ನು ಸಿಡಿದಳು. ಅದು ಬಂದು ರತ್ನಮಾಲೆಯ ಮುಖದ ಮೇಲೆ ಬಿದ್ದಿತು. ಅಭಯ ತನ್ನ ಕೈಚೌಕದಿಂದ ಅದನ್ನು ಒರೆಸಲು ಹೋದ. "ಬೇಡ ಬೇಡ ಬಿಡು" ಎಂದು ಆಕೆ ಹೇಳುತ್ತಿದ್ದರೂ ಬಿಡದೆ ಒರೆಸುವ ನೆವದಲ್ಲಿ ಅವಳ ಮುಖ, ಮೂಗು, ಕಣ್ಣುಗಳ ಸ್ಪರ್ಶನ ಸುಖ ಅನುಭವಿಸಿದ. ಒರೆಸುತ್ತಿದ್ದಂತೆ ಮೆಲ್ಲನೆ ರತ್ನಮಾಲೆಯ ಕತ್ತನ್ನು ಬಳಸಿ ಹಿಡಿದನು.

ಇಷ್ಟೊತ್ತಾದರೂ ರತ್ನಮಾಲೆ ಬರಲಿಲ್ಲ. ಅನಂತಯ್ಯನವರು ಹುಡುಕಿಕೊಂಡು ಬಂದರು, ಅವರ ಕಣ್ಣಿಗೆ ಹೊಳೆಯ ದಡದಲ್ಲಿ ಕುಳಿತಿದ್ದ ಅಭಯ ರತ್ನಮಾಲೆಯರಿಬ್ಬರೂ ಬಿದ್ದರು. ಮಾಸ್ತರು ಮರದ ಹಿಂದೆ ಅವಿತು ನಿಂತರು. ಇಬ್ಬರೂ ಹಿಂತಿರುಗುತ್ತಿದ್ದಾಗ ಅನಂತಯ್ಯನವರು ಅನಿರೀಕ್ಷಿತವಾಗಿ ಅವರೆದುರಾದರು. ರತ್ನಮಾಲೆಗೆ ವಿಪರೀತ ನಾಚಿಕೆಯಾಯಿತು. ಅಲ್ಲಿ ನಿಲ್ಲದೆ ಮರದ ಕೆಳಕ್ಕೆ ಓಡಿದಳು

ಹಟ್ಟಿಯಲ್ಲಿ ಚೆಂದವ್ವನವರು ಮಗನ ಕೂಡ ಮಾತನಾಡುತ್ತಿದ್ದರು. ಗುಣಾವತಮ್ಮನವರು ಅಡಿಗೆಯ ಮನೆಯಲ್ಲಿ ಕುಳಿತು ಕೇಳುತ್ತಿದ್ದರು.

"ಏನೋ ನಾಭಿ ಅಭಯನಿಗೆ ಮದ್ವೆ ಮಾಡ್ಬಿಡೋಣ ಕಣೋ"

"ಓದು ಮುಗಿಯಲವ್ವ."

"ಓದಿನ ಪಾಡಿಗೆ ಓದು, ಮದುವೆಯ ಪಾಡಿಗೆ ಮದುವೆ."

"ಇನ್ನೇನು ಒಂದು ವರ್ಷ ಮುಗಿಯುತ್ತೆ ಕಣವ್ವ."

"ನಾನಿರಬೇಕಲ್ಲೋ, ನನ್ನ ಕಣ್ಣಲ್ಲಿ ಮೊಮ್ಮಗ ಮೊಮ್ಮಗಳು ಹಸೆಯ ಮೇಲೆ ಕುಳ್ತಿರದ್ನೋಡ ಬೇಡವೇನೋ, ಅವರು ಬೇರೆ ಹೆಣ್ಣಿಟ್ಕಂಡಿರಬೇಕಲ್ಲೋ, ಹೆಣ್ಣೆತ್ತವರು ಎಷ್ಟುದಿನ ಇಟ್ಕಕಳ್ತಾರೊ."

"ಕೊಡ್ತಾರಂತ, ಸೀನಕ್ಕನನ್ನು ವಿಚಾರಿಸಿದ್ದೀಯನವ್ವ."

"ಆಗಲೇ ಜಾತಕಾನೂ ತೋರಿಸಿದೆಯೋ, ಸರಿಯೂ ಬಿದ್ದಿದೇಕಣೊ."

“ ಅವನು ಸಾಹುಕಾರರ ಮನೆ ಹೆಣ್ಣು ಬ್ಯಾಡಾಂತನೇಂಪ್ರೆ ” ಎಂದು ಗುಣಾವತಮ್ಮನವರು ಮಧ್ಯೆ ಮಾತನಾಡಿದರು.

“ ಓ ! ಓ ! ಇವರಪ್ಪ ಬಹಳ ಆಸ್ತಿ ಮಡ್ಗಿರಕ್ಕೇನೊ ” ನಾಭಿ ರಾಜಯ್ಯನವರಂದರು.

“ ಎಲ್ಲಾ ಇವಳೇ ಹಚ್ಕಾಕಿಕೊಟ್ಟಿರೋದು ಕಣೋ ನಾಭಿ ” ಎಂದರು ಚೆಂದವ್ವನವರು.

“ ಆಗಲವ್ವ ಮಾತು ಕೊಟ್ಬಿಡು, ನಾಳೇನೇ ಅರಿಶಿನ ಕುಂಕುಮ ಇಟ್ಬಿಡೋಣ ” ಎಂದರು ನಾಭಿರಾಜಯ್ಯನವರು.

ಅಭಯ ಕುಮಾರ ಪಿಕ್‌ನಿಕ್ ಪಾರ್ಟಿ ಮುಗಿಸಿಕೊಂಡು ಮನೆಗೆ ಬಂದ. ಗುಣಾವತಮ್ಮನವರು ತಿಂಡಿಗೆ ಕೊಟ್ಟರು. ತಿಂಡಿ ತಿನ್ನುತ್ತಿದ್ದಾಗ ಅವನ ಲಗ್ನದ ಪ್ರಸ್ತಾಪ ನಡೆದದ್ದನ್ನು ಹೇಳಿದರು. “ ನಾನು ಅವರ ಮನೆ ಯಲ್ಲಿ ಮದ್ವೆ ಆಗೋಲ್ಲವ್ವ, ಅಲ್ಲೇ ಆಗಬೇಕೆಂದು ಹಿಂಸೆಮಾಡಿದರೆ ದೇಶಾಂತರ ಹೋಗ್ಬಿಡ್ತೇನೆ ನೋಡಪ್ಪ ” ಎಂದನು.

ರಾತ್ರಿ ಮಲಗುವ ಕೊಠಡಿಯಲ್ಲಿ ಗುಣಾವತಮ್ಮನವರು ಮಗ ಹೇಳಿ ದ್ದನ್ನು ಯಜಮಾನರಿಗೆ ಹೇಳಿದರು. “ ನಾವಿನ್ನೂ ಇದೇವೆ ಸತ್ತಿಲ್ಲಾಂತ ಹೇಳು ಅವನಿಗೆ ” ಎಂದರು ನಾಭಿರಾಜಯ್ಯನವರು.

## ೧೦

ಚೆಂದವ್ವನವರು ಅಷ್ಟೊತ್ತಿಗೇ ಎದ್ದು ಸೀನಕ್ಕನ ಮನೆಗೆ ಬಂದರು. ಕಾಯಿ ತುರಿದುಕೊಟ್ಟರು. ತರಕಾರಿ ಹೆಚ್ಚಿಕೊಟ್ಟರು. ಸೀನಕ್ಕ ಅಡಿಗೆಯ ಮನೆಯಲ್ಲಿ ಹೆಚ್ಚುಗಟ್ಟಲೆ ಅಡಿಗೆ ಮಾಡುತ್ತಿದ್ದಾಳೆ. ಬೆಳಗ್ಗೆ ಸ್ನಾನಮುಗಿಸಿ ಕೊಂಡು ರೂಮಿನಲ್ಲಿ ಕನ್ನಡಿಯ ಮುಂದೆ ವಿಮಲೆ ಕುಳಿತಳು. ಒಂದು ಡಬ್ಬ ಪೌಡರ್ ಬಳಿದಳು. ಕೈಯಿನ ಉಗುರುಗಳಿಗೆಲ್ಲಾ ಬಣ್ಣ ಬಳಿದಳು.

ಬೆಳಗಿನಿಂದ ನಾಲ್ಕು ಬಾರಿ ಆಚಾರಿಯ ಮನೆಗೆ ಸುತ್ತಿದರೂ ಅವನು ವಾಯಿದೆ ಹೇಳುವುದು ತಪ್ಪಲಿಲ್ಲ. ಕೊನೆಗೆ ಗುಣಾವತಮ್ಮನವರ ಕತ್ತಿನ ಲ್ಲಿದ್ದ ಪದಕವನ್ನೇ ತೆಗೆದುಕೊಂಡು ವಿಮಲೆಗೆ ತೊಡಿಸಿದರು. ಹಸೆಯಮೇಲೆ ಕುಳಿತಳು ಸೀನಕ್ಕನ ಮಗಳು ವಿಮಲೆ. ಆಗಲಾದರೂ ನಾಭಿರಾಜಯ್ಯನವರ

ಮನಸ್ಸು ಬದಲಾಯಿಸಲಿಲ್ಲ. ಗಂಡು ಮೈಸೂರಿನಲ್ಲಿದ್ದಂತೆಯೇ ಲಗ್ನ ನಿಶ್ಚಯವಾಯಿತು.

ಕಾಲೇಜು ಮುಗಿಸಿಕೊಂಡು ಅಭಯಕುಮಾರ ಮನೆಗೆ ಬಂದ. ಊಟದ ವೇಳೆಯಲ್ಲಿ ಲಗ್ನ ನಿಶ್ಚಯವಾದ ವಿಚಾರವನ್ನು ಗುಣಾವತಮ್ಮ ನವರು ಹೇಳಿದರು.

"ಏನಪ್ಪ ನೀನಿದ್ದೂ ಹೀಗೆ ಮಾಡ್ಬಿಟ್ಟೆಲ್ಲ; ಹಾಗಾದರೆ ನನ್ನ ವಿಚಾರ ಮರೆತ್ಬಿಡಿ'' ಎಂದ.

"ಲೋ ಅಭಯ!'' ಎಂದು ಕರೆದರು ನಾಭಿರಾಜಯ್ಯನವರು. ಓದುತ್ತಿದ್ದ ಅಭಯಕುಮಾರ ಎದ್ದು ಬಂದ. ಬಂದವನು ಗೋಡೆಗೆ ಒರಗಿ ನಿಂತ. ಚೆಂದಪ್ಪನವರು ಕುಳಿತಿದ್ದರು.

"ಲಗ್ನ ಇನ್ನೊಂತಿಗ್ಗಿದೆ, ತಗೋ ದುಡ್ಡನ್ನು ಆದ್ಯಾವ ಕೋಟು ಷರಟು ಬೇಕೊ ಹೊಲಸಿಕೊ" ಎಂದು ನೂರು ರೂಪಾಯಿಗಳನ್ನು ನಾಭಿ ರಾಜಯ್ಯನವರು ಕೊಟ್ಟರು. ಮಾತನಾಡದೆ ಅಭಯ ಸುಮ್ಮನೆ ನಿಂತಿದ್ದ.

"ತಗೋಳೋ ಕಂಡಪ್ರೆ, ನಿನ್ನನ್ನೇನು ಹಾಳ್ಮಾಡ್ಬೇಕೂಂತ ಮಾಡ್ತಿಲ್ಲ, ನಮಗೂ ಗೊತ್ತಿದೆ ಕಣೊ" ಎಂದರು ಚೆಂದಪ್ಪನವರು. ಅಭಯಕುಮಾರ ಏನೂ ಮಾತನಾಡದೆ ದುಡ್ಡನ್ನು ತೆಗೆದುಕೊಂಡು ರೂಮಿಗೆ ಹೊರಟು ಹೋದನು.

ಬೆಳಗ್ಗೆ ಹತ್ತು ಗಂಟೆಗೆ ಮೈಸೂರಿನ ರೈಲು ಹತ್ತುವವನು ಬೆಂಗಳೂರು ರೈಲು ಹತ್ತಿದ. ಬೆಂಗಳೂರಿನಲ್ಲಿ ನೆಂಟರ ಮನೆಯಿದ್ದರೂ ಹೋಗಲಿಲ್ಲ. ಲಾಲ್‌ಬಾಗಿಗೆ ಬಂದನು. ಮರದ ಕೆಳಗೆ ಸುಮ್ಮನೆ ಕುಳಿತ. ದಂಪತಿಗಳು ಕೈಮೇಲೆ ಕೈಹಾಕಿಕೊಂಡು ಹೋಗುತ್ತಿದ್ದರು. ಅಲ್ಲಲ್ಲೇ ಪೊದೆಯಲ್ಲಿ ತರುಣ ದಂಪತಿಗಳು ಆಟವಾಡುತ್ತಿದ್ದರು. ಕಾರುಗಳು ಬಂದು ಹೋಗು ತ್ತಿದ್ದವು. ಚಿಕ್ಕ ಚಿಕ್ಕ ಹುಡುಗರು ಹುಲ್ಲ ಮೇಲೆ ಬಿದ್ದು ಒದ್ದಾಡುತ್ತಿದ್ದರು. ಸಾಹುಕಾರರ, ಅಫೀಸರುಗಳ, ಮನೆಯ ಹೆಣ್ಣಾಳುಗಳು ಮಕ್ಕಳನ್ನು ಗಾಡಿ ಯಲ್ಲಿ ಕೂರಿಸಿಕೊಂಡು ಲಾಲ್‌ಬಾಗ್ ಸುತ್ತ ಸುತ್ತಾಡಿಸುತ್ತಿದ್ದರು. ಶಾಂತ ವಾತಾವರಣ. ತಣ್ಣಗೆ ಗಾಳಿ ಬೀಸುತ್ತಿತ್ತು. ಅಲ್ಲಿ ಅಭಯಕುಮಾರ ಮಲಗಿದ. ರಾತ್ರಿ ಮೂರು ಗಂಟೆಗೆ ಮಾಲಿ ಬಂದು ಎಬ್ಬಿಸಿ ಲಾಲ್‌ಬಾಗ್

ಬಿಟ್ಹೋಗುವಂತೆ ಹೇಳಿದ. ಆಗ ತನ್ನ ಬ್ಯಾಗನ್ನು ತೆಗೆದುಕೊಂಡು ನಿಲ್ದಾಣಕ್ಕೆ ಬಂದನು.

ನಿಲ್ದಾಣದಲ್ಲಿ ಮದ್ರಾಸಿಗೆ ಒಂದು ಟಿಕೆಟ್ ಕೊಂಡುಕೊಂಡು ಮದ್ರಾಸು ಮೇಯಿಲ್ ಗಾಡಿ ಹತ್ತಿದನು. ಮೈಸೂರು ಬೆಂಗಳೂರು ಬಿಟ್ಟರಲಿಲ್ಲ. ರೈಲು ಜೋಲಾರಪೇಟೆಗೆ ಬಂತು. ಕನ್ನಡನಾಡು ಬಿಟ್ಟು ತಮಿಳುನಾಡಿಗೆ ಬಂದನು. ತಮಿಳಿನ ಗಂಧ ಅವನಿಗೆ ಗೊತ್ತಿರಲಿಲ್ಲ. ನಿಲ್ದಾಣದಲ್ಲಿ ಇಳಿದು ಒಂದೆರಡು ವಡೆ ತಿಂದು ಕಾಫಿ ಕುಡಿದ. ವಾಪಸ್ಸು ಹಿಂತಿರುಗೋಣವೆಂದು ಯೋಚಿಸಿದ. 'ಬರುವಾಗ ರತ್ನಮಾಲೆಗೆ ಹೇಳಲಿಲ್ಲ, ಮಾಸ್ತರರನ್ನು ನೋಡಿ ಬರಲಿಲ್ಲ' ಎಂದು ಯೋಚಿಸುತ್ತಾ ಕಂಬ ಒರಗಿ ನಿಂತನು. ರೈಲು ಮುಂದೆ ಹೊರಡುತ್ತೇನೆಂದು ಜೋರಾಗಿ ಕೂಗಿತು. ಬೆಚ್ಚಿದ ಅಭಯ ಗಾಡಿಗೆ ಬಂದು ಕುಳಿತ. ಮದ್ರಾಸಿಗೆ ಬಂದರೆ ಎಲ್ಲೋ ಕರೆತಂದಂತಾಯಿತವನಿಗೆ. ನಿಲ್ದಾಣದಲ್ಲಿ ಅದ್ಯಾರ ಜೇಬಿನಲ್ಲೋ ಮುನ್ನೂರು ರೂಪಾಯಿಗಳನ್ನು ಕಳ್ಳರು ಕದ್ದರು. ಅವನು ಒಂದೇ ಸಮನೆ ಕೂಗಿಕೊಳ್ಳುತ್ತಿದ್ದ. ಇನ್ನೊಂದು ಮಗುವಿನ ಜಡೆಬಿಲ್ಲೆ ಕದಿಯಲೋಗಿ ಮಗುವಿನ ಜಡೆಯನ್ನೇ ಕತ್ತರಿಸಿದರು. ಇದನ್ನು ನೋಡಿದಾಗ- ಅಭಯಕುಮಾರ ದುಡ್ಡನ್ನು ತನ್ನ ನಿಕ್ಕರ್ ಜೇಬಿಗಾಕಿ ಮೇಲೆ ಪೈಜಾಮ ಹಾಕಿದನು. ನಿಲ್ದಾಣದಲ್ಲೇ ಇಷ್ಟಾದರೆ ಊರಿನ ಒಳಗಡೆ ಇನ್ನೆಷ್ಟಿರಬಹುದೆಂದು ತಿಳಿದು ಅಲ್ಲಿಂದ 'ಗ್ರಾಂಡ್ ಟ್ರಂಕ್ ಎಕ್ಸ್ಪ್ರೆಸ್' ರೈಲು ಹತ್ತಿದ. ರೈಲು ಬೀಡೂರಿಗೆ ಬಂತು. ಅಲ್ಲಿ ಇಳಿದು ಎಂಟಾಣೆ ಕೊಟ್ಟು ಊಟಮಾಡಿದ. ಮೂರು ದಿನಗಳಿಂದ ಅನ್ನ ತಿಂದಿರಲಿಲ್ಲ. ಅನ್ನ ಎಂದು ಕಂಡೇನೋ ಎಂದಿತ್ತು ಅಭಯನ ಹೊಟ್ಟೆ. ಹೊಟೇಲಿನವನ ರೇಶನ್ ಊಟ ಅವನ ಹಸಿವನ್ನು ತೃಪ್ತಿ ಪಡಿಸಲಿಲ್ಲ. ಮತ್ತೊಂದು ಊಟ ಕೊಂಡು ತಿಂದ.

ಅವನು ಕುಳಿತ ಗಾಡಿಯಲ್ಲಿ ಬರೀ ಸಿಪಾಯಿಗಳು. ಎಲ್ಲರೂ ಕಾಂಗ್ರೆಸ್ಸನ್ನು ಬಯ್ಯುವವರೆ, ಗಾಂಧಿಯನ್ನು ತೆಗಳುವವರೆ ಆಗಿದ್ದರು. ಪ್ರತಿ ನಿಲ್ದಾಣದಲ್ಲೂ ಸಿಗರೇಟು, ಬಾಳೇಹಣ್ಣು, ಚಹ ಕೊಳ್ಳುತ್ತಿದ್ದರು. ಅರ್ಧ ತಿಂದು ಇನ್ನರ್ಧ ಬಿಸಾಡುತ್ತಿದ್ದರು. ಮಿಲಿಟರಿ ಸಂಗೀತಗಳನ್ನಾಡುತ್ತಿದ್ದರು. ಬಂಡಿಯ ತುಂಬ ಸಿಗರೇಟಿನ ಹೊಗೆ ತುಂಬಿತ್ತು. ಎಲ್ಲರೂ ಭೂತಾ

ಕಾರಿಗಳಾಗಿದ್ದರು. ಅವರನ್ನು ನೋಡಿ ಅಭಯ ಹೆದರಿದ. ಈ ರೀತಿ ರೈಲು ಕೃಷ್ಣಾನದಿಯ ಮೇಲೆ ಜಿಂಕೆಯಂತೆ ಓಡುತ್ತಿದೆ. ಅದರಂತೆಯೇ ಅಭಯನ ಮನಸ್ಸಿನಲ್ಲಿ ಯೋಚನೆಗಳು ನಿರ್ದಿಷ್ಟವಿಲ್ಲದ ಗುರಿಗೆ ಹೋಗುತ್ತಿರುವಂತೆ ಹಾರಾಡುತ್ತಿವೆ. ರೈಲು ಬೆಜವಾಡಕ್ಕೆ ಬಂತು. ನಿಲ್ದಾಣದ ಬುಕ್‌ಸ್ಟಾಲಿನಲ್ಲಿ ಪ್ರೊ|| ಅಜ್ಞಾನ್ಶಿಯವರ "Immortal India" ಕೊಂಡು ಓದುತ್ತ ಕುಳಿತ. ರೈಲು ವಾರ್ಧಾಕ್ಕೆ ಬಂತು. ಮುಂಜಾನೆಯಾಗಿತ್ತು. ಚಳಿಯಾಗುತ್ತಿತ್ತು. ಚಹ ಕುಡಿಯಲು ಕೆಳಗಿಳಿದ. ಅದು ಗಾಂಧಿಯ ಊರೆಂದು ಅಭಯನಿಗೆ ಗೊತ್ತಿತ್ತು. ಮನಸ್ಸು ಸಮಾಧಾನದಿಂದಿದ್ದರೆ ಗಾಂಧಿಯನ್ನು ನೋಡಲು ಹೋಗುತ್ತಿದ್ದ. ಆದರೆ ಅವನಿಗೀಗ ಏನೂ ಬೇಕಿರಲಿಲ್ಲ. ಚಹ ಕುಡಿಯುತ್ತಿದ್ದಂತೆ ರೈಲು ಮುಂದೆ ನಾಗಪುರಕ್ಕೆ ಹೊರಟೇ ಬಿಟ್ಟಿತು. ಅವನ ಬ್ಯಾಗೂ ಅದರ ಜೊತೆ ಹೊರಟೇಹೋಯಿತು.

ವಾರ್ಧಾ ರೈಲ್ವೆ ಜಂಕ್ಷನ್ ಸೆಂಟರು. ಅಲ್ಲಿ ಮತ್ತೊಂದು ರೈಲು ನಿಂತಿತ್ತು. ಅದು ಕಲ್ಕತ್ತಾದಿಂದ ಮುಂಬಯಿಗೋಗುವ ರೈಲಾಗಿತ್ತು. ಅದರಲ್ಲಿ ಅಭಯಕುಮಾರ ಬಂದು ಕುಳಿತನು. ಗಾಡಿ ನೂರು ಮೈಲಿ ಬಂದಿದೆ. ಟಿಕೆಟ್ ಕಲೆಕ್ಟರ್ ಬಂದು ಟಿಕೆಟ್ ಚೆಕ್‌ಮಾಡಿ ಅಭಯನ ಹತ್ತಿರ ಟಿಕೆಟ್ಟಿರಲಿಲ್ಲವಾದ್ದರಿಂದ ಮೂರ್ತಿಜಾಪುರಮ್ ರೈಲ್ವೆ ನಿಲ್ದಾಣದಲ್ಲಿಳಿಸಿಬಿಟ್ಟನು. ನಿಲ್ದಾಣದಲ್ಲಿ ನಾಲ್ಕಾರು ಬಾರಿ ಮೇಲಕ್ಕೂ ಕೆಳಕ್ಕೂ ಪರದಾಡಿದ. ಕೊನೆಗೆ ಯಾರೋ ಸೆಂಟರನ್ನು ನೋಡಲು ಬಂದಿದ್ದ ನಾಗದರವರನ್ನು "ಇದು ಯಾವ ಊರು" ಎಂದು ಅಭಯ ಕೇಳಿದ. "ಇದು ಮೂರ್ತಿಜಾಪುರಮ್" ಎಂದರು ನಾಗದರವರು.

"ಇಲ್ಲಿ ರಾತ್ರಿ ತಂಗಲು ಛತ್ರಯಾವುದಿದೆ"

"ನಿಮ್ಮೂರ್ರಾವುದು, ಎಲ್ಲಿಗೆ ಬಂದಿದ್ದಿರಿ, ನಿಮ್ಮ ಹೆಸರೇನು" ಎಂದರು ನಾಗದರವರು.

"ನಾನು ಮೈಸೂರಿನವನು; ನನ್ನ ಹೆಸರು ಅಭಯಕುಮಾರ" ಎಂದನು ಅಭಯ.

"ಕಣ್ಣರಿಯದಿದ್ದರೆ ಕರುಳರಿಯದೇ" ಎನ್ನುವಂತೆ ಹೆಸರು ಕೇಳಿದ ತಕ್ಷಣ, "ಬನ್ನಿ ನಮ್ಮ ಮನೆಯಲ್ಲೇ ತಂಗುವಿರಂತೆ" ಎಂದು ಅಭಯನನ್ನು ನಾಗದರು ಕರೆದುಕೊಂಡು ಹೋದರು.

ನಾಗದರವರು ಮೂರ್ತಿಜಾಪುರದಲ್ಲಿನ ದೊಡ್ಡ ಹತ್ತಿ ವ್ಯಾಪಾರಿಗಳು. ಪಕ್ಕದಲ್ಲೇ ಇದ್ದ ಕಾರಂಜದ ಆಶ್ರಮಕ್ಕೆ ಸಾವಿರಾರು ರೂಪಾಯಿಗಳನ್ನು ದಾನಮಾಡಿದ್ದರು. ತಾವೊಬ್ಬರೇ ಐವತ್ತು ಸಹಸ್ರ ರೂಪಾಯಿಕೊಟ್ಟು ಆಶ್ರಮದಲ್ಲಿ ಶಿಲಾಮಾನ ಸ್ತಂಭವನ್ನು ಕಟ್ಟಿಸಿದ್ದರು.

ರಾತ್ರಿ ಅಭಯನಿಗೆ ತಮ್ಮ ಮನೆಯಲ್ಲೇ ತಿಂಡಿ, ಹಣ್ಣು, ಹಾಲು ಗಳನ್ನು ಕೊಡಿಸಿದರು. ನಾಗದರವರಾಕೆ ಬಿಸಿಬಿಸಿ ಪರೋಟ ಬೇಯಿಸಿ, ಹಣ್ಣಿನ ರಸಾಯನ ಮಾಡಿಸಿ ಉಣ್ಣಿಸಿದಳು ಅತಿಥಿಗೆ.

ಬೆಳಗ್ಗೆ ನಾಗದರವರ ಮನೆಯವರೆಲ್ಲಾ ಕಾರಂಜಕ್ಕೆ ಹೊರಟರು. ಅಲ್ಲಿ ಮಾನಸ್ತಂಭಕ್ಕೆ ಪಂಚಾಮೃತಾಭಿಷೇಕವಾಗುವುದಿತ್ತು. ಪ್ರತಿವರ್ಷ ನಾಗದರವರು ಪೂಜೆಮಾಡಿಸುತ್ತಿದ್ದರು. ಕಾರಂಜ ಪವಿತ್ರ ಕ್ಷೇತ್ರ. ಸಾವಿರಾರು ಭಕ್ತಾದಿಗಳು ಬಂದುಹೋಗುವ ಸ್ಥಳವದು. ಮೂರ್ತಿಜಾಪುರಂ ನಿಂದ ಬೆಳಗ್ಗೆ ನ್ಯಾರೋಗೇಜ್ ಗಾಡಿಯಲ್ಲಿ ಮೂವತ್ತು ಮೈಲಿ ಬಂದರೆ ಕಾರಂಜ ಸಿಗುತ್ತದೆ. ಅದು ಬಿರಾರಿನ ಸೆರಗಿನಲ್ಲಿದೆ. ಅದೇ ಕೊನೆಯ ನಿಲ್ದಾಣ. ಅಚ್ಚ ಮರಾಠಿ ಸ್ಥಳವದು. ನಿಲ್ದಾಣದಲ್ಲಿ ಇಳಿದವರು ಸ್ವಲ್ಪ ದೂರದಲ್ಲಿದ್ದ ಮಹಾವೀರ ಬ್ರಹ್ಮಚರ್ಯಾಶ್ರಮಕ್ಕೆ ಬಂದರು. ಆಶ್ರಮದ ಅಧಿಕಾರಿ ಅಕಳಂಕರು ನಾಗದರವರ ಸಂಸಾರವನ್ನು ಎದುರುಗೊಂಡರು. ಅಕಳಂಕರು ಬ್ರಹ್ಮಚಾರಿಗಳು. ಚಿಕ್ಕ ವಯಸ್ಸಿನಲ್ಲೇ ಧರ್ಮದ ಮೇಲಿನ ಅಭಿಮಾನದಿಂದ ಬ್ರಹ್ಮಚರ್ಯ ವ್ರತ ಕೈಗೊಂಡು ಸಮಾಜ ಸೇವೆಯಲ್ಲಿ ನಿರತ ರಾದರು. ಈಗ ಕಾರಂಜದ ಆಶ್ರಮದ ಆಚಾರ್ಯರಾಗಿ ಕುಳಿತಿದ್ದಾರೆ. ಅಭಯಕುಮಾರನನ್ನು ನೋಡಿದಾಗ ಮೈಸೂರಿನವನೆಂದು ಗುರ್ತಿಸಿದರು. "ನೀವ್ಯಾರಾವುದೆಂದು" ಕನ್ನಡದಲ್ಲಿಯೇ ಕೇಳಿದರು. ಆಗ ಅಭಯನ ಸ್ಥಿತಿ ಕಗ್ಗಾಡಿನಲ್ಲಿ ದಾರಿತಪ್ಪಿ ಅಲೆಯುತ್ತಿದ್ದ ವ್ಯಕ್ತಿಗೆ ಮತ್ತೊಬ್ಬ ಮನುಷ್ಯ ವ್ಯಕ್ತಿಯು ಸಿಕ್ಕಿದಂತಾಯಿತು; "ನಾನು ಮೈಸೂರಿನವನು ಇಲ್ಲೇ ನಿಮ್ಮ ಆಶ್ರಮದಲ್ಲಿ ಅಭ್ಯಾಸಮಾಡಲು ಬಂದಿದೇನೆ, ನನ್ನನ್ನು ನೀವು ಶಿಷ್ಯನನ್ನಾಗಿ ಸ್ವೀಕರಿಸಬೇಕು" ಎಂದನು.

"ಆಗಲಿ ಅದಕ್ಕೇನು" ಎಂದರು ಅಕಳಂಕರು.

ತಮ್ಮ ಪೂಜೆ ತೀರಿಸಿಕೊಂಡು ನಾಗದರವರು ಮೂರ್ತಿಜಾಪುರಂಗೆ ಹೊರಟರು. ಬರುವಾಗ ಅಭಯಕುಮಾರನನ್ನೂ ಊರಿಗೆ ಬರುವಂತೆ

ಕರೆದರು. ನೋಡಿದರು ಹುಡುಗ ಒಳ್ಳೆಯ ರೂಪವಂತನಾಗಿದ್ದ. ನಿದಾನಸ್ಥ ನಾಗಿ ನಯವಿನಯದಿಂದ ನಡೆಯುತ್ತಿದ್ದ. ಅಳಿಯನನ್ನಾಗಿ ಏಕೆ ಮಾಡಿ ಕೊಳ್ಳಬಾರದೆಂದು ಗೇಣು ಹಾಕಿದರು ನಾಗದರವರು. "ಇಲ್ಲೇ ನಾನು ಆಶ್ರಮದಲ್ಲಿರುತ್ತೇನೆ" ಎಂದು ಅಭಯ ಹೇಳಿದಮೇಲೆ ಸಂಸಾರ ಸಮೇತ ರಾಗಿ ನಾಗದರವರು ಮೂರ್ತಿಜಾಪುರಂಗೆ ಬಂದರು.

ಆಶ್ರಮದಲ್ಲಿ ಹೈಸ್ಕೂಲಿದೆ. ಅಲ್ಲಿ ಪಾಠ ಹೇಳಿಕೊಡುತ್ತಾನೆ ಅಭಯ ಕುಮಾರ. ಅವನು ಹೇಳಿಕೊಡುವುದು ಇಂಗ್ಲೀಷೊಂದನ್ನೇ. ಏಕೆಂದರೆ ಅಲ್ಲಿಯವರಿಗೆ ಕನ್ನಡ ತಿಳಿಯುತ್ತಿರಲಿಲ್ಲ, ಇವನಿಗೆ ಮರಾಠಿ ಬರುತ್ತಿರಲಿಲ್ಲ. ಹರುಕು ಮುರುಕು ಹಿಂದಿ ಮಾತನಾಡುತ್ತಾನೆ. ಅವನು ತಿನ್ನುವುದು ಜೋಳದರೊಟ್ಟಿ, ಟೊಮೆಟೊ ಹಣ್ಣು. ಆಶ್ರಮಕ್ಕೆ ಇಪ್ಪತ್ತು ಮೂವತ್ತು ಎಕರೆ ಜಮೀನಿದೆ. ಆಶ್ರಮದ ಮುಂದೆ ಒಂದು ತೋಟವಿದೆ. ಅಲ್ಲಿ ಆಶ್ರಮಕ್ಕೆ ಬೇಕಾದ ಸೊಪ್ಪು ತರಕಾರಿಗಳನ್ನು ಬೆಳೆದುಕೊಳ್ಳುತ್ತಾರೆ. ಹೈಸ್ಕೂಲಿನಲ್ಲಿ ನೂರಾರು ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಾರೆ. ಅಲ್ಲಿ ಧರ್ಮ ಭೋದನೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾರೆ. ಬೆಳಗ್ಗೆ ಎದ್ದು ತಕ್ಷಣ ಏತದ ಬಾವಿಯಲ್ಲಿ ನೀರು ಸೇದಿಕೊಂಡು ತಣ್ಣೀರು ಸ್ನಾನಮಾಡಬೇಕು. ಅನಂತರ ಪಂಚ ನಮಸ್ಕಾರ ಹೇಳಬೇಕು, ತೀರ್ಥಂಕರುಗಳ ಹೆಸರು ಜಪಿಸ ಬೇಕು. ಕೆಲವೇ ದಿನಗಳಲ್ಲಿ ಅನಂತ ಉಪಾಧ್ಯಾಯರ ಶಿಷ್ಯ ಅಭಯ ಕುಮಾರ ಆಶ್ರಮದ ವಿದ್ಯಾರ್ಥಿಗಳ ನೆಚ್ಚಿನ ಮಾಸ್ತರಾದ. ಸಂಜೆಯಹೊತ್ತು ಅಕಳಂಕರೊಡನೆ ಕ್ರಿಯಾವಾದಿಗಳು, ಅಕ್ರಿಯಾವಾದಿಗಳು, ಶೂನ್ಯವಾದಿಗಳ ವಿಚಾರ ತರ್ಕಮಾಡುತ್ತಿದ್ದ.

## ೧೧

ಅನಂತ ಉಪಾಧ್ಯಾಯರು ನಾಲ್ಕಾರು ದಿನಗಳಿಂದ ಹಾಸಿಗೆ ಹಿಡಿ ದ್ದಾರೆ. ಶ್ರೀರಂಗಪಟ್ಟಣಕ್ಕೆ ಬಂದ ಹೊಸದರಲ್ಲೇ ಮಲೇರಿಯಾ ಜ್ವರ ಅವ ರನ್ನು ಬೆನ್ನಟ್ಟಿ ಬಂತು. ಅದು ಅವರಲ್ಲಿ ಮನೆ ಮಾಡಿಕೊಂಡಿತು. ಡಾ|| ಸೋಮೇಗೌಡರು ಔಷಧಿ ಕೊಟ್ಟರೂ ಜ್ವರ ನಿಂತಿರಲಿಲ್ಲ. ಡಾಕ್ಟರು ಬಂದಾಗ ಜ್ವರ ಓಡುತ್ತಿತ್ತು. ಇಲ್ಲದಾಗ ಮತ್ತೆ ಬಂದು ಅವರನ್ನು ಸೇರುತ್ತಿತ್ತು.

ಈ ರೀತಿ ಡಾಕ್ಟರನ್ನು ಆಡಿಸುತ್ತಿತ್ತು. ಈಗ್ಗೆ ಕೆಲವು ವರ್ಷಗಳಿಂದಲೂ ಮರೆತಿದ್ದ ಮಲೇರಿಯಾ ಮತ್ತೆ ಕೆದಕಿದೆ. ರುಕ್ಮಿಣಮ್ಮನವರ ಉಪಚಾರ ದಿಂದ ಸ್ವಲ್ಪ ಗುಣವಾಗಿದ್ದಾರೆ ಅನಂತಯ್ಯನವರು.

ಮಂಡ್ಯದ ಜಿಲ್ಲೆಯ ಡಿ. ಇ. ಓ. ಸಾಹೇಬರ ಸಲಹೆಯ ಮೇಲೆ ಸರ್ಕಾರದವರು ಅನಂತ ಉಪಾಧ್ಯಾಯರನ್ನು ವಾರ್ಧಾ ಶಿಕ್ಷಣ ಸಮ್ಮೇಳ ನಕ್ಕೆ ಕಳುಹಿಸಿದರು. ವಾರ್ಧಾ ಶಿಕ್ಷಣವನ್ನು ಪರಿಶೀಲಿಸಿ ವರದಿಯೊಂದನ್ನು ಒಪ್ಪಿಸುವಂತೆ ಅನಂತಯ್ಯನವರಿಗೆ ಅಪ್ಪಣೆಯಾಯಿತು. ಅನಂತ ಉಪಾಧ್ಯಾ ಯರಿಗೆ ಅಷ್ಟು ಹುಶಾರಿಲ್ಲದಿದ್ದರೂ ಸಮ್ಮೇಳನಕ್ಕೆ ಹೊರಡಲು ತೀರ್ಮಾನಿ ಸಿದರು. ಅಖಿಲಭಾರತ ವಾರ್ಧಾ ಶಿಕ್ಷಣ ಸಮ್ಮೇಳನ ಗಾಂಧಿಜಿಯವರ ಸಮ್ಮುಖದಲ್ಲಿ ಸೇರಿತ್ತು. ವಿದ್ಯಾಕ್ಷೇತ್ರದಲ್ಲಿ ದುಡಿಯುತ್ತಿರುವ ಘಟಾನು ಘಟಿ ವ್ಯಕ್ತಿಗಳಾದ ಪ್ರೊ|| ಹುಮಾಯೂನ್ ಕಬೀರ್, ಡಾ|| ರಾಧಾ ಕೃಷ್ಣನ್, ಅಮರನಾಥ ಷಾ, ಆರ್ಯನಾಯಕಂ, ಆಶಾದೇವಿ, ಸೀತಾದೇವಿ ಯರೂ ಮತ್ತು ಎಲ್ಲೆಡೆಯಿಂದಲೂ ಬಂದ ಪ್ರತಿನಿಧಿಗಳಿದ್ದರಲ್ಲಿ. ಪ್ರೊಫೆಸರ್ ಜಕೀರ್ ಹುಸೇನರು ಅಧ್ಯಕ್ಷತೆಯಲ್ಲಿ ಕುಳಿತಿದ್ದರು. ಗಾಂಧೀಜಿಯವರು ಡಾ|| ಸುಶೀಲಾ ನಾಯರೊಂದಿಗೆ ಬಂದರು. ಅದು ಸೋಮವಾರವಾದ್ದರಿಂದ ಗಾಂಧೀಜಿಯವರು ಮೌನದಲ್ಲಿದ್ದರು. ಅವರು ಬರೆದ ಭಾಷಣವನ್ನು ಜಕೀರ್ ಹುಸೇನರು ಓದಿದರು. ಅನಂತರ ಗಾಂಧೀಜಿಯವರು ತಮ್ಮ ಗುಡಿಸಲಿಗೆ ಎದ್ದು ಹೋದರು. ಸಮ್ಮೇಳನ ಮೂರು ದಿನಗಳು ನಡೆಯಿತು. ಶಿಕ್ಷಣದ ವಿಚಾರವಾಗಿ ಚರ್ಚೆ ನಡೆಸಿತು.

ಗಾಂಧೀ ಶಿಕ್ಷಣ ವಿಚಾರ ಶೇಖರಣೆಯ ಕೆಲಸಕ್ಕೆ ಸರ್ಕಾರದವರು ಅನಂತಯ್ಯನವರನ್ನು ನೇಮಿಸಿದ್ದು. ಅನಂತ ಉಪಾಧ್ಯಾಯರು ಶಿಕ್ಷಣ ಕೇಂದ್ರಕ್ಕೆ ಹೋಗಿ ಅಲ್ಲಿನ ವಿದ್ಯಾಭ್ಯಾಸಕ್ರಮ ನೋಡಿದರು. ವಾರ್ಧಾ ಶಿಕ್ಷಣವೆಲ್ಲಾ ಚರಕದ ಸುತ್ತ ನಿಂತಿದೆ. ಚರಕವನ್ನು ಬಿಟ್ಟರೆ ಶಿಕ್ಷಣವೆಲ್ಲಾ ನೀರಿಲ್ಲದ ಎಳೆನೀರಿನ ಬುರುಡೆಯಂತಾಗುತ್ತದೆ. ಚಿಕ್ಕ ಚಿಕ್ಕ ಹುಡುಗ ರಿಂದಲೇ ಒಂದು ಉದ್ಯೋಗ ಕಲಿಸಿ ಕೊಡುತ್ತಾರೆ. ಪ್ರಜಾಪ್ರಭುತ್ವದಂತೆ ಕೆಳಗಿನಿಂದಲೇ ಶಿಕ್ಷಣ ಮೊದಲಾಗುತ್ತದೆ. ಭೂಗೋಳ ಹೇಳಿಕೊಡಬೇಕಾ ವರೆ ನಮ್ಮ ಸ್ಕೂಲುಗಳಲ್ಲಿ ಏಷ್ಯದಿಂದ ಮೊದಲುಮಾಡಿ ಅನಂತರ ದಕ್ಷಿಣ

ಅಮೆರಿಕಾಕ್ಕೆ ಹಾರಿ ಬಿಡುತ್ತೇವೆ. ನಯಾಗರ ಜಲಪಾತ ಎಲ್ಲಿದೆ, ರೈನ್ ನದಿ ಎಲ್ಲಿ ಹರಿಯುತ್ತದೆ, ಈಜಿಪ್ಟ್ ಹತ್ತಿಗೆ ಹೆಸರುವಾಸಿಯಾಗಿವೆಯೆಂದು ಹೇಳಿ ಕೊಡುತ್ತೇವೆ. ಆದರೆ ವಿದ್ಯಾರ್ಥಿಗೆ ಅವನ ದೇಶದ ರಾಜಧಾನಿಯಾವುವೆಂದರೆ ಗೊತ್ತಿರುವುದಿಲ್ಲ, ಜೋಗ್ ಜಲಪಾತ ಎಲ್ಲಿದೆಯೆಂದರೆ ಪಂಜಾಬಿನಲ್ಲಿ ಎನ್ನುವ ಭೂಪತಿಗಳಿದ್ದಾರೆ. ಪಶ್ಚಿಮಘಟ್ಟಗಳನ್ನು ವ್ಯಾಸಿನಲ್ಲಿ ಬರೆಯಿರಿ ಎಂದರೆ ಗಂಗಾನದಿಯ ಮೇಲೆ ತೇಲಿಸಿರುವ ಗಂಗಾಧರರಿದ್ದಾರೆ. ವಾರ್ಧಾಶಿಕ್ಷಣದಲ್ಲಿ ವಿದ್ಯಾರ್ಥಿಯು ಊರು, ನಾಡು, ದೇಶ ಅನಂತರ ಖಂಡಕ್ಕೆ ಹೋಗುತ್ತಾರೆ. ಹತ್ತಿಯಬೀಜ ಬಿಡಿಸುವುದು, ಹತ್ತಿ ಶುದ್ಧಿ ಮಾಡುವುದು ಅನಂತರ ನೂಲು ತೆಗೆಯುವುದನ್ನು ಹೇಳಿಕೊಡುತ್ತಾರೆ. ಹತ್ತಿ ಬೆಳೆಯಬೇಕಾದರೆ ನೆಲ ಹೇಗಿರಬೇಕೆಂಬ ಭೂಗೋಳ ಜೊತೆಗೆ ಬರುತ್ತದೆ. ಅವನ ಜಿಲ್ಲೆಯಲ್ಲಿ ನಾಡಿನಲ್ಲಿ ಎಲ್ಲೆಲ್ಲಿ ಹತ್ತಿ ಬೆಳೆಯುತ್ತಾರೆಂಬುದನ್ನು ಹೇಳಿಕೊಡುತ್ತಾರೆ. ಪಾಠ ಮಾಡಬೇಕಾದರೆ ಅಕ್ಷರ ಕಲಿಸದೆ ನೇರವಾಗಿ ಪದಗಳಿಗೇ ಹೋಗುತ್ತಾರೆ.

ಶಿಕ್ಷಣ ವಿಚಾರವನ್ನೆಲ್ಲಾ ಶೇಕರಿಸಿದರು ಅನಂತ ಉಪಾಧ್ಯಾಯರು. ಅವರ ಜೊತೆಗೆ ಬಂದ ಇತರ ಉಪಾಧ್ಯಾಯರುಗಳು ಮೈಸೂರಿಗೆ ಹಿಂತಿರುಗಿದರು. ಅನಂತಯ್ಯನವರು ವಾರ್ಧಾಕ್ಕೆ ನೂರೇ ಮೈಲಿಯಿದ್ದ ಕಾರಂಜಕ್ಕೆ ಹೊರಟರು. ಅಲ್ಲಿನ ಮಹಾವೀರ ಬ್ರಹ್ಮಚರ್ಯಾಶ್ರಮವೂ ಹೆಸರಾದಂತ ವಿದ್ಯಾ ಕೇಂದ್ರವಾಗಿತ್ತು. ಅದು ಧರ್ಮಕ್ಷೇತ್ರ ಬೇರೆಯಾಗಿತ್ತು. ಅಲ್ಲಿನ ಆಶ್ರಮ ನೋಡಲು, ಪಚ್ಚೆ, ಮುತ್ತು, ರತ್ನಗಳಿಂದ ಮಾಡಿದ ತೀರ್ಥಂಕರುಗಳ ದರ್ಶನ ಮಾಡಲು ಬಂದರು.

ಮಹಾವೀರಾಶ್ರಮದಲ್ಲಿ ಅನಂತಯ್ಯನವರಿಗೆ ಅಕಳಂಕರು ಆದೇ ಸ್ವಾಗತವಿಟ್ಟರು. "ವಾರ್ಧಾ ಶಿಕ್ಷಣಕ್ರಮದ ವಿಚಾರ ಶೇಕರಣೆಗಾಗಿ ಬಂದಿದ್ದು ಅಲ್ಲಿನ ಕೆಲಸ ಮುಗಿಸಿಕೊಂಡು ನಿಮ್ಮಲ್ಲಿಗೆ ಬಂದೆ ಇಲ್ಲಿನ ಶಿಕ್ಷಣ ಕ್ರಮ ನೋಡಲು" ಎಂದರು ಅನಂತಯ್ಯನವರು. ತಮ್ಮ ಕೊಠಡಿಗೆ ಅಕಳಂಕರು ಅನಂತಯ್ಯನವರನ್ನು ಕರೆದುಕೊಂಡು ಹೋದರು. ಅಭಯನನ್ನು ಕರೆದು ಅನಂತಯ್ಯನವರನ್ನು ಸ್ನಾನಕ್ಕೆ ಕರೆದುಕೊಂಡು ಹೋಗುವಂತೆ ಹೇಳಿದರು. ಅನಂತಯ್ಯನವರನ್ನು ನೋಡಿದಾಗ ಅವರಿಗೆ ಮುಖ

ತೋರಿಸಲು ಅಭಯನಿಗೆ ನಾಚಿಕೆಯಾಯಿತು. ಅಕಳಂಕರ ಮುಂದೆ ಅನಂತಯ್ಯನವರು ಏನೂ ಮಾತನಾಡಲಿಲ್ಲ. ಅಭಯನ ಸಂಗಡ ಏತದ ಭಾವಿಯ ಹತ್ತಿರ ಬಂದರು.

"ಏನೋ ಅಭಯ ಹೀಗೆ ಮಾಡಿಬಿಟ್ಟೆ; ನಿಮ್ಮ ತಾಯಿ ನಿನ್ನ ಕೊರಗಿನಲ್ಲೇ ಅರ್ಧ ಆಗಿಬಿಟ್ಟವರಲ್ಲೊ."

"ನನಗೆ ಆ ವಿಮಲೆಯನ್ನು ಮದ್ವೆ ಆಗಲು ಇಷ್ಟವಿಲ್ಲ ಸಾರ್."

"ಇಷ್ಟವಿಲ್ಲದಿದ್ದರೆ ಇಲ್ಲಿಗೆ ಓಡಿಬರಬೇಕೇನು."

"ಇನ್ನೇನ್ಮಾಡೋದು ಸಾರ್, ಎಷ್ಟು ಹೇಳಿದರೂ ಮನೆಯವರು ಕೇಳುವುದೇಯಿಲ್ಲ."

"ಈಗ ನಡಿ ಹೋಗೋಣ ಊರಿಗೆ, ನಿನ್ನ ಇಷ್ಟ ಬಂದವಳನ್ನೇ ಮದ್ವೆ ಆಗುವೆ; ಅವನು ಬಂದರೆ ಸಾಕು ಎಲ್ಲಿಯಾದರೂ ಮದ್ವೆಆಗ್ಲಿ ಎನ್ನುತ್ತಿದಾರೆ ನಿಮ್ಮ ತಾಯಿ" ಎಂದರು ಅನಂತಯ್ಯನವರು.

ವಿಚಾರವನ್ನೆಲ್ಲಾ ಅಕಳಂಕರಿಗೆ ಅನಂತಯ್ಯನವರು ಹೇಳಿದರು. ಅಕಳಂಕರು ಅಭಯನಿಗೆ ಉಪದೇಶ ಹೇಳಿ ಮನೆಗೆ ಹಿಂತಿರುಗುವಂತೆ ಹೇಳಿದರು. ಅನಂತಯ್ಯನವರ ಜೊತೆಗೆ ಬರಲು ಅಭಯ ಒಪ್ಪಿದ.

ಮುಂಬಯಿ ಮುಖಾಂತರ ಅನಂತ ಉಪಾಧ್ಯಾಯರು ಊರಿಗೆ ಬಂದರು. ಜೊತೆಗೆ ಅಭಯನೂ ಇದ್ದ. ಮನೆಗೆ ಬಂದರೆ ರುಕ್ಮಿಣಮ್ಮನವರೂ ಗುಣಾವತಮ್ಮನವರೂ ಮಾತನಾಡುತ್ತ ಕುಳಿತಿದ್ದರು ಅಭಯ ತನ್ನ ಮನೆಗೆ ಹೋಗದೆ ಉಪಾಧ್ಯಾಯರ ಮನೆಯಲ್ಲೇ ಉಳಿದನು. ಅಲ್ಲಿ ತಾಯಿ ಕುಳಿತಿದ್ದರೂ ನೋಡದೆ ಮಾಸ್ತರ ರೂಮಿಗೆ ಹೋಗಿ ಕುಳಿತನು. ಗುಣಾವತಮ್ಮನವರೇ ರೂಮಿಗೆ ಬಂದು "ಏನೋ ಅಭೀ ಏನ್ಮಾಡ್ಬಿಟ್ಟ್ಯೋ" ಎಂದರು. ಮಾತನಾಡದೆ ತಾಯಿಯ ಪಾದಗಳಿಗೆರಗಿದನು. ಅವನನ್ನು ಮೇಲೆತ್ತಿ ತಲೆಸವರಿ ಮನೆಗೆ ಕರೆದುಕೊಂಡು ಹೋದರು.

ನಾಭಿರಾಜಯ್ಯನವರು ಹೆಚ್ಚಿಗೆ ಏನನ್ನೂ ಮಾತನಾಡಲಿಲ್ಲ. ಚೆಂದಪ್ಪನವರು ಈಗ ಅಲ್ಲಿ ಇಲ್ಲ. ಮಗನ ಮನೆ ಅನಾಚಾರನೋಡಿ ಅವರಿಗೆ ಬೇಸರವಾಯಿತಂತೆ. ಆದ್ದರಿಂದ ಹಾಸನದಲ್ಲಿದ್ದ ಅವರ ಎರಡನೆಯ ಮಗ ಬ್ರಹ್ಮ ಮನೆಗೆ ಹೊರಟು ಹೋಗಿದ್ದರು.

"ನಿಮ್ಮ ಮಗ ಬಂದಿದಾನೇಂದ್ರೆ, ಏನೂ ರೇಗಬೇಡಿ, ಇನ್ನೆಲ್ಲಾದ್ರೂ ಹೊರಟೋಗ್ಬಿಟ್ಟಾನು" ಎಂದರು ಗುಣಾವತಮ್ಮನವರು.

"ಅವನೆಲ್ಲಾದ್ರೂ ಮದ್ವೆ ಆಗ್ಲಿ, ನಾನು ಬೇಡಾನ್ನಲ್ಲ" ಅಂದರು ನಾಭಿರಾಜಯ್ಯನವರು.

ಸುಬ್ಬಮ್ಮನವರು ವೈಕುಂಠಯಾತ್ರೆಗೆ ಹೋಗಿ ಬಹಳ ದಿನಗಳಾಗಿತ್ತು. ಶ್ರೀಕಂಠಯ್ಯನವರಿಗೆ ಅದರ ದುಃಖ ಕೆಲವು ದಿನಗಳು ಇತ್ತು. ಸುಬ್ಬಮ್ಮನವರ ಸಾವು ರತ್ನಮಾಲೆಯ ರಸ್ತೆಯಲ್ಲಿದ್ದ ಅಡ್ಡಗೋಡೆಯೊಂದು ಕಡಿದು ಹೋದಂತಾಯಿತು,

## ಪಕ್ಷಿ ಹಾರಿಯೇ ಹೋಯಿತು

ಪ್ರವಾಸ ಉಪಾಧ್ಯಾಯರ ಶರೀರದ ಸ್ಥಿತಿಯನ್ನು ಕುಗ್ಗಿಸಿತು. ಮಾಸ್ತರು ಮಲಗಿದರು. ರಜಕ್ಕೆ ಬರೆದರೆ ಸಂಬಳವಿಲ್ಲದ ರಜವನ್ನು ಕರುಣಾವೃತಿ ರಾಮಾಶಾಸ್ತ್ರಿಗಳು 'ಗ್ರಾಂಟ್' ಮಾಡುವುದಾಗಿ ತಿಳಿಸಿದರು. ಮೇಲಿನ ಅಧಿಕಾರಿಗಳಿಗೆ ಅನಂತಯ್ಯನವರು ಕಾಗದ ಬರೆಯಲು ಹೋಗಲಿಲ್ಲ. ಖಾಯಿಲೆಯಿದ್ದರೂ ಸ್ಕೂಲಿಗೆ ಬಂದು ಹೋಗುತ್ತಿದ್ದರು. ಪಾಠ ಮಾಡುತ್ತಾ ಮಾಡುತ್ತಾ ಒಂದು ದಿನ ಜ್ಞಾನತಪ್ಪಿ ಕೆಳಗೆ ಬಿದ್ದರು. ಡಾ|| ಸೋಮೇಗೌಡರನ್ನು ಹುಡುಗರು ಕರೆತಂದರು. ಪರೀಕ್ಷಿಸಿ ಒಂದೆರಡು ತಿಂಗಳು ಪೂರ್ಣ ವಿರಾಮ ತೆಗೆದುಕೊಳ್ಳಬೇಕಾಗಿ ಡಾಕ್ಟರು ಸಲಹೆ ನೀಡಿದರು.

ಅನಂತ ಉಪಾಧ್ಯಾಯರು ಹಾಸಿಗೆ ಹಿಡಿದು ತಿಂಗಳಾಗಿದೆ. ಮನೆಯಲ್ಲಿ ಪಾತ್ರೆಗಳಿಗೆ ಬದಲಾಗಿ ಮಡಕೆಗಳದಾವೆ. ಎಲ್ಲವನ್ನೂ ಸೀನಕ್ಕನಿಗೆ ಒತ್ತೆಯಾಗಿಟ್ಟು ಅಕ್ಕಿ ಕೊಂಡಿದ್ದಾರೆ ರುಕ್ಮಿಣಮ್ಮನವರು. ರತ್ನಮಾಲೆ ಮನೆಯಿಂದ ಬೇಳೆ ತರಕಾರಿಗಳನ್ನು ತಂದುಕೊಡುತ್ತಿದ್ದಳು; ಗುಣಾವತಮ್ಮನವರ ಮನೆಯಿಂದ ಮಜ್ಜಿಗೆ ಬರುತ್ತಿತ್ತು. ಬಾಬು ಸುಕನ್ಯೆಯರು ಹಾಲು ಮೊಸರುಗಳನ್ನು ಕಂಡು ಎಷ್ಟು ದಿನಗಳಾಯಿತೋ. ಆ ಮಕ್ಕಳ ಬಡ ಶರೀರ ನೋಡಿ ಮಾಸ್ತರು ಇನ್ನೂ ಬಡವಾದರು. ಮಾಸ್ತರಿಗೆ ಊಟ ತಿಂಡಿಗಳೆಲ್ಲಾ ಹಾಸಿಗೆಯ ಮೇಲೆ ಕುಳಿತೇ ಆಗುತ್ತಿತ್ತು. ರುಕ್ಮಿಣಮ್ಮನವರು ಸದಾ ಯಜಮಾನರ ತಲೆದಿಂಬಿನ ಹತ್ತಿರ ಕುಳಿತಿರುತ್ತಾರೆ. ಅವರ ಊಟ ಮೂರು ದಿನಕ್ಕೊಮ್ಮೆ, ರಾತ್ರಿಯೆಲ್ಲಾ ಜಾಗರಣೆ.

ಫೌಂಟನ್ನಿನ ಹತ್ತಿರ ಇಬ್ಬರು ನಿಂತು ಜಗಳವಾಡುತ್ತಿದ್ದಾರೆ. "ಬಸ್ತೀಗುಡಿಗೆ ಹೋಗೋಣ ನಡಿ" ಎಂದು ರತ್ನಮಾಲೆ, "ಇಲ್ಲ, ಇಲ್ಲ

ರಂಗನಾಥನ ಗುಡಿಗೆ ಹೋಗೋಣ ಬಾ" ಎಂದು ಅಭಯ. ಇಬ್ಬರೂ ಮದುವೆಯಾಗಲು ಒಪ್ಪಿದ್ದಾರೆ. ಗುಡಿಯಲ್ಲಿ ದೇವರ ಮುಂದೆ ವಚನ ತೆಗೆದುಕೊಳ್ಳಲು ಬಂದಿದ್ದಾರೆ. ಯಾವ ಗುಡಿಗೆ ಹೋಗಬೇಕೆಂಬುದು ತೀರ್ಮಾನವಾಗದೆ ಅಲ್ಲಿಯೇ ನಿಂತು ಕಚ್ಚಾಡುತ್ತಿದ್ದಾರೆ. ಸ್ವಲ್ಪ ಹೊತ್ತು ಕಚ್ಚಾಡಿದರು. ಅನಂತರ "ಅಯ್ಯೋ ಮಂಕೆ ಆ ಗುಡಿಗಳಲ್ಲೇನಿದೆ; ನಮ್ಮ ಗುಡಿಯಿರುವುದು ಪೂರ್ಣಯ್ಯನ ಬೀದಿಯಲ್ಲಿ ಅಲ್ಲಿಗೆ ಹೋಗೋಣ ನಡಿ" ಎಂದ ಅಭಯ.

ರತ್ನಮಾಲೆ ಅಭಯ ಕುಮಾರರಿಬ್ಬರೂ ಅನಂತ ಉಪಾಧ್ಯಾಯರ ಮನೆಗೆ ಬಂದರು. ಅಲ್ಲಿ ರುಕ್ಮಿಣಮ್ಮನವರು ಬೀಸಣಿಗೆಯಿಂದ ಅನಂತಯ್ಯನವರಿಗೆ ಗಾಳಿಬೀಸುತ್ತಿದ್ದರು. "ರುಕ್ಕು ಆ ಕೆಂಪು ರಟ್ಟಿನ ಪುಸ್ತಕ ತೆಗೆದುಕೋ" ಎಂದು ಆದಿಕವಿಯ ಆದಿಪುರಾಣ ತೆಗೆಸಿಕೊಂಡು ಮೋಕ್ಷ ಕಲ್ಯಾಣ ಓದುವಂತೆ ಹೇಳಿದರು. ರುಕ್ಮಿಣಮ್ಮನವರ ಕಣ್ಣಿನಲ್ಲಿ ನೀರು ತುಂಬಿತು. ಅಕ್ಷರಗಳೇ ಕಾಣಲಿಲ್ಲ. ಅವರ ಕಷ್ಟ ನೋಡಿ ಪುಸ್ತಕವೂ ಅಳುತ್ತಿದೆಯೋನ್ನುವಂತೆ ರುಕ್ಮಿಣಮ್ಮನವರ ಕಣ್ಣೀರು ಪುಸ್ತಕದ ಮೇಲೆ ಹರಿದುಹೋಗುತ್ತಿತ್ತು.

ಅಭಯಕುಮಾರ ರತ್ನಮಾಲೆಯಿಬ್ಬರು ಉಪಾಧ್ಯಾಯರ ಅಕ್ಕಪಕ್ಕದಲ್ಲಿ ನಿಂತರು. ಇಬ್ಬರ ಕೈಗಳನ್ನೂ ತೆಗೆದುಕೊಂಡು ಒಬ್ಬರಲ್ಲಿ ಇನ್ನೊಬ್ಬರ ಕೈಯನ್ನಿಟ್ಟು "ನಿರ್ಮಲ ಪ್ರೇಮಕ್ಕೆ ಕೋಮಿನ ಕಟ್ಟಿಲ್ಲ, ಜಾತಿಯ ಜಾಡ್ಯವಿಲ್ಲ; ನೀವಿಬ್ಬರೂ ಒಟ್ಟಾಗಿ ಬಾಳಿ ನಿಮ್ಮ ಬಾಳನ್ನು ಸೇವೆಯಲ್ಲಿ ಕಳೆಯಿರಿ; ನಿಷ್ಕಾಮ ಸೇವೆಯೇ ನಿಮ್ಮ ಜೀವನದ ಗುರಿಯಾಗಲಿ" ಎಂದರು ಮಾಸ್ತರು. ಅಷ್ಟರಲ್ಲಿ "ಇದೇನು ಮೇಷ್ಟರ ಕೈ ತಣ್ಣಗಿವೆ, ಚಳಿಯಿರಬೇಕು—ರಗ್ಗು ಹೊದ್ದಿಸು ಅಭಯ" ಎಂದಳು ರತ್ನಮಾಲೆ. ಹಣೆ ಕಾಲುಗಳನ್ನು ಮುಟ್ಟಿ ನೋಡಲು ಅವುಗಳೂ ತಣ್ಣಗಿದ್ದವು. ಗುಣಾವತಮ್ಮನವರು "ನಮೋ ಅರ್ಹಂತಾಣಾಂ; ನಮೋ ಸಿದ್ಧಾಣಾಂ" ಎಂದು ಪಂಚ ನಮಸ್ಕಾರಗಳನ್ನು ಹೇಳುತ್ತಿದ್ದರು. ರುಕ್ಮಿಣಮ್ಮನವರು ಕಿಟ್ಟನೆ ಕಿರಿಚಿದರು. ಅಷ್ಟುಹೊತ್ತಿಗಾಗಲೇ ಅನಂತ ಉಪಾಧ್ಯಾಯರ ನಿಷ್ಕಳಂಕ ಆತ್ಮ ಅಮರತ್ವವನ್ನು ಹೊಂದಿ ಅಂಬರದ ಕಡೆ ತೆರಳಿ ಬ್ರಹ್ಮನಲ್ಲಿ ಸೇರಿಹೋಗಿತ್ತು.